ಸಂಪುಟ: 13 Volume | ಸಂಚಿಕೆ: 327 Issue | ಪುಟಗಳು 08 Pages | ಮಂಗಳವಾರ 17 ಫೆಬ್ರವರಿ 2026 | ₹6 | PRGINO.120927 (RNINO:KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

**ಬೆಳಗು**

ಯಶಸ್ಸು ಸದಾ ಇರಬೇಕೆಂದರೆ ವಿನಯದಿಂದಿರಿ. ಕೀರ್ತಿ ಅಥವಾ ಹಣ ತಲೆಗೆ ಹತ್ತದಂತೆ ನೋಡಿಕೊಳ್ಳಿ.

–ಎ.ಆರ್.ರೆಹಮಾನ್

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಬಿಜೆಪಿ ಕಚೇರಿಯಲ್ಲಿ ಸೇವಾಲಾಲ ಜಯಂತಿ 6

ಗಮನ ಸೆಳೆದ ಶಿವರಾತ್ರಿ ಸಾಂಸ್ಕೃತಿಕ ಉತ್ಸವ 7

ಅಕ್ಕಮಹಾದೇವಿ ಕದಳಿ ವನ ವೇದಿಕೆ ಉದ್ಘಾಟನೆ 8

## ಪತ್ರಕರ್ತರಿಗೆ ಹೌಸಿಂಗ್ ಬೋರ್ಡ್ ನಿವೇಶನಕ್ಕೆ ಮನವಿ



**ಬೆಂಗಳೂರು:** ಪತ್ರಕರ್ತರಿಗೆ ಹೌಸಿಂಗ್ ಹೋರ್ಡ್/ನಗರಾಭಿವೃದ್ದಿ ಪ್ರಾಧಿಕಾರ, ಸ್ಥಳೀಯ ಸಂಸ್ಥೆಗಳಲ್ಲಿ ಹಂಚಿಕೆ ಮಾಡುವ ನಿವೇಶನ/ಮನೆಗಳಲ್ಲಿ ಶೇ.5ರಷ್ಟು ಮೀಸಲಿಡಬೇಕೆಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಒತ್ತಾಯಿಸಿದ್ದಾರೆ. ಈ ಕುರಿತು ಸರ್ಕಾರದ ಗಮನಕ್ಕೆ ತರಲು ಮನವಿ ಪತ್ರವನ್ನು ಸಿಎಂ ಮಾಧ್ಯಮ ಸಲಹೆಗಾ ಕೆ.ವಿ.ಪ್ರಭಾಕರ್, ವಸತಿ ಸಚಿವ ವಿಶೇಷಾಧಿಕಾರಿ ಎಸ್.ಲಕ್ಷ್ಮಿನಾರಾಯಣ್ ಅವರಿಗೆ ಸಲ್ಲಿಸಿದ್ದಾರೆ. ರಾಜ್ಯ ಕಾರ್ಯದರ್ಶಿ ಸೋಮಶೇಖರ್ ಕೆರಗೋಡು, ಚೆಲುವರಾಜು ಇದ್ದರು.

## ಕೋರ್ಟ್‌ಗಳಿಗೆ ಹುಸಿ ಬಾಂಬ್ ಬೆದರಿಕೆ

• ಮಲ್ಲಮ್ಮ ನುಡಿ ವಾರ್ತೆ ಧಾರವಾಡ/ಮಂಡ್ಯ/ಹಾವೇರಿ/ ದಾವಣಗೆರೆ





ರಾಜ್ಯದ ಧಾರವಾಡ, ಮಂಡ್ಯ, ಹಾವೇರಿ,ಮಂಡ್ಯ ಹಾಗೂ ದಾವಣಗೆರೆ ಸೇರಿ ಹಲವು ಜಿಲ್ಲೆಗಳ ನ್ಯಾಯಾಲಯಗಳಿಗೆ ದುಷ್ಕರ್ಮಿಗಳು ಹುಸಿ ಬಾಂಬ್ ಬೆದರಿಕೆ ಹಾಕಿದ್ದಾರೆ. ಈ ಮೇಲ್‌ಗಳ ಮೂಲಕ ಬಂದ ಬೆದರಿಕೆ ಪತ್ರಕ್ಕೆ ತಕ್ಷಣ ಅಲರ್ಟ್ ಆದ ಪೊಲೀಸ್ ಇಲಾಖೆ, ಬಾಂಬ್ ನಿಷ್ಕ್ರಿಯ ದಳದ ಮೂಲಕ ತಪಾಸಣೆ ನಡೆಸಿದಾಗ ಅಸಲಿಯತ್ತು ಬಯಲಾಗಿದೆ.

ಕರ್ನಾಟಕ ಹೈಕೋರ್ಟ್‌ನ ಧಾರವಾಡ ಪೀಠ, ಮಂಡ್ಯದ ಜಿಲ್ಲಾ ನ್ಯಾಯಾಲಯಕ್ಕೆ ಹುಸಿ ಬಾಂಬ್ ಬೆದರಿಕೆ ಇಮೇಲ್ ಕಳುಹಿಸಲಾಗಿದೆ. ಅಧಿಕಾರಿಗಳು ವ್ಯಾಪಕ ಶೋಧಕಾರ್ಯ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಧಾರವಾಡ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ನ್ಯಾಯಾಲಯದ ಕಟ್ಟಡಗಳಿಂದ ವಕೀಲರು ಮತ್ತು ಸಿಬ್ಬಂದಿಯನ್ನು ತೆರವುಗೊಳಿಸಲಾಗಿದೆ. ಭದ್ರತಾ ಸಿಬ್ಬಂದಿ ಆವರಣವನ್ನು ಸುತ್ತುವರಿದು ಸಂಪೂರ್ಣ ತಪಾಸಣೆ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

## ಶಾಸಕನ ಆಯ್ಕೆಯೇ ಅಸಿಂಧು..!

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು




ಕಾಂಗ್ರೆಸ್‌ಗೆ ಭಾರಿ ಹಿನ್ನಡೆಯುಂಟಾಗುವ ಆದೇಶವೊಂದು ಹೈಕೋರ್ಟ್ ನಿಂದ ಹೊರಬಿದ್ದಿದೆ. ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಸ್.ಎನ್. ಸುಬ್ಬಾರೆಡ್ಡಿ ಆಯ್ಕೆ ಅಸಿಂಧುಗೊಳಿಸಿ ಕರ್ನಾಟಕ ಹೈಕೋರ್ಟ್ ಆದೇಶ ಪ್ರಕಟಿಸಿದೆ.

2023ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಪರಾಭವಗೊಂಡಿದ್ದ ಬಿಜೆಪಿಯ ಅಭ್ಯರ್ಥಿ ಸಿಮುನಿರಾಜು ಸಲ್ಲಿಸಿದ್ದ ತಕರಾರು ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ಜಿ.ಎಸ್.ಕಮಲ್ ಅವರಿದ್ದ ಪೀಠ, ಚುನಾವಣಾ ಅಕ್ರಮಗಳ ಹಿನ್ನೆಲೆಯಲ್ಲಿ ಎಸ್.ಎನ್. ಸುಬ್ಬಾರೆಡ್ಡಿ ಆಯ್ಕೆ ಅಸಿಂಧುಗೊಳಿಸಿ ಆದೇಶ ನೀಡಿದೆ.

# ಕಾಂಗ್ರೆಸ್ ಬಿಜೆಪಿ ಚಕಮಕಿ

## ಸಚಿವ ಪ್ರಿಯಾಂಕ್ ವಿರುದ್ಧ ಸುನಿಲ್, ವಿಜಯೇಂದ್ರ ಕೆಂಡಾಮಂಡಲ | ಕದನ ಕುತೂಹಲ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ

ರಾಜ್ಯ ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ಪರಸ್ಪರ ಚಕಮಕಿ–ನೇರಾ ನೇರ ನಿಂದನೆಯ ವರಸೆ ಶುರುವಾಗಿದೆ. ವಿಶೇಷವಾಗಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಬಿಜೆಪಿ ದೆವ್ವವಾದರೆ ಆರೆಸ್ಸೆಸ್ ಅದರ ನೆರಳು. ನೆರಳಿನ ಬದಲು ದೆವ್ವದ ಜೊತೆ ಗುದ್ದಾಡಿ ಎಂದು ಟೀಕಾ ಪ್ರಹಾರ ನಡೆಸಿದ್ದರು. ಇದಕ್ಕೆ ಕೆಂಡಾಮಂಡಲವಾಗಿರುವ ಬಿಜೆಪಿ ಶಾಸಕ ಸುನೀಲ್ ಕುಮಾರ್–ರಿಪಬ್ಲಿಕ್‌ನ ಈ ಸರ್ವಾಧಿಕಾರಿಯನ್ನು ಎರಡು ಬಾರಿ ಐಟಿ–ಬಿಟಿ ಸಚಿವನನ್ನಾಗಿ ಮಾಡಿದ್ದು, ಆಡುವ ಮಕ್ಕಳಿಗೆ ಮದುವೆ ಮಾಡಿದಂತಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಹರಿಹಾಯ್ದಿದ್ದಾರೆ.

**ಸಚಿವರ ಪೋಸ್:** ಸಚಿವ ಪ್ರಿಯಾಂಕ್ ಖರ್ಗೆ ಕಲಬುರ್ಗಿಯನ್ನು ಸಿಲಿಕಾನ್ ಸಿಟಿ ಮಾಡಿದವರಂತೆ ಪೋಸು ಕೊಡುತ್ತಿದ್ದಾರೆ. ಆದರೆ ವಾಸ್ತವದಲ್ಲಿ ಇವರು ಅಧಿಕಾರಕ್ಕೆ ಬಂದ ನಂತರ ಇಡಿ ಕಲಬುರ್ಗಿ ವಿಭಾಗವೇ ಸುಡಾನ್ ದೇಶದ ರೀತಿ ಅಭಿವೃದ್ಧಿಯಲ್ಲಿ ಹಿಂದೆ ಬಿದ್ದಿದೆ ಎಂದಿದ್ದಾರೆ ಎಂದು ದೂರಿದ್ದಾರೆ.



### ಈದಿ ಅಮೀನ್ ಮಾದರಿ..!

ಸ್ವಾಮಿ ಪ್ರಿಯಾಂಕ್, ನೀವು, ನಿಮ್ಮ ಪಿತಾಶ್ರೀಯವರ 70ವರ್ಷದ ಸರ್ವಾಧಿಕಾರದಿಂದಾಗಿ ಕಲ್ಬುರ್ಗಿ ವಿಭಾಗದ ಜಿಲ್ಲೆಗಳು ರಕ್ತಕಣ್ಣೀರು ಸುರಿಸುತ್ತಿವೆ. ತಲಾದಾಯ, ಶಿಕ್ಷಣದಲ್ಲಿ ಈ ವಿಭಾಗ ರಾಜ್ಯದಲ್ಲೇ ಕನಿಷ್ಠ ಸ್ಥಾನದಲ್ಲಿದೆ. ಇದಕ್ಕೆ ನಿಮ್ಮ ಆಡಳಿತ ಕಾರಣವಲ್ಲವೇ? ಈದಿ ಅಮಿನ್ ಮಾದರಿಯಲ್ಲಿ ಜನತೆಯ ಜೀವ ಹೀರುವ ದೆವ್ವಗಳಾಗಿದ್ದೀರಿ ಎಂದಿದ್ದಾರೆ ಸುನಿಲ್‌ಕುಮಾರ್.

### ದೇಶಕಟ್ಟುವ ಆರೆಸ್ಸೆಸ್

ಪ್ರಿಯಾಂಕ್ ಅವರ ಆರೆಸ್ಸೆಸ್ ಕುರಿತ ಅಭಿಪ್ರಾಯವನ್ನು ದ್ವೇಷ, ಹತಾಶೆ ಅಥವಾ ಬಾಲಿಶತನ, ಅವಿವೇಕತನದ ಹೇಳಿಕೆ ಎಂದು ಕರೆಯಬಹುದು; ಜನರು ಗ್ರಾಮೀಣ ಭಾಷೆಯಲ್ಲಿ ತಲೆಹರಟೆ ಎಂದು, ಉಡಾಫೆ ಎಂದು ಕರೆಯುತ್ತಾರೆ. ಆರೆಸ್ಸೆಸ್‌ನ 100 ವರ್ಷದ ಸಾಧನೆ, ಸಮಾಜ ಕಟ್ಟುವಲ್ಲಿ ಆರೆಸ್ಸೆಸ್ಸಿನ ಸಮರ್ಪಣಾ ಭಾವ, ದೇಶ ಕಟ್ಟುವ ಪಾತ್ರವನ್ನು ಅರಿಯಬೇಕು ಎಂದಿದ್ದಾರೆ ವಿಜಯೇಂದ್ರ.

### ಛಲವಾದಿ ವಿರುದ್ಧ ಕಿಡಿ

ಈ ಛಲವಾದಿ ನಾರಾಯಣ ಸ್ವಾಮಿ ನಾಯಿ ಥರ.. ಪಾಪ ಬೊಗಳಿದೆ, ಅದಕ್ಕೆ ನಾವೇನೂ ಕಲ್ಲು ಎಸೆಯಲು ಹೋಗೋದಿಲ್ಲ. ಈತನನ್ನು ಬಿಜೆಪಿಯವರು ಯಾಕೆ ಕರೆಯುತ್ತಾರೋ..! ಎಂದು ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ವಿಧಾನಪರಿಷತ್ ಪ್ರತಿ ಪಕ್ಷ ನಾಯಕ ನಾರಾಯಣ ಸ್ವಾಮಿ ನೀಡಿದ ಹೇಳಿಕೆಗೆ ಪುತ್ತೂರಲ್ಲಿ ತಿರುಗೇಟು ನೀಡಿದ್ದಾರೆ.

### ಚರ್ಚೆಗಾಗಿ ಸವಾಲ್

ಶಿವಮೊಗ್ಗದ ಬಗ್ಗೆಯೂ ಪ್ರಿಯಾಂಕ್ ಸವಾಲು ಹಾಕಿದ್ದಾರೆ. 50 ವರ್ಷದಲ್ಲಿ ಕಲ್ಯಾಣ ಕರ್ನಾಟಕ ಯಾವ ರೀತಿ ಅಭಿವೃದ್ಧಿ ಆಗಿದೆ? ಯಡಿಯೂರಪ್ಪ ಅವರ ನೇತೃತ್ವದ ಬಿಜೆಪಿ ಸರಕಾರದ ಅವಧಿಯಲ್ಲಿ ಜಿಲ್ಲೆ ಎಷ್ಟು ಅಭಿವೃದ್ಧಿ? ಬಿಎಸ್‌ವೈ ಸಿಎಂ ಆಗಿದ್ದಾಗ ಗುಲ್ಬರ್ಗ ಜಿಲ್ಲೆಗೆ ಎಷ್ಟು ಅನುದಾನ ಕೊಟ್ಟಿದ್ದಾರೆ ಎಂಬ ಬಗ್ಗೆ ಚರ್ಚಿಸಲು ಸಿದ್ಧ ಎಂದು ಸವಾಲ್ ಹಾಕಿದ್ದಾರೆ ವಿಜಯೇಂದ್ರ.

### ರಾಷ್ಟ್ರಗೀತೆ ಅಸಾಧ್ಯ



ದೇಶದಲ್ಲಿ ಎಲ್ಲಾ ಧರ್ಮೀಯರಿದ್ದು, ವಂದೇ ಮಾತರಂ ರಾಷ್ಟ್ರಗೀತೆ ಆಗಲು ಸಾಧ್ಯವಿಲ್ಲ ಎಂದು ಎಂಎಲ್ಸಿ ಬಿ.ಕೆ ಹರಿಪ್ರಸಾದ್ ತಿಳಿದ್ದಾರೆ. ವಂದೇ ಮಾತರಂ ಹೇಳಿ ರಾಷ್ಟ್ರಗೀತೆಯನ್ನು ಡಿಪ್ರಮೋಟ್ ಮಾಡಲು ಕೇಂದ್ರ ಯತ್ನಿಸಿದೆ. ಗೋಳವಲ್ಕರ್ ಒಂದು ದಿನವೂ ರಾಷ್ಟ್ರ ಗೀತೆಯನ್ನು ಅವರ ಸಂಘದಲ್ಲಿ ಹಾಡಿಲ್ಲ. ಅದೇ ಕಾರಣಕ್ಕೆ ಈಗ ಕಡ್ಡಾಯ ಮಾಡಿದ್ದಾರೆ ಎಂದಿದ್ಧಾರೆ.

## ರಸ್ತೆ ಗುಂಡಿಗೆ ಮಹಿಳೆ ಬಲಿ

**ಬೆಂಗಳೂರು:** ರಾಜಧಾನಿಯ ಹದಗೆಟ್ಟ ರಸ್ತೆಗಳು, ರಸ್ತೆ ಗುಂಡಿಗಳ ಬಗ್ಗೆ ಪದೇ ಪದೇ ಎಚ್ಚರಿಸುತ್ತ ಇದ್ದರೂ ಸಂಬಂಧಪಟ್ಟ ಅಧಿಕಾರಿಗಳು ಮಾತ್ರ ಎಚ್ಚೆತ್ತುಕೊಳ್ಳುತ್ತಿಲ್ಲ. ಆನೆಪಾಳ್ಯ ಮೂಲದ 49 ವರ್ಷದ ಅಮಲಾ ಎನ್ನುವವರು ನಿನ್ನೆ ಬೈಕ್ನಲ್ಲಿ ತೆರಳುತ್ತಿದ್ದಾಗ ರಸ್ತೆಯಲ್ಲಿ ಬೃಹತ್ ಗುಂಡಿಯೊಂದು ಎದುರಾಗಿದೆ. ಗುಂಡಿಯನ್ನು ತಪ್ಪಿಸಲು ಹೋಗಿ ಆಯತಪ್ಪಿ ಕೆಳಗೆ ಬಿದ್ದಿದ್ದಾರೆ. ಅಮಲಾ ಅವರ ಕಾಲಿನ ಮೇಲೆ ಹಿಂದಿನಿಂದ ವೇಗವಾಗಿ ಬಂದ ಟಿಪ್ಪರ್ ಹರಿದಿದೆ. ಕೂಡಲೇ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ.

## ಪಾಕಿಸ್ತಾನ ಮೂರನೇ ಸ್ಥಾನಕ್ಕೆ

**ಕೊಲೊಂಬೊ:** ಟಿ20 ವಿಶ್ವಕಪ್, ಗ್ರೂಪ್‌ಎ ನಿರ್ಣಾಯಕ ಪಂದ್ಯದಲ್ಲಿ ಪಾಕಿಸ್ತಾನ ತಂಡವು, ಭಾರತದ ವಿರುದ್ದ 61 ರನ್‌ಗಳಿಂದ ಹೀನಾಯವಾಗಿ ಸೋತಿದೆ. ಒಂದು ಕಡೆ ಅಭಿಮಾನಿಗಳ ಭಾರೀ ಆಕ್ರೋಶ ಎದುರಿಸುವುದು, ಇನ್ನೊಂದು ಕಡೆ, ಟೂರ್ನಿಯಿಂದ ಹೊರಬೀಳುವ ಭೀತಿ ಪಾಕ್ ತಂಡವನ್ನು ಕಾಡುತ್ತಿದೆ. ನಿನ್ನೆಯ ಭಾರತದ ಎದುರು ಸೋಲಿನ ಬಳಿಕ ಅಂಕಪಟ್ಟಿಯಲ್ಲಿ ಪಾಕಿಸ್ತಾನ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದೆ. ಅಮೆರಿಕಾ ಮತ್ತು ಪಾಕಿಸ್ತಾನ ತಂಡಕ್ಕೆ ನಾಲ್ಕು ಪಾಯಿಂಟ್ ಇದ್ದರೂ ಕೂಡಾ, ರನ್ ರೇಟ್ ಸರಾಸರಿಯಲ್ಲಿ ಯುಎಸ್‌ಎ, ಪಾಕ್‌ಗಿಂತ ಮುಂದಿದೆ. ಇದು, ಪಾಕಿಸ್ತಾನಕ್ಕೆ ಮುಳುವಾಗುವ ಸಾಧ್ಯತೆಯಿದೆ.

## ಅಗಲಿಕೆ: ಅಪಾರ ನೋವು



**ಹುಮನಾಬಾದ:** ಮಾಜಿ ಸಂಸದ ನರಸಿಂಗರಾವ ಸೂರ್ಯವಂಶಿ ಅವರ ಪುತ್ರ ಸಂಜೀವ ಸೂರ್ಯವಂಶಿ ಅಗಲಿಕೆ ತಿಳಿದು ಮನಸ್ಸಿಗೆ ಅತೀವ ನೋವು ತಂದಿದೆ ಅವರ ಅಗಲಿಕೆಯ ನೋವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದ ಸದಸ್ಯರಿಗೆ ಭಗವಂತ ಕರುಣಿಸಲಿ ಎಂದು ಪ್ರಾರ್ಥಿಸುವೆ.

## ಶಿವನೆಂದರೆ ಸೃಷ್ಟಿಗೆ ಕಾರಣ ಚೈತನ್ಯ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಪುರಾಣಗಳಲ್ಲಿ ಉಲ್ಲೇಖವಾಗಿರುವ ಶಿವನಿಗೂ ಶರಣರ ವಚನಗಳಲ್ಲಿ ಬಳಕೆಯಾಗಿರುವ ಶಿವನಿಗೂ ಸಾಕಷ್ಟು ಗೊಂದಲಗಳಿವೆ. ಆದರೆ ಶಿವ ಎಂಬುದೊಂದು ತತ್ವ ಎಂಬುದನ್ನು ನಾವ್ಯಾರೂ ಮರೆಯಬಾರದು ಎಂದು ಪತ್ರಕರ್ತ–ಲೇಖಕ ಡಾ. ಶಿವರಂಜನ ಸತ್ಯಂಪೇಟೆ ಅಭಿಪ್ರಾಯಪಟ್ಟಿದ್ದಾರೆ. ನಗರದ ಫಿಲ್ಟರ್ ಬೆಡ್ ಪ್ರದೇಶದ ಮಹಾಂತಜ್ಯೋತಿ ಪ್ರತಿಷ್ಠಾನದ ವತಿಯಿಂದ ಶಿವರಾತ್ರಿ ನಿಮಿತ್ತ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಶರಣರ ದೃಷ್ಟಿಯಲ್ಲಿ ಶಿವ ವಿಷಯ ಕುರಿತು ಮಾತನಾಡಿ, ಶಿವ ಎಂದರೆ ಮಂಗಳಕರ, ಶುಭಕರವಾದದ್ದು ಎಂದು ವಚನಕಾರರು ತಿಳಿಸಿದ್ದಾರೆ ಎಂದು ವ್ಯಾಖ್ಯಾನಿಸಿದ್ದಾರೆ. ಜಾನಪದರ ದೃಷ್ಟಿಯಲ್ಲಿ ಶಿವ ವಿಷಯ ಕುರಿತು ವಿಮರ್ಶಕ–ಲೇಖಕ ಡಾ. ಶ್ರೀಶೈಲ ನಾಗರಾಳ, ವಿಜ್ಞಾನದ ದೃಷ್ಟಿಯಲ್ಲಿ ಶಿವ ವಿಷಯ ಕುರಿತು ಡಾ. ವಿಜಯಶ್ರೀ ಹಿರೇಮಠ ಮಾತನಾಡಿ, ಶಿವರಾತ್ರಿ ದಿನ ಮಾಡುವ ಜಾಗರಣೆ, ಧ್ಯಾನ ಮತ್ತು ಉಪವಾಸಗಳು ದೇಹ, ಮೆದುಳಿಗೆ ಪೂರಕ ಪೂರಕವಾಗಿವೆ ಎಂದಿದ್ದಾರೆ. ಪುಸ್ತಕೋದ್ಯಮಿ ಬಸವರಾಜ ಕೊನೇಕ್ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಪತ್ರಕರ್ತ ಶಂಕರ ಕೋಡ್ಲಾ ನೇತೃತ್ವ ವಹಿಸಿದ್ದರು.

## ಅತ್ಯಾಚಾರಿಗಳಿಗೆ ಗಲ್ಲು ಶಿಕ್ಷೆ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಹಂಪಿಯ ಬಳಿ ಇಸ್ರೇಲಿ ಮಹಿಳೆ ಮೇಲೆ ಅತ್ಯಾಚಾರ ಹಾಗೂ ಅಮೆರಿಕ ಪ್ರಜೆಯ ಕೊಲೆ ಪ್ರಕರಣದ ಅಪರಾಧಿಗಳಿಗೆ ಗಂಗಾವತಿ ಕೋರ್ಟ್‌ಗಲ್ಲು ಶಿಕ್ಷೆ ವಿಧಿಸಿದೆ. ಕೇವಲ 9 ತಿಂಗಳಲ್ಲೇ ಗಂಗಾವತಿ ಕೋರ್ಟ್ ಈ ಐತಿಹಾಸಿಕ ತೀರ್ಪು ನೀಡಿದೆ. ಫೆ.6ರಂದು ಮೂವರು ಆರೋಪಿಗಳನ್ನು ದೋಷಿಗಳೆಂದು ತೀರ್ಪು ನೀಡಿತ್ತು. ಗಂಗಾವತಿ 1ನೇ ಹೆಚ್ಚುವರಿ ಜಿಲ್ಲಾ ಸತ್ರ ಮತ್ತು ನ್ಯಾಯಾಲಯದ ನ್ಯಾಯಾಧೀಶರಾದ ಸದಾನಂದ ನಾಗಪ್ಪ ನಾಯಕ ಅವರು ಮೂವರು ಅಪರಾಧಿಗಳಾದ ಮಲ್ಲೇಶ್ ಅಲಿಯಾಸ್ ಹಂದಿಮಲ್ಲ, ಸಾಯಿ ಮತ್ತು ಶರಣಪ್ಪಗೆ ಗಲ್ಲು ಶಿಕ್ಷೆ ವಿಧಿಸಿ ಆದೇಶ ಹೊರಡಿಸಿದ್ದಾರೆ. 25ರ ಮಾರ್ಚ್‌ನಲ್ಲಿ ಕೊಪ್ಪಳದ ಗಂಗಾವತಿ ತಾಲೂಕಿನ ಹಂಪಿಯ ಸಾಣಾಪೂರ ಬಳಿ ಇಸ್ರೇಲಿ ಮಹಿಳೆಯ ಮೇಲೆ ಅತ್ಯಾಚಾರವೆಸಗಿದ್ದರು. ಇದೇ ವೇಳೆ ಅಮೆರಿಕದ ವ್ಯಕ್ತಿಯನ್ನು ಕೊಲೆ ಮಾಡಲಾಗಿತ್ತು. ಈ ಘಟನೆ ಇಡೀ ದೇಶವನ್ನೇ ಬೆಚ್ಚಿ ಬೀಳಿಸಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಮಲ್ಲೇಶ್, ಸಾಯಿ ಹಾಗೂ ಶರಣಪ್ಪ ಮೂವರ ವಿರುದ್ಧ ಅತ್ಯಾಚಾರ, ಕೊಲೆ ಪ್ರಕರಣ ದಾಖಲಾಗಿತ್ತು.

## ಬಿಸಿ ಗಾಳಿ, ಯೆಲ್ಲೋ ಅಲರ್ಟ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಇದೀಗ ನಾಡಿನಲ್ಲಿ ಬೇಸಿಗೆ ಲಕ್ಷಣಗಳು ಆರಂಭ ಆಗಿದ್ದು, ಬಿಸಿ ಗಾಳಿ, ಆರ್ದ್ರತೆಯ ಹಿನ್ನೆಲೆ ಫೆ. 17, 18 ರಂದು ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಬೆಳಗಾವಿ, ಬೀದರ್. ವಿಜಯಪುರ, ಬಾಗಲಕೋಟೆ, ಧಾರವಾಡ, ಗದಗ, ಕಲಬುರಗಿ (34.6), ಹಾವೇರಿ, ಕೊಪ್ಪಳ. ರಾಯಚೂರಲ್ಲಿ ಗರಿಷ್ಠ ತಾಪಮಾನವು 33 ರಿಂದ 31 ಡಿಗ್ರಿ ಸೆಲ್ಸಿಯಸ್ ಆಸುಪಾಸಲ್ಲಿದೆ. ಹಾಗೂ ಕನಿಷ್ಠ ತಾಪಮಾನವು 13.8 ರಿಂದ 17.6 ಡಿಗ್ರಿ ಸೆಲ್ಸಿಯಸ್ ನಷ್ಟಿದೆ. ಬೆಂಗಳೂರು, ಬಳ್ಳಾರಿ (36), ಚಿತ್ರದುರ್ಗ, ದಾವಣಗೆರೆದಲ್ಲಿ ಗರಿಷ್ಠ ತಾಪಮಾನವು 32 ರಿಂದ 30 ಡಿಗ್ರಿ ಸೆಲ್ಸಿಯಸ್ ನಷ್ಟಿದೆ. ಕಾರವಾರ, ಬಳ್ಳಾರಿ, ಕಲಬುರಗಿಯಲ್ಲಿ ಬಿಸಿಲು ಭಾರಿ ಹೆಚ್ಚಿದ್ದು ತಾಪಮಾನ, 36 ಡಿಗ್ರಿ ಸೆ.ಗೆ ತಲುಪಿದೆ. ಕನಿಷ್ಠ ತಾಪಮಾನವು ಚಿಂತಾಮಣಿ, ಹಾಸನ, ಬೆಂಗಳೂರು, ಧಾರವಾಡ ಬೆಳಗಾವಿಯಲ್ಲಿ 11, 12 , 14 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.






# ಸಮಾಜದ ಅಭಿವೃದ್ಧಿಯಲ್ಲಿ ಯುವಜನರ ಪಾತ್ರ ಬಹುಮುಖ್ಯ: ಡಾ ರಾಬರ್ಟ್

**ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:**

ಸಮಾಜದ ಅಭಿವೃದ್ಧಿಯಲ್ಲಿ ಯುವಕರಪಾತ್ರಬಹುಮುಖ್ಯವಾದ್ದುದು. ಅವರು ಮನಸು ಮಾಡಿದರೆ ದೇಶವನ್ನೆ ಆಳಬಲ್ಲರು ಆದರೆ ಈಗಿನ ಯುವಕರು ತಮ್ಮ ಯೌವನಾವಸ್ಥೆಯಲ್ಲಿ ಮೊಬೈಲ್ ಬಳಕೆಯಲ್ಲಿ ಹೆಚ್ಚಿನ ಸಮಯ ಕಳೆಯುತ್ತಿದ್ದಾರೆ ಎಂದು ಗುಲ್ಬರ್ಗ ಧರ್ಮ ಕ್ಷೇತ್ರದ ಧರ್ಮಾಧ್ಯಕ್ಷ ಡಾ. ರಾಬರ್ಟ್ ಮೈಕಲ್ ಮಿರಂದಾ ಹೇಳಿದರು. ತಾಲೂಕಿನ ತಾಳಮಡಗಿ (ಗಾಂಧಿ ನಗರದ) ಸಂತ ಲಾರೆನ್ಸ್ ದೇವಾಲಯದ 25ನೇ ವಾರ್ಷಿಕ ಬೆಳ್ಳಿಮಹೋತ್ಸವಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸಮಾಜದಲ್ಲಿ ನಡೆಯುವ ತಾರತಮ್ಯ, ಜಾತಿ ಭೇದ, ಹಾಗೂ ಸಮಾನತೆಯ ವ್ಯವಸ್ಥೆಯ ವಿರುದ್ಧ ಯುವಜನರು ಮುಂದಾಗದೇ ಮೌನ ವಹಿಸುತ್ತಿದ್ದಾರೆ. ಇದು ಆಘಾತಕಾರಿ ವಿಷಯವಾಗಿದೆ. ಸಮಾಜದ ಒಂದು ಮುಖ್ಯ ವ್ಯವಸ್ಥೆಯ ಬಗ್ಗೆ ಯುವಕರು ತಿಳಿದುಕೊಳ್ಳಬೆಕು,

ಸಂಘಟಿತರಾಗಬೆಕು, ಸಂವಿಧಾನ ಬದ್ಧ ಬದುಕು ಬದಕಲು ಮುಂದಾಗಬೇಕೆಂದು ಕರೆ ನೀಡಿದರು. ಮಕ್ಕಳಿಗೆ ಉತ್ತಮವಾದ



ಶಿಕ್ಷಣ ಕೊಡಿಸಲು ಪಾಲಕರಿಗೆ ತಿಳಿಸಿದರು. ವಿಧಾನ ಪರಿಷತ್ ಸದಸ್ಯ ಭೀಮರಾವ ಪಾಟೀಲ್ ಮಾತನಾಡಿ, ಸಂತ ಲಾರೆನ್ಸ್ ದೇವಾಲಯವು ಸುಮಾರು 25 ವರ್ಷಗಳಿಂದ ಉತ್ತಮ ಸಂದೇಶ ಸಾರುತ್ತಾ ಬರುತ್ತಿದೆ. ಕ್ರೈಸ್ತ ಸಮಾಜದ ಉನ್ನತಿಗೆ ಅನೇಕ ಮಹತ್ಕಾರ್ಯ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ. ಈ ಕಾರ್ಯ ಹೀಗೆ ಮುಂದುವರಿಯಲಿ, ಅದಕ್ಕೆ ಬೇಕಾದಂತಹ ಸಹಾಯ ಸಹಕಾರ ನೀಡುತ್ತೇನೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಧರ್ಮ ಕ್ಷೇತ್ರದ ಶ್ರೇಷ್ಠ ಗುರುಗಳಾದ ಫಾ. ಬಾಪು, ಸಂತ ಲಾರೆನ್ಸ್ ದೇವಾಲಯದ ನಿರ್ದೇಶಕರಾದ ಫಾ.ಜಾರ್ಜ್, ಸಿಸ್ಟರ್ ಸ್ಟೇಲ್ಲ, ಸಿಸ್ಟೆರ್ ರೋಸ್ಲಿನ್ ಪೌಲ್, ಪ್ರಮುಖರಾದ ವಿಜಯಕುಮಾರ ನಾತೆ, ಉಮೇಶ ಕುಲಕರ್ಣಿ, ವಿನೋದ ಸೀತಾಳಗೇರಾ, ಬ್ಲವಿತಾ ಗಾಂಧಿನಗರ, ಸುಧಾಕರ ಗಡ್ಡದೋರ, ರವೀಂದ್ರ ಪಾವಡಶೆಟ್ಟಿ, ಡಾ. ಹೈದಾರಲಿ ಖಾನ್ ಪಟೇಲ್, ಪ್ರಕಾಶ ವಣಕೇರಿ, ವೈಜೀನಾಥ ನಿಂಪಣ್ಣ, ಬಾಬುರಾವ ಪಾಟೀಲ ಭರತ್ ವಗ್ಗೆನೊರ, ಬಾಬುರಾವ ಪಾಟೀಲ್, ಪಪ್ಪು ಪಾಟೀಲ್, ಶಾಮ್ ನಿಂಬುರ್, ಸ್ವಾಮಿದಾಸ್ ಸೀತಾಳಗೇರಾ, ಜೈಶಿಲ ವಗ್ಗೆನೋರ, ಅಜಯ ಸೀತಾಳಗೇರ, ಸಾಗರ ಗಾಂಧಿನಗರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



### ಮೂಕ ಜಾನಿವಾರಿಗಳ ಪಾಲಿನ ದೇವದೂತರು – ಪಶುವೈದ್ಯರಿಗೆ ಗೌರವ ಸಲ್ಲಿಸೋಣ

ಮಾತನಾಡಲು ಆಗದ ಮೂಕ ಜಾನಿವಾರಿಗಳು ನಮ್ಮ ಬದುಕಿನ ಅವಿಭಾಜ್ಯ ಅಂಗ. ಹಸು–ಎಮ್ಮೆಗಳಿಂದ ಹಿಡಿದು ಬೀದಿ ನಾಯಿಗಳು, ಬೆಕ್ಕುಗಳು, ಕುರಿ–ಮೇಕೆಗಳು ಎಲ್ಲವೂ ಮಾನವನ ಜೀವನಕ್ಕೆ ಆಧಾರ. ಆದರೆ ಅವುಗಳ ನೋವು, ಅಳಲು, ಸಂಕಟಗಳನ್ನು ಅರ್ಥ ಮಾಡಿಕೊಳ್ಳುವವರು ಯಾರು? ಆ ಹೊಣೆಯನ್ನು ಮೌನವಾಗಿ ಹೊತ್ತುಕೊಂಡಿರುವವರು ನಮ್ಮ ಪಶುವೈದ್ಯರು.

ಬಿಸಿಲು–ಮಳೆ, ಹಳ್ಳಿ–ಪಟ್ಟಣವೆನ್ನದೇ ಸಮಯಕ್ಕೆ ತಕ್ಕಂತೆ ಧಾವಿಸಿ ಪ್ರಾಣ ಉಳಿಸುವ ಈ ವೈದ್ಯರು ನಿಜವಾದ ಮಾನವೀಯತೆಯ ಪ್ರತೀಕ. ಅಪಘಾತದಲ್ಲಿ ಗಾಯಗೊಂಡ ಪ್ರಾಣಿಗೆ ಚಿಕಿತ್ಸೆ ನೀಡುವುದು, ರೋಗಬಾಧಿತ ಜಾನುವಾರಿಗೆ ಔಷಧಿ ಹಾಕುವುದು, ಮಹಾಮಾರಿಯಿಂದ ಹಿಂಡನ್ನೇ ರಕ್ಷಿಸುವುದು–ಇವೆಲ್ಲ ಅವರ ದಿನನಿತ್ಯದ ಸೇವೆಯ ಭಾಗ. ಪ್ರತಿಫಲದ ನಿರೀಕ್ಷೆಯಿಲ್ಲದೆ, ಪ್ರಶಂಸೆಯಿಲ್ಲದೆ ನಡೆಯುವ ಈ ಸೇವೆ ಸಮಾಜಕ್ಕೆ ಅಮೂಲ್ಯ. ದುಃಖಕರ ಸಂಗತಿ ಏನೆಂದರೆ, ಇಂತಹ ಸೇವೆಗೆ ಬೇಕಾದಷ್ಟು ಗೌರವ, ಸೌಲಭ್ಯ ಮತ್ತು ಬೆಂಬಲ ಇನ್ನೂ ಸಿಗುತ್ತಿಲ್ಲ.

ಗ್ರಾಮೀಣ ಪ್ರದೇಶಗಳಲ್ಲಿ ಮೂಲಭೂತ ಉಪಕರಣಗಳ ಕೊರತೆ, ಕಡಿಮೆ ಸಿಬ್ಬಂದಿ, ಹೆಚ್ಚಿನ ಕೆಲಸದ ಒತ್ತಡ–ಇವೆಲ್ಲದರ ಮಧ್ಯೆಯೂ ಅವರು ತಮ್ಮ ಕರ್ತವ್ಯದಿಂದ ಹಿಂದೆ ಸರಿಯುವುದಿಲ್ಲ. ಇದು ಕೇವಲ ಉದ್ಯೋಗವಲ್ಲ; ಇದು ಒಂದು ಸೇವಾ ವ್ರತ.

ಸಮಾಜವಾಗಿ ನಾವು ಪಶುವೈದ್ಯರನ್ನು ಗೌರವದಿಂದ ಕಾಣಬೇಕು. ಅವರ ಶ್ರಮವನ್ನು ಗುರುತಿಸಿ ಸರ್ಕಾರವು ಉತ್ತಮ ಸೌಲಭ್ಯಗಳು, ಸುರಕ್ಷತೆ ಮತ್ತು ಪ್ರೋತ್ಸಾಹ ನೀಡಬೇಕು. ಶಾಲೆಗಳಲ್ಲಿ ಮಕ್ಕಳಿಗೆ ಪ್ರಾಣಿಗಳ ಮೇಲಿನ ಕಾಳಜಿ ಹಾಗೂ ಪಶುವೈದ್ಯರ ಮಹತ್ವ ತಿಳಿಸುವ ಶಿಕ್ಷಣವೂ ಅಗತ್ಯ.

ಮೂಕ ಜಾನಿವಾರಿಗಳ ಜೀವ ಉಳಿಸುವ ಕೈಗಳು ಪವಿತ್ರ. ಆ ಕೈಗಳಿಗೆ ಗೌರವ ನೀಡುವುದು ನಮ್ಮ ಕರ್ತವ್ಯ. ಪಶುವೈದ್ಯರು ಇದ್ದಾರೆ ಎಂದರೆ ಮಾತ್ರ ಅನೇಕ ಪ್ರಾಣಿಗಳಿಗೆ ಹೊಸ ಬದುಕು ಸಾಧ್ಯ. ಆದ್ದರಿಂದ ಅವರ ಸೇವೆಗೆ ಶಿರಸಾಗೋಣ–ಗೌರವದಿಂದ, ಕೃತಜ್ಞತೆಯಿಂದ.

## ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಗೆ ಜಾಂತಿಕರ್ ಪುನರ್ ಆಯ್ಕೆ



**• ಮಲ್ಲಮ್ಮ ನುಡಿ ವಾರ್ತೆ ಬೀದರ್ :**

ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯ ನಿರ್ದೇಶಕ ಮಂಡಳಿಗೆ 13 ಮಂದಿ ಅವಿರೋಧವಾಗಿ ಆಯ್ಕೆಯಾಗಿದ್ದು, ಫೆಬ್ರವರಿ 16ರಂದು ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಗುರುನಾಥ ಜಾಂತಿಕರ್ ಹಾಗೂ ಉಪಾಧ್ಯಕ್ಷರಾಗಿ ಪ್ರತಾಪ ತಂಬಾಕೆ ಅವಿರೋಧವಾಗಿ ಆಯ್ಕೆಯಾದರು.

ರಿಟರ್ನಿಂಗ್ ಅಧಿಕಾರಿಯಾಗಿರುವ ಸಹಕಾರ ಸಂಘಗಳ ಉಪನಿಬಂಧಕರ ಕಚೇರಿ, ಬೀದರ್‌ನ ಅಧಿಕಾರಿ ಮಲ್ಲಿನಾಥ ಮಠಪತಿ ಅವರು ಫಲಿತಾಂಶವನ್ನು ಘೋಷಿಸಿದರು.

ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ಮಾತನಾಡಿದ ಗುರುನಾಥ ಜಾಂತಿಕರ್ ಅವರು, ಒಂದು ಸಹಕಾರಿಯು ಸತತ 25 ವರ್ಷ ಯಶಸ್ವಿಯಾಗಿ ಕಾರ್ಯನಿರ್ವಹಿಸಬೇಕಾದರೆ ಆಡಳಿತ ಮಂಡಳಿ ಒಗ್ಗಟ್ಟಿನಿಂದ ಕೆಲಸ ಮಾಡುವುದು ಅತ್ಯಾವಶ್ಯಕ ಎಂದು ಹೇಳಿದರು. ಸಹಕಾರಿ ತನ್ನ ರಜತ ಮಹೋತ್ಸವದ ಸಂಭ್ರಮದಲ್ಲಿದ್ದು, ಈ ಸಂದರ್ಭದಲ್ಲಿ ಸ್ವಂತ ಕಟ್ಟಡವನ್ನು ಖರೀದಿಸಿರುವುದಾಗಿ ಅವರು ತಿಳಿಸಿದರು. ಉತ್ತಮ ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯ ಸತತ ಪ್ರಯತ್ನದಿಂದ ಈ ಸಾಧನೆ ಸಾಧ್ಯವಾಗಿದೆ ಎಂದು ಅವರು ಹೇಳಿದರು.

ನಿರ್ದೇಶಕರಾಗಿ ಚಂದ್ರಪ್ಪ ಬಿರಾದರ, ರಾಜಶೇಖರ್ ಹೊಸಳ್ಳಿ, ರಾಜು ಬೇಮಳಖೇಡಕರ್, ರಾಜಕುಮಾರ ಧುಮ್ಮನಸೂರೆ, ಶಿವರಾಜ ಹುಡೆದ, ಸುರೇಶ ಔರಾದಕರ್, ಪದ್ಮಜಾ ಪೊದ್ದಾರ್, ದೀಪಾ ಎಸ್. ಅಗ್ರವಾಲ್, ರಾಜಶೇಖರ್ ನಾಗಮೂರ್ತಿ, ಸಂಜೀವಕುಮಾರ್ ಬಿ. ಸಜ್ಜನ್ ಹಾಗೂ ಡಿ.ಎಸ್. ಕಿರಣಕುಮಾರ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಶಿವರಾಜ ಹೂಗಾರ, ಸಿಬ್ಬಂದಿಗಳಾದ ಅನೀಲಕುಮಾರ ಕೋಡಂಬಲ್, ಶಿವಾನಂದ ಬಸವಣ್ಣನೋರ್, ಸಂಜೀವಕುಮಾರ ಎನ್., ದೇವಿ ಎಸ್., ಶ್ರೀಕಾಂತ ಎಮ್., ರಾಹುಲ್ ಪೋಲ್ ಹಾಗೂ ಸೌಹಾರ್ದ ಸಹಕಾರಿಗಳ ಒಕ್ಕೂಟದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಅಮೃತ ಹೊಸಮನಿ ಉಪಸ್ಥಿತರಿದ್ದರು. ಸಭೆಯಲ್ಲಿ ಶಿವರಾಜ ಹೂಗಾರ ಅವರು ವಂದಿಸಿದರು.



ಬಸವಕಲ್ಯಾಣ:– ತಾಲೂಕಿನ ಹಾರಕೂಡ ಶ್ರೀಮಠದಲ್ಲಿ ಸದ್ಗುರು ಚನ್ನಬಸವ ಶಿವಯೋಗಿಗಳ 175ನೇ ಜಯಂತಿ ಮಹೋತ್ಸವ ಅಂಗವಾಗಿ ಪೀಠಾಧಿಪತಿಗಳಾದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರು ಶಿವಯೋಗಿಗಳ ಗದ್ದುಗೆಗೆ ಗೌರವ ಸಮರ್ಪಿಸಿದರು. ಈ ಸಂದರ್ಭದಲ್ಲಿ ಮಲ್ಲಿನಾಥ ಹಿರೇಮಠ ಹಾರಕೂಡ ಉಪಸ್ಥಿತರಿದ್ದರು.

(ಮಲ್ಲಮ್ಮ ನುಡಿ ಚಿತ್ರ)

# ಬೇಡಿದ ವರ ನೀಡುವ ಕಲ್ಪತರು ಶ್ರೀ ಉದ್ಭವಲಿಂಗ ಅಮರೇಶ್ವರ

**(ವರದಿ :ಶಿವಕುಮಾರ ಬಿರಾದಾರ)**

ಔರಾದ : ಕರ್ನಾಟಕದ ಕಿರೀಟ ಬೀದರ್ ಜಿಲ್ಲೆಯ ಸುಕ್ಷೇತ್ರ ಔರಾದ ಶ್ರೀ ಉದ್ಭವಲಿಂಗ ಅಮರೇಶ್ವರ ದೇವರ ಆಶೀರ್ವಾದಿಂದ ಮಾನವ ಮಹಾಂತನಾಗುತ್ತಾನೆ. ಅಮರೇಶ್ವರರ ದರ್ಶನದಿಂದ ಜಗದ ಜನರ ದುಃಖ ದೂರವಾಗುತ್ತದೆ. ಪ್ರತಿ ವರ್ಷದ ಶಿವರಾತ್ರಿಯಲ್ಲಿ ನಡೆಯುವ ಅಮರೇಶ್ವರ ಜಾತ್ರೆಯಲ್ಲಿ ಭಕ್ತರು, ದರ್ಶನ ಪಡೆದು ಪುನೀತರಾಗುತ್ತಾರೆ. ಬೇಡಿಕೊಂಡ ವರವನ್ನು ಅಮರೇಶ್ವರ ಕುಣಿಸುತ್ತಾನೆ ಶ್ರೀ ಅಮರೇಶ್ವರರು ಬೇಡಿದ ವರ ನೀಡುವ ಕಲ್ಪತರು ಎಂಬ ಅಘಾದ ನಂಬಿಕೆ ಭಕ್ತಾದಿಗಳಲ್ಲಿದೆ. ಔರಾದ್ ಪಟ್ಟಣವು ಭಕ್ತರನ್ನು ಸೆಳೆಯುವ ಪ್ರಸಿದ್ಧ ಧಾರ್ಮಿಕ ಕೇಂದ್ರವಾಗಿದೆ, ಜಾತ್ರಾ ಮಹೋತ್ಸವದಲ್ಲಿ ನೆರೆಯ ಮಹಾರಾಷ್ಟ್ರ, ಆಂಧ್ರಪ್ರದೇಶ, ತೆಲಂಗಾಣ ರಾಜ್ಯದ ಸಾವಿರಾರು ಭಕ್ತರು ಸೇರುವುದೇ ಇದಕ್ಕೆಲ್ಲ ಸಾಕ್ಷಿ, ಸತತ ಐದು ದಿನಗಳ ಕಾಲ ನಡೆಯುವ ಪಲ್ಲಕ್ಕಿ ಹಾಗೂ ಉತ್ಸವ ಮೂರ್ತಿ ಮೆರವಣಿಗೆ ನೋಡಲು ಎರಡು ಕಣ್ಣು ಸಾಲದು, ಪಟ್ಟಣದ ಪೊಲೀಸ್ ಠಾಣೆ ಪಕ್ಕದಲ್ಲಿರುವ ಅಮರೇಶ್ವರ ಅಗ್ನಿಕುಂಡ ಹಾಯ್ದು ಭಕ್ತರು ಭಕ್ತಿ ಸಮರ್ಪಣೆ ಮಾಡುತ್ತಾರೆ.

**ಔರಾದ್ ತಾಲೂಕಿನ ವಿಶೇಷತೆ :**

ಹಳೆಯ ಮತ್ತು ಹೊಸ ಶಿಲಾಯುಗದಲ್ಲಿ ಔರಾದ್ ತಾಲೂಕು ಪ್ರದೇಶ ಜನರಿಂದ ವಾಸಿಸಲ್ಪಡುತ್ತಿತ್ತು ಎನ್ನುವುದು ಸಂಶೋಧನೆಗಳಿಂದ ತಿಳಿದುಬಂದಿದೆ. ತಾಲೂಕಿನ ಕೌಡಗಾಂವ್, ವನಮಾರಪಳ್ಳಿ, ಏಕಲಾರ್, ಶೆಂಬೆಳ್ಳಿ, ಬೆಳಕುಣಿ, ನಾಗೂರ್ ಸೇರಿದಂತೆ ಅನೇಕ ಹಳ್ಳಿಗಳಲ್ಲಿ ಹಳೆಯ ಶಿಲಾಯುಗದ ಕಲ್ಲಿನ ಆಯುಧಗಳು, ಮಡಿಕೆಗಳು ದೊರೆತಿವೆ. ಆಹಾರದ ಬೇಟೆಗಾಗಿ ಆಗ ಮನುಷ್ಯ ಆಯುಧಗಳನ್ನು ಉಪಯೋಗಿಸುತ್ತಿದ್ದುದು ಹಾಗೂ ಅವುಗಳ ಸಂಗ್ರಹಣೆ ಮತ್ತು ನಿರ್ವಹಣೆಗಾಗಿ ಮಡಿಕೆಗಳನ್ನು ಬಳಸಿರುತ್ತಾನೆ. ಹೀಗಾಗಿ ಈ ಭಾಗದಲ್ಲಿ ದೊರೆತ ಮಡಿಕೆಗಳ ತುಂಡುಗಳು ಶಿಲಾಯುಗದ ಅವಶೇಷಗಳೆಂದು ಸಂಶೋಧಕರಾದ ಡಾ.ಎಲ್.ಆರ್. ಕುಲಕರ್ಣಿ ಧೃಢಪಡಿಸಿರುತ್ತಾರೆ.

**ಅಮರೇಶ್ವರ ಇತಿಹಾಸ.**

ವಿಜ್ಞಾನಕ್ಕೆ ಸವಸಲೆಸೆಯುವ ಶ್ರೀ ಅಮರೇಶ್ವರ ಗರ್ಭಗುಡಿಯಲ್ಲಿನ ಹುತ್ತದ ಆಕಾರದ ಉದ್ಭವಲಿಂಗದ ನೀರಿನ ಮೂಲ ಹುಡುಕಲು ಯಾರಿಗೂ ಸಾಧ್ಯವಾಗಿಲ್ಲ ಇಂತಹ ಪವಾಡ ಪುರುಷ ಸಂತ ಉದ್ಭವಲಿಂಗ ಶ್ರೀ ಅಮರೇಶ್ವರ ಜಾತ್ರೆಯಲ್ಲಿನ ಸಾಂಸ್ಕೃತಿಕ ವೈಭವದ ಮೆರುಗುವ ಪಟ್ಟಣದ ಖ್ಯಾತಿಯನ್ನು ಶಿಖರಕ್ಕೆ ಎರಿದೆ

**ಓಂ ಭಲಾ ಶಂಕರ ಭಲಾ ಜೈ ಘೋಶದೊಂದಿಗೆ ಅಗ್ನಿ ತುಳಿದು ಭಕ್ತಿ ಸಮರ್ಪಣೆ**

ಅಮರೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಮಹಾಶಿವರಾತ್ರಿ ಆದ ನಸುಕಿನ ಜಾವ ಭಕ್ತರು ಅಗ್ನಿಕುಂಡ ಹಾಯ್ದು ಭಕ್ತಿ ಸಮರ್ಪಣೆ ಮಾಡುತ್ತಾರೆ. ಅಗ್ನಿ ತುಳಿದರೆ ಭಕ್ತರ ಕಷ್ಟ ದೂರ ಆಗುತ್ತೆ, ಜೀವನದ ಪಾಪ ಪರಿಹಾರವಾಗುತ್ತದೆ ಎಂಬ ನಂಬಿಕೆ ಭಕ್ತರದಾಗಿದೆ. ಆದಕಾರಣ ಅಗ್ನಿ ತುಳಿಯಲು ಭಕ್ತ ಸಾಗರವೆ ಹರಿದು ಬರುತ್ತದೆ.

**ದಟ್ಟ ಕಾನನದಲ್ಲಿ ಉದ್ಭವಲಿಂಗ ಅಮರೇಶ್ವರ ಪ್ರತೆಕ್ಷ.**

ಪ್ರಸ್ತುತ ಪಟ್ಟಣದ ಹೃದಯಭಾಗದಲ್ಲಿರುವ ದೇವಸ್ಥಾನದ ಸ್ಥಳದಲ್ಲಿ ಈ ಹಿಂದೆ ದಟ್ಟವಾದ ಅರಣ್ಯವಿತ್ತು. ಅಲ್ಲಿ ಒಂದು ದೊಡ್ಡದಾದ ಹುತ್ತು ನಿರ್ಮಾಣವಾಗಿದ್ದು, ಅಲ್ಲಿಗೆ ಪ್ರತಿನಿತ್ಯ ಗೋವು ಆಗಮಿಸಿ ಕಾಡಿನಲ್ಲಿರುವ ಹುತ್ತಕ್ಕೆ ಹಾಲೆರೆಯುವುದು, ಆ ಹುತ್ತದಲ್ಲಿ ಅಮರೇಶ್ವರರು ತಪಸ್ಸು ಕುಳಿತಿರುವುದು, ಅದನ್ನು ಕಂಡ ಜನರು ನಿತ್ಯವೂ ಗೋವು ಹಾಲೆರೆಯುವುದಾದರೂ ಯಾರಿಗೆ ಎಂದು ಕುತೂಹಲದಿಂದ ಹುತ್ತದಲ್ಲಿರುವುದಾದರೂ ಏನೆಂದು ಗುದ್ದಲಿ, ಸಲಾಕೆಯಿಂದ ಹುತ್ತಕ್ಕೆ ಹೊಡೆಯಲು, ಒಳಗಿಂದ ಅಶರೀರ ವಾಣಿಯೊಂದು ಮಾರ್ಧ್ವನಿಸಿ ನಾನು ಅಮರೇಶ್ವರನಿದ್ದಿನಿ ಎಂಬ ಮಾತು ಕೇಳಬಂದಿತಂತೆ...

ಅದನ್ನು ಕೇಳಿದ ಜನರು ಅಶರೀರ ವಾಣಿ ದೇವವಾಣಿಯಾಗಿದೆ ಇಂದಿನಿಂದ ಈ ಗ್ರಾಮದಲ್ಲಿ ಅಮರೇಶ್ವರನ ಪೂಜೆ ಪುನಸ್ಕಾರಗಳು ಆರಂಭವಾಗಲಿ ಎಂಬ ನಿರ್ಧಾರವಾಗಿ ನಿಧಾನವಾಗಿ ಅಲ್ಲಿಂದ ಅಮರೇಶ್ವರಲಿಂಗಕ್ಕೆ ನಿತ್ಯವೂ ಜನರು ಪೂಜೆಗೈಯ್ಯಲು ಆರಂಭಿಸಿದ್ದು, ಪ್ರಸ್ತುತ ಕಲ್ಯಾಣ ಕರ್ನಾಟಕ ಭಾಗದ ಬಹುದೊಡ್ಡ ಜಾತ್ರೆಯಾಗಿ ಮಾರ್ಪಟ್ಟಿದೆ ಎನ್ನುವುದು ನಾವುಗಳು ಕಾಣಬಹುದಾಗಿದೆ. ಅಲ್ಲಿಂದ ಗ್ರಾಮದ ಜನರೆಲ್ಲರೂ ಸೇರಿ ಅಶರೀರ ವಾಣಿಯೊಂದು ಕೇಳಿ ಬಂದಿರುವುದು ನಮ್ಮ ಗ್ರಾಮ ದೇವತೆ ಅಮರೇಶ್ವರರದ್ದು, ಈಶ್ವರನ ಪ್ರತೀಕವಾದ ಉದ್ಭವಲಿಂಗ ಅಮರೇಶ್ವರ ಜಾತ್ರೆಯು ಮಹಾಶಿವರಾತ್ರಿಯಂದು ಅದ್ಧೂರಿಯಾಗಿ ಎಲ್ಲರೂ ಸೇರಿ ಆಚರಿಸುವುದು ಇಂದಿಗೂ ಬೆಳೆದು ಬಂದಿದೆ.

**ಭಕ್ತ ಸಾಗರದ ಮಧ್ಯೆ ವಿಜ್ರಂಭಣೆಯ ರಥೋತ್ಸವ**



*** ಸಂತಾನ ಭಾಗ್ಯ ಕರುಣಿಸುವ ಕಾಮಧೇನು ಉದ್ಭವಲಿಂಗ ಅಮರೇಶ್ವರ**

*** ಅಮರೇಶ್ವರ ದರ್ಶನದಿಂದ ಭವಪಾಪ ನಾಶ.**

*** ನೋಡ ಬನ್ನಿ ಅಮರವಾಡಿಯ ಅಮರೇಶ್ವರ ಜಾತ್ರೆ.**

*** ಶಿಷ್ಟರ ರಕ್ಷಕ, ದುಷ್ಟರ ಸಂಹಾರಕ ಭಕ್ತರ ಇಷ್ಟಾರ್ಥ ಪೂರೈಸುವ ಮರೇಶ್ವರ.**

*** ದಕ್ಷಿಣ ಕಾಶಿ ಎಂದೇ ಖ್ಯಾತಿ ಪಡೆದ ಅಮರವಾಡಿ ಅಮರೇಶ್ವರ.**

ಮಹಾಶಿವರಾತ್ರಿ ನಿಮಿತ್ತ ನಡೆಯುವ ಐದು ದಿನಗಳ ಕಾಲ ನಡೆಯುವ ಐತಿಹಾಸಿಕ ಪರಂಪರೆಯ ಶ್ರೀ ಉದ್ಭವಲಿಂಗ ಅಮರೇಶ್ವರ ಜಾತ್ರಾ ಮಹೋತ್ಸವದ ಐದನೇ ದಿನ ಸಾವಿರಾರು ಭಕ್ತ ಸಾಗರದ ಮಧ್ಯೆ ವೈಭವದ ರಥೋತ್ಸವ ಜರುಗುತ್ತದೆ. ಅಮರೇಶ್ವರ ರಥಕ್ಕೆ ಭಕ್ತರು ವಿವಿಧ ಪುಷ್ಪಗಳಿಂದ ಅಲಂಕಾರ ಮಾಡಿ ಐದನೇ ದಿನದ ಮೆರವಣಿಗೆ ನಂತರ ಉತ್ಸವ ಮೂರ್ತಿಯನ್ನು ತೇರಿನಲ್ಲಿ ಸ್ಥಾಪನೆ ಮಾಡಿ ಪೊಲೀಸ್ ಠಾಣೆ ಪಕ್ಕದಲ್ಲಿರುವ ಅಗ್ನಿಕುಂಡಕ್ಕೆ ತಲುಪುತ್ತದೆ. ಅಲ್ಲಿಯ ಅಗ್ನಿ ಬಸವಣ್ಣನಿಗೆ ವಿಶೇಷ ಪೂಜೆ ಸಲ್ಲಿಸಿ ಮರಳಿ ದೇವಸ್ಥಾನ ತಲುಪುತ್ತದೆ. ರಥೋತ್ಸವ ಸಮಯದಲ್ಲಿ ಭಕ್ತರು ಭೆಂಡು ಬತಾಸೆ ಅರ್ಪಣೆ ಮಾಡುತ್ತಾರೆ, ಎಲ್ಲೆಡೆ ಓಂ ಭಲಾ ಶಂಕರ ಭಲಾ ಜೈಘೋಶ್ ಮುಗಿಲು ಮುಟ್ಟುತ್ತದೆ. ರಥೋತ್ಸವ ನಡೆಯುವ ದಾರಿಯುದ್ದಕ್ಕೂ ವಿವಿಧೆಡೆಯಿಂದ ಆಗಮಿಸಿದ ವಾದ್ಯ ತಂಡಗಳು, ಭಜನೆ ಕಿರ್ತನೆಗಳು, ಡಿಜೆ ಕುಣಿತ, ನಂದಿಕೋಲು, ಸಾಂಸ್ಕೃತಿಕ ಕಲಾ ತಂಡಗಳು ರಥೋತ್ಸವಕ್ಕೆ ಮೆರಗು ನೀಡುತ್ತವೆ.

**ಕಾಶಿ ಮಾದರಿಯ ಉದ್ಭವಲಿಂಗ**

ಇಲ್ಲಿನ ಅಮರೇಶ್ವರ ದೇಗುಲ 10 ನೇ ಶತಮಾನದಲ್ಲಿ ನಿರ್ಮಿಸಲಾಗಿದೆ ಎಂದು ಇತಿಹಾಸದ ಮೂಲಕ ತಿಳಿದು ಬಂದಿದೆ. ಈ ದೇವಾಲಯದಲ್ಲಿ 11ನೇ ಶತಮಾನದ ಚಾಲುಕ್ಯರ ಕಾಲದ ಕನ್ನಡ ಮತ್ತು ಉರ್ದು ಭಾಷೆಯ ಶಾಸನಗಳು ದೊರೆತಿವೆ. ಹೀಗಾಗಿ ಇದು ಧಾರ್ಮಿಕ ಸಮನ್ವಯದ ಪ್ರತೀಕವಾಗಿದೆ ಎಂದು ಶಾಸನದಿಂದ ತಿಳಿದು ಬರುತ್ತದೆ. ದೇವಾಲಯದ ಭರ್ಗಗುಡಿಯಲ್ಲಿ ಕಾಶಿ ಮಾದರಿಯ ಉದ್ಭವ ಲಿಂಗವಿದೆ. ಅಮರೇಶ್ವರ ದೇವರಿಗೆ ಉದ್ಭವ ಲಿಂಗವೆಂದು ಕರೆಯುತ್ತಾರೆ. ಅಮರೇಶ್ವರ ದೇವಾಲಯ ಕಟ್ಟುವಾಗಲೇ ದಕ್ಷಣ ದಿಕ್ಕಿಗೆ ಒಂದು ಕಿ.ಮೀ ಅಂತರದಲ್ಲಿ ನಿರ್ಮಿಸಲಾದ ಪುರಾತನದ ಚಂದನ ಕೆರೆ, ದೇವಾಲಯದ ಉತ್ತರಕ್ಕೆ ಪುರಾತನ ಕಾಲದ ಅಮೃತ ಕುಂಡ ನಿರ್ಮಿಸಲಾಗಿದೆ. ಈ ಕುಂಡದಲ್ಲಿ ಸದಾಕಾಲ ನೀರಿನ ಚಿಲುಮೆ ಕಂಡು ಬರುವುದು ವಿಶೇಷ.

**ರಾಜ್ಯದ ಎಕಮಾತ್ರ ಒಂಟೆ ಜಾತ್ರೆ.**

ರಾಜ್ಯದ ಏಕೈಕ ಒಂಟಿ ಜಾತ್ರೆ ಎಂದು ಪ್ರಸಿದ್ಧಿ ಪಡೆದಿದ್ದ ಉದ್ಭವಲಿಂಗ ಶ್ರೀ ಅಮರೇಶ್ವರ ಜಾತ್ರೆಯ ಒಂಟಿ ಪ್ರದರ್ಶನ ನಡೆಯುವದು ಔರಾದ್‌ನಲ್ಲಿ ಇತಿಹಾಸವಿದೆ. 1950ರಲ್ಲಿ ಆರಂಭವಾದ ಅಮರೇಶ್ವರ ಜಾತ್ರೆ ಇಡೀ ದೇಶದ ಗಮನ ಸೆಳೆದಿದೆ. ರಾಜಸ್ಥಾನ, ಬಿಹಾರ, ಉತ್ತರಪ್ರದೇಶ, ಮಹಾರಾಷ್ಟ್ರ ಸೇರಿದಂತೆ ದೇಶದ ವಿವಿಧೆಡೆಯಿಂದ ಔರಾದನಲ್ಲಿ ಒಂಟೆ ವ್ಯಾಪಾರಿಗಳು ಬರುತ್ತಿದ್ದರು. ಒಂದು ತಿಂಗಳ ಕಾಲ ಪಟ್ಟಣದಲ್ಲಿ ಸಾವಿರಾರು ಒಂಟೆಗಳು ಓಡಾಡುತ್ತಿರುವುದು ಜಾತ್ರೆ ಕಳೆ ಕಟ್ಟುತ್ತಿತ್ತು. ದೇಶದಲ್ಲಿಯೇ ಏಕೈಕ ಒಂಟೆಯ ಜಾತ್ರೆ ಎಂದು ಗಮನ ಸೆಳೆದ ಶ್ರೀ ಅಮರೇಶ್ವರ ಜಾತ್ರೆ ಈದೀಗ ಮರಿಚೀಕೆಯಾಗಿದೆ ಎಂದು ಭಕ್ತಾದಿಗಳು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

**ಅಮರವಾಡಿ ಯಿಂದ ಔರಾದ ವಾದ ಇತಿಹಾಸ.**

ಉದ್ಭವಲಿಂಗ ಅಮರೇಶ್ವರ ದೇವರ ಅಸ್ತಿತ್ವ ಮಾತ್ರದಿಂದಲೇ ಇಂದಿನ ಔರಾದ ಎನ್ನುವ ಹೆಸರು ಈ ಹಿಂದೆ ಅಮರೇಶ್ವರವಾಡಿ, ಅಮರವಾಡಿ, ಅವರವಾಡಿ, ಅವರಾಡಿ, ಅವರಾದ, ಔರಾದ ಎಂದು ಬದಲಾಗಿದೆ ಎಂಬುದು ಅಮರೇಶ್ವರ ದೇವಸ್ಥಾನದಲ್ಲಿ ದೊರೆತ ತುಂಡು ಶಾಸನ ಹಾಗೂ ಅಮರೇಶ್ವರ ಕಾಲೇಜು ಆವರಣದಲ್ಲಿರುವ ಪಾರ್ಶ್ವನಾಥ ತೀರ್ಥಂಕರರ ಒಡೆದ ಶಾಸನದ ಪೀಠದ ಕೆಳಗಿರುವ ಎರಡು ಸಾಲಿನ ಶಿಲಾಶಾಸನದಲ್ಲಿ "ವಿಖ್ಯಾತನಗರವರವಾಡಿ" ಎನ್ನುವ ಸಾಲು, ಇಂದಿನ ಔರಾದನ್ನು 'ಅವರವಾಡಿ' ಅಥವಾ "ಅಮರವಾಡಿ" ಎನ್ನುತ್ತಿದ್ದರೆಂದು ಪುಷ್ಟಿಕರಿಸುತ್ತದೆ. ಸುಮಾರು 10ನೇ ಶತಮಾನದ್ದೆನ್ನಬಹುದಾದ ಅಮರೇಶ್ವರ ದೇವಸ್ಥಾನದಲ್ಲಿ ದೊರೆತ ತುಂಡು ಶಾಸನದಲ್ಲೂ "ಅವರವಾಡಿ ನೂರರ ಗ್ರಾಮದ ಸಮಸ್ತ ಪ್ರಭುಗಾವುಂಡರು ಅವರವಾಡಿಯ ಶ್ರೀ ಅಮರೇಶ್ವರ ದೇವರಿಗೆ ಖಂಡಸ್ಫುಟಿತ ಜೀರ್ಣೋದ್ಧಾರಕ್ಕಾಗಿ ತನಾರ್ಥಂ ಧಾರಾಪೂರ್ವಕ " ಎನ್ನುವ ಸಾಲು ಉಲ್ಲೇಖಿಸಲಾಗಿದ್ದು ಇದು ಹಿಂದಿನ ಅಮರವಾಡಿಯೇ ಇಂದಿನ ಔರಾದ್ ಎಂಬುದನ್ನು ಒತ್ತಿ ಹೇಳುತ್ತದೆ.

**ಪುನರ್ ರಚನೆಗೊಂಡ ಔರಾದ**

1905ಕ್ಕೆ ಮುಂಚೆ ಬೀದರ ಜಿಲ್ಲೆಯು ಬೀದರ, ಕೊಹಿರ್, ಕ್ಕೆ ಮುಂಚೆ ಬೀದರ ಜಿಲ್ಲೆಯು ಬೀದರ, ಕೊಹಿರ್, ಜನವಾಡಾ, ಔರಾದ, ಉದಗೀರ, ಅಹ್ಮದಪುರ ಮತ್ತು ನಿಲಂಗಾ ತಾಲೂಕುಗಳನ್ನು ಹೊಂದಿತ್ತು. ಜನವಾಡಾ ಮತ್ತು ಅಹ್ಮದಪುರಗಳು ನಿಜಾಮನ 'ಸರ್ಫ–ಎ–ಖಾಸಾ'ದ ಭಾಗಗಳಾಗಿದ್ದವು. 1905ರಲ್ಲಿ ಕಲಬುರ್ಗಿಯನ್ನು ವಿಭಾಗವನ್ನಾಗಿ ಮಾಡಿದಾಗ ಕೋಹಿರ್ ಮತ್ತು ಔರಾದನ್ನು ತಾಲೂಕು ಸ್ಥಾನದಿಂದ ತೆಗೆದುಹಾಕಲಾಯಿತು. ಆಗ ಔರಾದದ ಪ್ರದೇಶಗಳನ್ನು ಜನವಾಡಾ ತಾಲೂಕಿನ ವ್ಯಾಪ್ತಿಗೆ ತರಲಾಯಿತು. 1922ರಲ್ಲಿ ಕಲಬುರ್ಗಿ ವಿಭಾಗವನ್ನು ರದ್ದುಪಡಿಸಿ ಮತ್ತೆ 1929ರಲ್ಲಿ ಮರುಸ್ಥಾಪಿಸಿ 1948ರವರೆಗೆ ಮುಂದುವರೆಸಲಾಯಿತು.

ಮುಂದೆ 1950ರಲ್ಲಿ ಹೈದ್ರಾಬಾದ್ ಪ್ರಾಂತ್ಯದಲ್ಲಿ ಹೈದ್ರಾಬಾದ್ ಜಾಗೀರದ್ದತಿ ಕಾಯ್ದೆ ಪ್ರಕಾರ ಬೀದರ ಜಿಲ್ಲೆಯನ್ನು ಮರುಸ್ಥಾಪಿಸಿದಾಗ ಔರಾದ ಪುನಃ ತಾಲೂಕಾಗಿ ರಚಿಸಲಾಯಿತು. ಈ ಹಿಂದೆ ಜನವಾಡಾ ತಾಲೂಕಿಗೆ ಹಂಚಿಕೆ ಮಾಡಲಾಗಿದ್ದ ಔರಾದದ ಪ್ರದೇಶಗಳನ್ನು ಹಿಂಪಡೆಯಲಾಯಿತು. 1953ರಲ್ಲಿ ರಾಜ್ಯ ಪುನರ ರಚನಾ ಆಯೋಗದ ವರದಿಯಾಧರಿಸಿ ಔರಾದನ್ನು ಹೈದ್ರಾಬಾದ್ ಪ್ರಾಂತ್ಯದಿಂದ ಪ್ರತ್ಯೇಕಗೊಳಿಸಿ ಬೀದರ ಜಿಲ್ಲೆಯಲ್ಲಿ ಕರ್ನಾಟಕಕ್ಕೆ ಸೇರಿಸಿ ಏಕೀಕರಣಗೊಳಿಸಲಾಯಿತು. ಮುಂದೆ 1956ರಲ್ಲಿ ರಾಜ್ಯ ಮನರ ವಿಂಗಡಣೆಯಾದಾಗ ಔರಾದ ಬೀದರ ಜಿಲ್ಲೆಯ ತಾಲೂಕು ಪ್ರದೇಶವಾಗಿ ಮುಂದುವರೆಯಿತು.

**ಪಲ್ಲಕ್ಕಿ & ಉತ್ಸವ ಮೂರ್ತಿ ಮೂಲಕ ಮನೆ ಮನೆಗೆ ದರ್ಶನ**

ಶ್ರೀ ಅಮರೇಶ್ವರರ ಜಾತ್ರಾ ಮಹೋತ್ಸವ ನಿಮಿತ್ತ ಸತತ ಐದು ದಿನಗಳ ಕಾಲ ನಡೆಯುವ ಪಲ್ಲಕ್ಕಿ ಉತ್ಸವದಲ್ಲಿ ಉದ್ಭವಲಿಂಗ ಅಮರೇಶ್ವರರು ಉತ್ಸವ ಮೂರ್ತಿಯಾಗಿ ಜನರ ಮನೆ ಬಾಗಿಲಿಗೆ ದರ್ಶನ ನೀಡುತ್ತಾರೆ. ಹೀಗಾಗಿ ಪಟ್ಟಣದ ಹೆಂಗಳೆಯರು ಶ್ರೀ ಅಮರೇಶ್ವರರ ಪಲ್ಲಕ್ಕಿ ಉತ್ಸವ ಬರಮಾಡಿಕೊಳ್ಳಲು ಮನೆ ಮುಂದೆ ಸ್ವಚ್ಛ ಮಾಡಿ ವಿವಿಧ ಬಗೆಯ ರಂಗೋಲಿ ಬಿಡಿಸಿ ಸ್ವಾಗತ ಕೋರುತ್ತಾರೆ, ವಿಶೇಷ ಪೂಜೆ ಹೊದಿಕೆ ಅರ್ಪಿಸಿ ತಮ್ಮ ಹರಕೆ ತಿರಿಸುತ್ತಾರೆ, ಪಲ್ಲಕ್ಕಿ ಉತ್ಸವ ನೋಡುವುದೆ ಕಣ್ಣಿಗೆ ಹಬ್ಬ.

**ಅಂತರರಾಜ್ಯ ಮಟ್ಟದ ಕುಸ್ತಿ ಪಂದ್ಯ.**

ಅಮರೇಶ್ವರ ಜಾತ್ರಾ ಮಹೋತ್ಸವದಲ್ಲಿ ಅಂತರರಾಜ್ಯ ಮಟ್ಟದ ಕುಸ್ತಿ ಪಂದ್ಯ ನಡೆಯುತ್ತದೆ. ನೆರೆ ರಾಜ್ಯಗಳಾದ ಮಹಾರಾಷ್ಟ್ರದ ಸೊಲ್ಲಾಪೂರ, ಹಣೇಗಾಂವ, ಚಾಕುರ, ಆಂದ್ರ, ತೆಲಂಗಾಣ ರಾಜ್ಯದ ಹಾಗೂ ನಾನಾ ಗ್ರಾಮಗಳಿಂದ ಕುಸ್ತಿ ಪಂದ್ಯದಲ್ಲಿ ಪಾಲ್ಗೊಳ್ಳಲು ಕುಸ್ತಿಪಟುಗಳು ಬರುತ್ತಾರೆ. ಕುಸ್ತಿಪಟುಗಳು ತಮ್ಮ ಶಕ್ತಿ ಪ್ರದರ್ಶನ ಮಾಡುವದನ್ನು ಪಟ್ಟಣದ ಜನತೆ ಸೇರಿದಂತೆ ಸುತ್ತಮುತ್ತಲಿನ ನೂರಾರು ಜನರು ವಿಕ್ಷಣೆ ಮಾಡುತ್ತಾರೆ. 100 ರೂ.ಯಿಂದ ಪ್ರಾರಂಭಿಸುವ ಕುಸ್ತಿಯನ್ನು 11 ಸಾವಿರ ವರಗೆ ನಡೆಸಲಾಗುತ್ತದೆ. ಪ್ರಥಮ, ದ್ವಿತೀಯ, ತೃತೀಯ ಕುಸ್ತಿಪಟುಗಳಿಗೆ ಗುರುತಿಸಿ ಸತ್ಕಾರದ ಜತೆಗೆ ಬಹುಮಾನ ನೀಡಲಾಗುತ್ತದೆ.

**ಪಶು ಪ್ರದರ್ಶನ**

ಅಮರೇಶ್ವರ ಜಾತ್ರೆಯಲ್ಲಿ ಪ್ರತಿವರ್ಷ ಗಡಿ ಭಾಗದ ರೈತರಿಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪಶು ಪ್ರದರ್ಶನ ಮಾಡಲಾಗುತ್ತದೆ. ಮಹಾರಾಷ್ಟ್ರ, ಆಂಧ್ರಪ್ರದೇಶ ಹಾಗೂ ತೆಲಂಗಾಣದ ರೈತರು ತಮ್ಮ ಎತ್ತ, ಆಕಳು ಎಮ್ಮೆ, ಕುದುರೆ, ಸೇರಿದಂತೆ ನಾನಾ ತಳಿಯ ಜಾನುವಾರುಗಳನ್ನು ಪ್ರದರ್ಶನಕ್ಕೆ ಇಡುತ್ತಾರೆ. ಕೃಷಿ ಉತ್ಪನ್ನ ಮಾರುಕಟ್ಟೆ ಇಲಾಖೆಯ ಅಧಿಕಾರಿಗಳು ಭಾಗವಹಿಸುವ ಜಾನುವಾರುಗಳಿಗೆ ಪ್ರಥಮ, ದ್ವಿತೀಯ ಮತ್ತು ತೃತೀಯ ಎಂದು ತೆಗೆದು ರೈತರಿಗೆ ಸತ್ಕಾರ ಮಾಡಿ ಬಹುಮಾನ ವಿತರಿಸುತ್ತಾರೆ.

**ಗೋಶಾಲೆ ನಿರ್ಮಾತುಣಟಿಜಜಜಿಟಿಜಜ ಜಯಶಂಕರ ಮಹಾರಾಜ.**

ಉದ್ಭವಲಿಂಗ ಶ್ರೀ ಅಮರೇಶ್ವರರ ದೇವಸ್ಥಾನದಲ್ಲಿರುವ ಒಂದು ಆಕಳಿಂದ ಶ್ರೀ ಅಮರೇಶ್ವರ ಇಂದು ಗೋ ಶಾಲೆ ಸ್ಥಾಪನೆಯಾಗಿ 200 ಕ್ಕೂ ಹೆಚ್ಚು ಆಕಳು ಗೋ ಶಾಲೆಯಲ್ಲಿವೆ. ಇದಕ್ಕೆ ಮೂಲ ಕಾರಣ ಲಿಂಗೈಕ್ಯ ಜಯಶಂಕರ ಮಹಾರಾಜರು. ದೇವಸ್ಥಾನದಲ್ಲಿರುವ ಒಂದು ಆಕಳು ಮೇಯಲು ಹೋಗಿ ಗಡಿಮೇಲಿಂದ ಬಿದ್ದು ಸಾವನ್ನಪ್ಪಿತ್ತು. ಜಯಶಂಕರ ಮಹಾರಾಜರು ಸಾವನ್ನಪ್ಪಿದ ಆಕಳನ್ನು ಅಮರೇಶ್ವರ ದೇವಸ್ಥಾನಕ್ಕೆ ತಂದು ಭಜನ ಕೀರ್ತನೆ ಮಾಡುವ ಮೂಲಕ ದಾನಿಗಳಿಂದ ಹಣ ಸಂಗ್ರಹಿಸಿ ಅಂತ್ಯ ಸಂಸ್ಕಾರ ನೇರವೇರಿಸಿದರು. ಅಂತ್ಯಸಂಸ್ಕಾರಕ್ಕೆ ಬಂದ ಹಣದಲ್ಲಿ ಉಳಿದ ಹಣವನ್ನು ಜಯಶಂಕರ ಮಹಾರಾಜರು, ಒಂದು ಆಕಳು ಖರೀದಿಸಿದರು. ಆಕಳ ಸಂತಾನದಿಂದ ಇಂದು ಪಟ್ಟಣದ ಮುಂಗನಾಳ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಗೋ ಶಾಲೆ ತಲೆಯತ್ತಿದೆ. ಅಲ್ಲದೇ ಗೋ ಶಾಲೆಗೆ 19 ಏಕರೆ 15 ಗುಂಟೆ ಜಮೀನು ಕುಡಾ ಜಯಶಂಕರ ಮಹಾರಾಜರು ಗಳಿಸಿದ್ದಾರೆ. ಜಯಶಂಕರ ಮಹಾರಾಜರು ಮೂಲತಃ ಹಂದಿಕೇರಾ ಗ್ರಾಮದವರಾಗಿದ್ದು, ತಂದೆ ಚಿಕ್ಕವಯಸ್ಸಿನಲ್ಲಿಯೇ ಕಳೆದುಕೊಂಡರು. ಆದ್ದರಿಂದ ಉಪಜೀವನಕ್ಕಾಗಿ ಭಾಲ್ಕಿ ಪಟ್ಟಣದಲ್ಲಿ ಸುಮಾರು 5 ವರ್ಷಗಳ ಕಾಲ ವಾಸಮಾಡಿ ನಂತರ 1949ರ ಸುಮಾರಿಗೆ ಔರಾದ್ ಅಮರೇಶ್ವರ ದೇವಸ್ಥಾನಕ್ಕೆ ತಾಯಿಯೊಂದಿಗೆ ಬಂದು ಶ್ರೀ ಅಮರೇಶ್ವರ ದೇವಸ್ಥಾನದಲ್ಲಿಯೇ ಉಳಿದುಕೊಂಡರು. ಇವರಿಗೆ ದೇವಸ್ಥಾನವೇ ಮನೆಯಾಗಿ ಬಲದಾವಣೆಯಾಗಿತ್ತು. ಎಲ್ಲ ಅನುದಾನ ದೇವಸ್ಥಾನದ ಅಭಿವೃದ್ಧಿಗೆ ಖರ್ಚು ಮಾಡಿದ್ದಾರೆ. 1950ರಲ್ಲಿ ಅಮರೇಶ್ವರ ಜಾತ್ರಾ ಮಹೋತ್ಸವ ನಿಮಿತ್ತ ಒಂಟೆ ಜಾತ್ರೆ ನಡೆಯಿತು. ಜಾತ್ರೆಯಲ್ಲಿ ಇವರ ಪಾತ್ರ ಪ್ರಮುಖವಾಗಿತ್ತು. 1984ರಲ್ಲಿ ಜಯಶಂಕರ ಮಹಾರಾಜರು ದೇವಸ್ಥಾನದಲ್ಲಿ 1 ಕೋಟಿ ಓಂ ನಮಃ ಶಿವಾಯ ಜಪ ನಡೆಸಿದರು. ಅದರಂತೆ ಇಂದಿಗೂ ಪ್ರತಿ ವರ್ಷ 1 ಕೋಟಿ ಓಂ ನಮಃ ಶಿವಾಯ ಜಪ ನಡೆಯುತ್ತಿದೆ. ಜಪ ಸಮಾರೋಪದ ನಂತರ ಭಕ್ತರು ಮಹಾರಾಷ್ಟ್ರದ ಮನ್ಮಥಸ್ವಾಮಿ ದೇವಸ್ಥಾನದಲ್ಲಿ 7 ದಿನಗಳ ಕಾಲ ಸಪ್ತಾಹ ಇಟ್ಟುಕೊಂಡು ಬರುತ್ತಿದ್ದಾರೆ

**ನೋಡ ಬನ್ನಿ ನಮ್ಮೂರ ಜಾತ್ರೆಜಾತ್ರೆ.**

ಐತಿಹಾಸಿಕ ಕ್ಷೇತ್ರ ಔರಾದ ಉದ್ಭವಲಿಂಗ ಶ್ರೀ ಅಮರೇಶ್ವರ ಜಾತ್ರೆಯ ಸಂಭ್ರಮ... ಸುತ್ತಮುತ್ತಲಿನ ಹಳ್ಳಿಗಳಲ್ಲದೆ, ದೂರದ ಊರಿನಿಂದಲೂ ಭಕ್ತರು ಇಲ್ಲಿಗೆ ಆಗಮಿಸುತ್ತಿದ್ದು ಜಾತ್ರೆಯ ಸಂಭ್ರಮದಲ್ಲಿ ಪಾಲ್ಗೊಳ್ಳುವ ಮೂಲಕ ಆಧಿದೇವತೆ ಉದ್ಭವಲಿಂಗ ಶ್ರೀ ಅಮರೇಶ್ವರರ ಕೃಪೆಗೆ ಪಾತ್ರರಾಗುತ್ತಿದ್ದಾರೆ. ಇಲ್ಲಿ ದಿನನಿತ್ಯ ವಿಶೇಷ ಪೂಜೆ ಹಾಗೂ ವಿವಿಧ ಧಾರ್ಮಿಕ ಕೈಂಕರ್ಯಗಳು ನಡೆಯುತ್ತಿವೆ.

ವಿಶಿಷ್ಟ ಜಾತ್ರೆ: ಇತರೆ ಕಡೆಗಳಲ್ಲಿ ನಡೆಯುವ ಜಾತ್ರೆಗೆ ಹೋಲಿಸಿದರೆ ಔರಾದನಲ್ಲಿ ನಡೆಯುವ ಜಾತ್ರೆ ಒಂದೆರಡು ದಿನಕ್ಕೆ ಸೀಮಿತವಾಗಿರದೆ ಇಲ್ಲಿ ಬರೋಬ್ಬರಿ ಎರಡು ವಾರಗಳ ಕಾಲ ಜಾತ್ರೆ ನಡೆಯುತ್ತದೆ.

**ಹೋಗಬೇಕು ಹೋಗಬೇಕು**
**ನಮ್ಮೂರ ಜಾತ್ರೆಗೆ ಹೋಗಬೇಕು**
**ತೇರು ಎಳೆಯುವುದನ್ನು ನೋಡಬೇಕು**
**ದೇವರ ದರುಶನ ಮಾಡಬೇಕು**
**ಬೇಕಾದ ವರವನು ಕೇಳಬೇಕು**

**ಅಗ್ಗಿಯ ಬೀದಿಗೆ ಹೋಗಬೇಕು**
**ತೇರಿನ ಶೃಂಗಾರ ನೋಡಬೇಕು**
**ತೇರು ಎಳೆಯಲು ಹೋಗಬೇಕು**
**ದೇವರ ಅನುಗ್ರಹ ಪಡೆಯಬೇಕು.**
**ನೋಡಬೇಕು ನೋಡಬೇಕು**
**ಅಮರೇಶ್ವರನ ಸನ್ನಿಧಿ ನೋಡಬೇಕು.**

# ಇಂದು ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರಿಗೆ ಅಭಿನಂದನಾ ಸಮಾರಂಭ: ಸೋಮಶೇಖರ ಬಿರಾದಾರ ಚಿದ್ರಿ



ಮಲ್ಲಮ್ಮ ನುಡಿ ವಾರ್ತೆ
ಬೀದರ್,

ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಸಿ.ಎಸ್. ಷಡಾಕ್ಷರಿ ಅವರಿಗೆ ಅಭಿನಂದನಾ ಸಮಾರಂಭವನ್ನು ಇಂದು ಸಂಜೆ 5:30 ಗಂಟೆಗೆ ಬೀದರ್ ನಗರದ ಮ್ಯಾಸ್ಟಿಫ್ ಸೆಲೆಕ್ಟ್ (ವೈಬ್) ಹೋಟೆಲ್‌ನಲ್ಲಿ ಜಿಲ್ಲಾ ಶಾಖೆಯ ವತಿಯಿಂದ ಆಯೋಜಿಸಲಾಗಿದೆ ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಅಧ್ಯಕ್ಷ ಸೋಮಶೇಖರ ಬಿರಾದಾರ ಚಿದ್ರಿ ತಿಳಿಸಿದರು.ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಸೋಮವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, ರಾಜ್ಯಾಧ್ಯಕ್ಷರಾಗಿ ಎರಡನೇ ಬಾರಿ ಅಭೂತಪೂರ್ವ ಜಯ ಸಾಧಿಸಿರುವ ಸಿ.ಎಸ್.ಷಡಾಕ್ಷರಿ ಅವರು,ಪ್ರಪ್ರಥಮ ಬಾರಿಗೆ ಶರಣರ ನಾಡು ಬೀದರ್ ಜಿಲ್ಲೆಗೆ ಆಗಮಿಸುತ್ತಿದ್ದಾರೆ. ತಮ್ಮ ಮೊದಲ ಹಾಗೂ ಎರಡನೇ ಅವಧಿಯಲ್ಲಿ ಸರಕಾರಿ ನೌಕರರ ಪರವಾಗಿ ಸುಮಾರು 25ರಿಂದ 30 ಆದೇಶಗಳನ್ನು ಸರ್ಕಾರದಿಂದ ಹೊರಡಿಸುವಲ್ಲಿ ಅವರು ಮಹತ್ವದ ಪಾತ್ರ ವಹಿಸಿದ್ದಾರೆ.

ಮಹಿಳಾ ನೌಕರರ ಹಿತಕ್ಕಾಗಿ 'ಕೆ.ಎ.ಎಸ್.ಎಸ್ ಕರ್ನಾಟಕ ಆರೋಗ್ಯ ಸಂಜೀವಿನಿ'ಯೋಜನೆಯಡಿ ತಿಂಗಳಿಗೆ ಒಂದು ದಿನದ ಋತುಚಕ್ರ ರಜೆ ಮಂಜೂರು ಮಾಡಿಸುವಲ್ಲಿ ರಾಜ್ಯಾಧ್ಯಕ್ಷರು ಕೀರ್ತಿ ಸಾಧನೆ ಮಾಡಿದ್ದಾರೆ ಎಂದರು.

ಇಂದು ಮುಂಜಾನೆ 7:30 ಗಂಟೆಗೆ ಆಗಮಿಸಲಿದ್ದು, ಅಲ್ಲಿಂದ ರಸ್ತೆ ಮಾರ್ಗವಾಗಿ ಭಾಲ್ಕಿ ಕಚೇರಿಗೆ ತೆರಳಿ ಬೆಳಿಗ್ಗೆ 10 ಗಂಟೆಗೆ ಭೇಟಿ ನೀಡಲಿದ್ದಾರೆ. ಬಳಿಕ 10:30ಕ್ಕೆ ಹುಲಸೂರ ನೌಕರರ ಸಂಘದ ಕಚೇರಿ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ.

ಕಾರ್ಯಕ್ರಮದ ಬಳಿಕ ಸಂಜೆ 4 ಗಂಟೆಗೆ ಭಾಲ್ಕಿ ಇಂದ ತೆರಳಿ 5 ಗಂಟೆಗೆ ಬೀದರ್ ಆಗಮಿಸಲಿದ್ದಾರೆ. ಮ್ಯಾಸ್ಟಿಫ್ ಸೆಲೆಕ್ಟ್ ಹೋಟೆಲ್‌ನ ಮುಖ್ಯದ್ವಾರದಿಂದ ಅಭಿನಂದನಾ ಸಮಾರಂಭದ ವೇದಿಕೆಯವರೆಗೆ ತೆರೆದ ವಾಹನದಲ್ಲಿ ಕಲಾತಂಡಗಳೊಂದಿಗೆ ಮೆರವಣಿಗೆ ಮೂಲಕ ಭವ್ಯ ಸ್ವಾಗತ ನೀಡಲಾಗುವುದು.

ಕಾರ್ಯಕ್ರಮಕ್ಕೆ ಅನುಭವ ಮಂಟಪ ಬಸವಕಲ್ಯಾಣ ಅಧ್ಯಕ್ಷರಾದ ಪೂಜ್ಯ ನಾಡೋಜ ಡಾ. ಬಸವಲಿಂಗ ಪಟ್ಟದೇವರು ದಿವ್ಯ ಸಾನಿಧ್ಯ ವಹಿಸಲಿದ್ದಾರೆ.

ಲೋಕಸಭಾ ಸದಸ್ಯರಾದ ಸನ್ಮಾ ಸಾಗರ ಈ.ಖಂಡ್ರೆ ಉದ್ಘಾಟಿಸಲಿದ್ದಾರೆ. ಔರಾದ್ (ಬಿ) ಕ್ಷೇತ್ರದ ಶಾಸಕ ಪ್ರಭು ಚವ್ಹಾಣ ಗೌರವ ಉಪಸ್ಥಿತಿ ವಹಿಸಲಿದ್ದಾರೆ. ತಾನು ಅಧ್ಯಕ್ಷತೆ ವಹಿಸುವುದಾಗಿ ಹೇಳಿದರು.

ರಾಜ್ಯ ಹಾಗೂ ಜಿಲ್ಲಾ ಪದಾಧಿಕಾರಿಗಳು, ವಿವಿಧ ಇಲಾಖೆಗಳ ನಿರ್ದೇಶಕರು, ಸಂಘಗಳ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಸೇರಿದಂತೆ ಬೀದರ್ ಜಿಲ್ಲೆಯ ವಿವಿಧ ವೃಂದ ಸಂಘಗಳಿಂದ

ಸುಮಾರು 2000ಕ್ಕೂ ಹೆಚ್ಚು ನೌಕರರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಚಿದ್ರಿ ಹೇಳಿದರು.ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಪರಿಷತ್ ಸದಸ್ಯರಾದ ರಾಜಕುಮಾರ ಮಾಳಗೆ ಈ ಸಂದರ್ಭದಲ್ಲಿ ಮಾತನಾಡಿ,

ರಾಜ್ಯ ಸರ್ಕಾರ ಎನ್‌ಪಿಎಸ್ ಯೋಜನೆ ಕೈ ಬಿಟ್ಟು ಒಪಿಎಸ್ ಯೋಜನೆ ಜಾರಿಗೊಳಿಸಬೇಕೆಂದು ನಮ್ಮ ರಾಜ್ಯ ಅಧ್ಯಕ್ಷರ ಮೂಲಕ ಈಗಾಗಲೇ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿದೆ. ಆದರೂ ಅದು ಇಲ್ಲಿಯ ವರೆಗೆ ಬಗೆಹರಿಯಲಿಲ್ಲ. ಈಗ ರಾಜ್ಯಾಧ್ಯಕ್ಷರು ಆಗಮಿಸುತ್ತಿದ್ದು ಮತ್ತೊಮ್ಮೆ ಅವರ ಮೂಲಕ ಮುಖ್ಯಮಂತ್ರಿಗಳ ಮೇಲೆ ಒತ್ತಡ ಹೇರಲಾಗುವುದು, ಜೊತೆಗೆ ಈಗಿರುವ ಆರೋಗ್ಯ ಸಂಜೀವಿನಿಯು ಹಿಂದೆ ಜ್ಯೋತಿ ಸಂಜೀವಿನಿ ಮಾದರಿಯಲ್ಲಿ ಪಕ್ಕದ ತೆಲಂಗಾಣ ರಾಜ್ಯದ ಹೈದರಾಬಾದ್ ಹಾಗೂ ಮಹಾರಾಷ್ಟ್ರ ರಾಜ್ಯದ ಸೋಲಾಪುರಗಳಿಗೆ ಚಿಕಿತ್ಸೆಗಾಗಿ ಈ ಯೋಜನೆಯನ್ನು ವಿಸ್ತರಿಸುವಂತೆ ಸಹ ಸರ್ಕಾರದ ಮೇಲೆ ಒತ್ತಡ ಹೇರಲಾಗುವುದೆಂದು ಮಾಳಿಗೆ ಹೇಳಿದರು.ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರಭುಲಿಂಗ ತುಗಾವೆ, ಖಜಾಂಚಿ ದೇವಪ್ಪ ಚಾಂಬುಳೆ,ಕಾರ್ಯಾಧ್ಯಕ್ಷ ಶಿವರಾಜ ಕಪಲಾಪುರೆ, ಉಪಾಧ್ಯಕ್ಷರಾದ ಗೌತಮ ಚಿಂತಲಗೇರಾ, ಎಮ್.ಎಸ್ ಸತ್ತಾರ್,ಗೌರವ ಸಲಹೆಗಾರ ದಿಲೀಪ ಡೋಂಗ್ರೆ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

# ಮಹಾಶಿವರಾತ್ರಿ ಅಂಗವಾಗಿ ದೀಪೋತ್ಸವ: ಜಾಗರಣೆ ಭಜನೆ.

ಮಲ್ಲಮ್ಮ ನುಡಿ ವಾರ್ತೆ : ಗುರುಮಠಕಲ್



ಮಹಾ ಶಿವರಾತ್ರಿ ಅಂಗವಾಗಿ ಪಟ್ಟಣದ ವೀರಭದ್ರೇಶ್ವರ ಸ್ವಾಮಿ ದೇವಾಲಯದಲ್ಲಿ ದೀಪೋತ್ಸವ ಕಾರ್ಯಕ್ರಮ ಅತ್ಯಂತ ಭಕ್ತಿಭಾವದಿಂದ ಭಾನುವಾರ ಜರುಗಿತು. ದೇವಾಲಯ ಪ್ರಾಂಗಣ ಎಣ್ಣೆ ದೀಪಗಳ ಬೆಳಕಿನಲ್ಲಿ ಪ್ರಕಾಶಮಾನವಾಗಿ ಕಂಗೊಳಿಸಿತು, "ಓಂ ನಮಃ ಶಿವಾಯ" ಘೋಷಣೆಗಳಿಂದ ಆವರಣ ಮೊಳಗಿತು. ಬೆಳಿಗ್ಗೆಯಿಂದಲೇ ಭಕ್ತರು ದೇವಾಲಯಕ್ಕೆ ಆಗಮಿಸಿ ವಿಶೇಷ ಅಭಿಷೇಕ,ರುದ್ರಪಾರಾಯಣಗಳಲ್ಲಿ ಪಾಲ್ಗೊಂಡರು. ಸಂಜೆ ವೇಳೆ ಮಹಿಳೆಯರು ಹಾಗೂ ದಂಪತಿಗಳು ದೀಪಗಳನ್ನು ಹಚ್ಚಿ ವೀರಭದ್ರೇಶ್ವರ ಸ್ವಾಮಿಗೆ ಆರತಿ ಸಲ್ಲಿಸಿದರು. ದೀಪಗಳ ಸಾಲುಗಳು ದೇವಾಲಯದ ಸುತ್ತಲೂ ಅಲಂಕಾರಗೊಂಡು ಭಕ್ತರಿಗೆ ಆಧ್ಯಾತ್ಮಿಕ ಉಲ್ಲಾಸವನ್ನು ನೀಡಿದವು.

ಮಹಾ ಶಿವರಾತ್ರಿ ಜಾಗರಣೆ ನಿಮಿತ್ತ ದೇವಸ್ಥಾನದಲ್ಲಿ ಭಜನೆ ಕಾರ್ಯಕ್ರಮ ರಾತ್ರಿಯಿಡಿ ಜರುಗಿತು. ಇದರೊಂದಿಗೆ ಮಹಾ ಶಿವರಾತ್ರಿ ಜಾಗರಣೆ ಸಂಪನ್ನ ಗೊಂಡಿತು.

# ಕಲಿಕಾ ಹಬ್ಬ ಸಹಕಾರಿ



ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ. ವಿದ್ಯಾರ್ಥಿಗಳಲ್ಲಿರುವ ಪ್ರತಿಭೆ ಅನಾವರಣ ಮತ್ತು ಹೆಚ್ಚಿನದನ್ನು ಕಲಿಯಲು ಕಲಿಕಾ ಹಬ್ಬ ನೆರವಾಗಲಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಜಿ.ಹಳ್ಳದ ಹೇಳಿದರು.ತಾಲೂಕಿನ ಭಾತಂಬ್ರಾ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಉರ್ದು ಶಾಲೆಯಲ್ಲಿ ಆಯೋಜಿಸಿದ್ದ ಉರ್ದು ಕ್ಲಸ್ಟರ್ ಮಟ್ಟದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ಇಲಾಖೆ ಸರಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಾಗಲು ಹಾಗೂ ಗುಣಮಟ್ಟದ ಶಿಕ್ಷಣ ನೀಡುವ ಸಲುವಾಗಿ ಹಲವು ವಿಭಿನ್ನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಮಕ್ಕಳಲ್ಲಿ ಬೌದ್ಧಿಕ ಗುಣಮಟ್ಟ ಹೆಚ್ಚಾಗಲು ಮತ್ತು ಅವರಲ್ಲಿ ಅಡಗಿರುವ ಪ್ರತಿಭೆ ಹೊರ ಹಾಕಲು ಈ ಕಾರ್ಯಕ್ರಮ ಉತ್ತಮ ವೇದಿಕೆಯಾಗಿದೆ ಎಂದು ಹೇಳಿದರು. ಎಸ್ ಡಿಎಂಸಿ ಅಧ್ಯಕ್ಷ ಮಹ್ಮದ ಫಯಾಜ್ ಉದ್ದೀನ್ ಅಧ್ಯಕ್ಷತೆ ವಹಿಸಿದ್ದರು. ಸಿಆರ್ ಪಿ ಸಂತೋಷ್ ಕುಮಾರಿ ವಾಡೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ಕಾಶಿನಾಥ ಲದ್ದೆ, ಬಲಭೀಮ ಜಾಧವ, ಸಂಜೀವ ಸಾವರೆ, ಮಹೇಂದ್ರ ಮಾನಿಕಾರೆ, ರವಿಚಂದ್ರ ಮೈನಾಳೆ, ಜೈಪಾಲ ಜಾದವ್, ಅಬ್ದುಲ್ ರಹೀಮ್ ಭಯ್ಯ, ಸೈಯದ್ ರಿಯಾಜ್, ಸಯ್ಯದ್ ಗೌಸ್ , ಮುಖ್ಯಗುರು ದಾವೂದ್, ರಾಜಕುಮಾರ ಪಾಲಾಪುರೆ, ಸವಿತಾ, ಪೂರ್ಣಿಮಾ ಪಾಟೀಲ್, ಅಶೋಕ ಕಲ್ಯಾಣಿ,ಮಹೇಶ್ ಕೊರಳೆ,ಜಾಲಿಂದ್ರ ಜೈದೆ,ರಂಜಿತಸಿಂಗ್ ಠಾಕೂರ, ಸತ್ಯವಾನ ಕಾಂಬಳೆ, ಚನ್ನಬಸಪ್ಪ ತಳವಡೆ, ಸಂತೋಷ ಕುಮಾರ್ ವಾಡೆ, ಕಮಲಾದೇವಿ ಸೇರಿದಂತೆ ಹಲವರು ಇದ್ದರು. ನಿರ್ಮಲಾ ಜಮಾದಾರ ನಿರೂಪಿಸಿದರು. ರವಿಚಂದ್ರ ಮೈನಾಳೆ ವಂದಿಸಿದರು.

# ಮೂರ್ಛೆ ರೋಗದ ತಪ್ಪು ಕಲ್ಪನೆ ಹೋಗಲಾಡಿಸೋಣ:ಡಾ.ಕಿರಣ

ಮಲ್ಲಮ್ಮ ನುಡಿ ವಾರ್ತೆ




ಬೀದರ, ಫೆ,16:– ಅಪಸ್ಮಾರ ಅಥವಾ ಮೂರ್ಛೆ ರೋಗದ ಬಗ್ಗೆ ಸಮಾಜದಲ್ಲಿರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವುದು, ರೋಗಿಗಳಿಗೆ ಸೂಕ್ತ ಚಿಕಿತ್ಸೆ ಸಿಗುವಂತೆ ಮಾಡುವುದು ಮತ್ತು ಅವರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಬೇಕೆಂದು ಜಿಲ್ಲಾ ಕುಷ್ಠರೋಗ ನಿರ್ಮೂಲನಾ ಅಧಿಕಾರಿ ಡಾ.ಕಿರಣ ಪಾಟೀಲ ಹೇಳಿದರು.

ಅವರು ಇತ್ತೀಚಿಗೆ ಜಿಲ್ಲಾ ಕುಷ್ಠರೋಗ ಅಧಿಕಾರಿಗಳ ಕಾರ್ಯಾಲಯದಲ್ಲಿ ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮದಡಿಯಲ್ಲಿ ಅಂತರಾಷ್ಟ್ರೀಯ ಮೂರ್ಛರೋಗ ದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಮೂರ್ಛರೋಗ ಕುರಿತು ಜನಜಾಗೃತಿ ಮೂಡಿಸುವುದು ಮತ್ತು ಸಮಾಜದಲ್ಲಿರುವ ಕಳಂಕವನ್ನು ದೂರ ಮಾಡಿವುದೇ ಇದರ ಉದ್ದೇಶವಾಗಿದೆ. ಅಪಸ್ಮಾರದ ಬಗ್ಗೆ ಕೆಲವು ಮುಖ್ಯ ಸಂಗತಿಗಳು ಅಪಸ್ಮಾರವು ಕೇವಲ ಒಂದು ಆರೋಗ್ಯ ಸಮಸ್ಯೆಯಲ್ಲಿ ಇದು ಸಾಮಾಜಿಕವಾಗಿಯೂ ರೋಗಿಗಳ ಮೇಲ ಪರಿಣಾಮ ಬೀರುತ್ತದೆ. ವಿಶ್ವದಾದ್ಯಂತ ಸುಮಾರು 50 ಮಿಲಿಯನ್ ಜನರು ಈ ಸಮಸ್ಯೆಯಿಂದ ಬಳಲುತ್ತಿದ್ದಾರೆ. ಚಿಕಿತ್ಸೆ ಸರಿಯಾದ ಔಷಧೋಪಚಾರ ಮತ್ತು ವೈದ್ಯಕೀಯ ಸಲಹೆಯಿಂದ ಶೇ.70 ರಷ್ಟು ಪ್ರಕರಣಗಳನ್ನು ನಿಯಂತ್ರಿಸಬಹುದು ಮೂಢನಂಬಿಕೆ ಅಪಸ್ಮಾರವು ಯಾವುದೇ ಶಾಪ ಅಥವಾ ದೈವಿಕ ಕೊಪವಲ್ಲ ,ಇದೊಂದು ನರವೈಜ್ಞಾನಿಕ ಕಾಯಿಲೆ ಇದರ ಮುಖ್ಯ ಉದ್ದೇಶವಾಗಿದೆ ಎಂದರು.

ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಸಂಗಪ್ಪ ಕಾಂಬ್ಳೆ ಅವರು ಎಲ್ಲಾ ಸಿಬ್ಬಂದಿ ವರ್ಗದವರಿಗೆ ಪ್ರತಿಜ್ಞೆ ಮಾಡಿಸಿದರು. ಈ ಸಂದರ್ಭದಲ್ಲಿ ಡಾ.ಶಿವಶಂಕರ.ಬಿ.ಆರ್.ಸಿ.ಎಚ್ ಅಧಿಕಾರಿಗಳು ಹಾಗೂ ಡಾ.ರಾಜಶೇರ ಪಾಟೀಲ ಡಿ.ವಿ.ಬಿ.ಡಿ.ಸಿ.ಓ ಅಧಿಕಾರಿಗಳು ಹಾಗೂ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ವೀರಶೆಟ್ಟಿ ಚನ್ನಶೆಟ್ಟಿ, ರಾಕೇಶ, ನಿಕಿತಾ, ಯೋಗೇಶ, ರಾಜಕುಮಾರ, ಗೋರಖನಾಥ, ಇಮಾನುವೇಲ್, ಬ್ರಮಾರಂಭಾದೇವಿ, ಜ್ಯೋತಿ ಸಂಜು ಸೇರಿದಂತೆ ಅಧಿಕಾರಿ ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು.

# ಭಕ್ತರ ನಡುವೆ ಸಂಪನ್ನ ಗೊಂಡ ಶ್ರೀ ವೀರಭದ್ರೇಶ್ವರ ಲಘು ರಥೋತ್ಸವ

- ಮಲ್ಲಮ್ಮ ನುಡಿ ವಾರ್ತೆ ಕುಕನೂರ :

ಭಕ್ತ ವೃಂದದ ನಡುವೆ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ಪ್ರಯುಕ್ತ ಪ್ರತಿ ವರ್ಷದಂತೆ ಈ ವರ್ಷವೂ ಸಹ ಲಘು ರಥೋತ್ಸವ ಸಂಪನ್ನಗೊಂಡಿತು. ತಾಲೂಕಿನ ಮಂಡಲಗಿರಿ ಗ್ರಾಮದ ಆರಾಧ್ಯ ದೈವ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವ 2026ರ ಪಂಚ ಕಳಸ ಮಹಾ ರಥೋತ್ಸವ ಫೆಬ್ರವರಿ 17ರ ಮಂಗಳವಾರ ಜರುಗಲಿದ್ದು ಜಾತ್ರಾ ಮಹೋತ್ಸವದ ಪ್ರಯುಕ್ತ ಭಾನುವಾರ ಮಹಾಶಿವರಾತ್ರಿಯ ದಿನದಂದು ಬೆಳಿಗ್ಗೆ ಬ್ರಾಹ್ಮಿ ಮುಹೂರ್ತದಲ್ಲಿ ಶ್ರೀ ವೀರಭದ್ರೇಶ್ವರನಿಗೆ ರುದ್ರಾಭಿಷೇಕ ನಂತರ ಬಸವಪಟ್ಟ ಮೆರವಣಿಗೆ, ವಿಶ್ವಕರ್ಮರ ಮನೆಯಿಂದ ರಥೋತ್ಸವದ ಪಂಚ ಕಳಸಗಳನ್ನು ಧಾರ್ಮಿಕ ವಿಧಿ ವಿಧಾನಗಳೊಂದಿಗೆ ದೇವಸ್ಥಾನಕ್ಕೆ ಬರಮಾಡಿಕೊಂಡು, ಹೂಗಾರ ಮನೆತನದ ಮನೆಯವರಿಂದ ಹೂಗಳ ಕುಂಡಲವನ್ನು ದೇವಸ್ಥಾನಕ್ಕೆ ತಂದು ಸಂಜೆಯ ವೇಳೆಗೆ ಲಘು ರಥೋತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಲಾಯಿತು. ಮಧ್ಯಾಹ್ನ ಶ್ರೀ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಜಾತ್ರಾ ಮಹೋತ್ಸವದ ಕಮಿಟಿ ವತಿಯಿಂದ ಅನ್ನದಾಸೋಹದ ಮಹಾಪ್ರಸಾದ ವ್ಯವಸ್ಥೆಯನ್ನು ಆಯೋಜಿಸಲಾಯಿತು. ಈ ವೇಳೆಯಲ್ಲಿ ಭಕ್ತರು ವೀರಭದ್ರ ಸ್ವಾಮಿಗೆ ತಮ್ಮ ಹರಕೆ ಇಷ್ಟಾರ್ಥಗಳನ್ನು ಈಡೇರಿಸಿ ಸ್ವಾಮಿಯ ಕೃಪೆಗೆ ಪಾತ್ರರಾದರು.

# ಅಮರೇಶ್ವರ ಜಾತ್ರಾ ಮಹೋತ್ಸವ: ಪ್ರಭು ಚವ್ಹಾಣ ಭಾಗಿ



- ಮಲ್ಲಮ್ಮ ನುಡಿ ವಾರ್ತೆ ಔರಾದ

ಸುಕ್ಷೇತ್ರ ಉದ್ಭವಲಿಂಗ ಅಮರೇಶ್ವರ ಜಾತ್ರಾ ಮಹೋತ್ಸವದಲ್ಲಿ ಮಾಜಿ ಸಚಿವರು ಹಾಗೂ ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಫೆ.16 ರಂದು ಭಕ್ತಿಭಾವದಿಂದ ಪಾಲ್ಗೊಂಡು ನಾಡಿನೊಳಿತಿಗಾಗಿ ಪ್ರಾರ್ಥಿಸಿದರು.

ಬೆಳಿಗ್ಗೆ ಅಮರೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಪವಿತ್ರ ಪಲ್ಲಕ್ಕಿ ಮೆರವಣಿಗೆಯಲ್ಲಿ ಭಾಗವಹಿಸಿ ಭಕ್ತರೊಂದಿಗೆ ಸಾಗಿದರು. ಈ ವೇಳೆ ಭಕ್ತಾದಿಗಳ ಜೊತೆಗೆ ತಮಟೆ ಕಲಾವಿದರ ವಾದನಕ್ಕೆ ಹೆಜ್ಜೆ ಹಾಕಿ ಸಂಭ್ರಮಿಸಿದರು. ಜಾತ್ರಾ ಮಹೋತ್ಸವದ ಅಂಗವಾಗಿ ನಡೆಯುವ ಅಗ್ನಿ ಪೂಜೆಯಲ್ಲಿ ಪಾಲ್ಗೊಂಡು ಭಕ್ತಿಭಾವ ಮೆರೆದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕರು, ಸುಕ್ಷೇತ್ರ ಉದ್ಭವಲಿಂಗ ಅಮರೇಶ್ವರ ದೇವಸ್ಥಾನ ಔರಾದನ ಆರಾಧ್ಯವ, ಪ್ರಾಚೀನ ಮತ್ತು ಐತಿಹಾಸಿಕ ದೇವಸ್ಥಾನವಾಗಿದ್ದು, ನಂಬಿ ಬಂದ ಭಕ್ತರ ಎಲ್ಲ ಬೇಡಿಕೆಗಳು ಇಲ್ಲಿ ಈಡೇರುತ್ತವೆ. ಎಲ್ಲ ಸಂಕಷ್ಟಗಳನ್ನು ದೂರ ಮಾಡುವ ಪುಣ್ಯಕ್ಷೇತ್ರ ಇದಾಗಿದ್ದು, ವರ್ಷಕ್ಕೊಮ್ಮೆ ಅತ್ಯಂತ ಅದ್ದೂರಿಯಾಗಿ ಮತ್ತು ಸಂಭ್ರಮದಿಂದ ನಡೆಯುವ ಜಾತ್ರೆಗೆ ಕರ್ನಾಟಕ ಸೇರಿದಂತೆ ಪಕ್ಕದ ತರಲಂಗಾಣಾ, ಮಹಾರಾಷ್ಟ್ರದಿಂದಲೂ ಲಕ್ಷಾಂತರ ಭಕ್ತರು ಆಗಮಿಸಿ ಪುನೀತರಾಗುತ್ತಾರೆ ಎಂದರು.

ಈ ಜಾತ್ರೆ ಕೇವಲ ಧಾರ್ಮಿಕ ಆಚರಣೆ ಮಾತ್ರವಲ್ಲ, ನಮ್ಮ ಸಂಸ್ಕೃತಿ, ಪರಂಪರೆಯ ಭಾಗವಾಗಿದೆ. ಕ್ಷೇತ್ರದ ಎಲ್ಲ ಜನ ಒಟ್ಟಿ ಸೇರುವ ಒಗ್ಗಟ್ಟಿನ ಸಂಕೇತವೂ ಆಗಿದೆ. ಅಮರೇಶ್ವರರ ಕೃಪೆಯಿಂದ ನಮ್ಮ ಕ್ಷೇತ್ರದಲ್ಲಿ ಶಾಂತಿ, ಸೌಹಾರ್ದತೆ ಹಾಗೂ ಅಭಿವೃದ್ಧಿ ಸದಾ ನೆಲೆಸಿದೆ. ಮುಂದಿನ ದಿನಗಳಲ್ಲಿಯೂ ಉತ್ತಮ ಮಳೆ, ಸಮೃದ್ಧ ಬೆಳೆ, ಮಹಾಜನತೆಯ ಸುಖ, ಶಾಂತಿ, ನೆಮ್ಮದಿ ಹಾಗೂ ಕ್ಷೇತ್ರದ ಸಮೃದ್ಧಿಗಾಗಿ ದೇವರಲ್ಲಿ ಬೇಡಿಕೊಂಡಿದ್ದೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮುಖಂಡರಾದ ಮಾರುತಿ ಚವ್ಹಾಣ, ಶಿವಾಜಿರಾವ ಪಾಟೀಲ ಮುಂಗನಾಳ, ಧೊಂಡಿಬಾ ನರೋಟೆ, ರಾಮಶೆಟ್ಟಿ ಪನ್ನಾಳೆ, ಕೇರಬಾ ಪವಾರ, ಅಶೋಕ ಅಲ್ಮಾಜೆ, ಪ್ರತೀಕ ಚವ್ಹಾಣ, ಖಂಡೋಬಾ ಕಂಗಟೆ, ಸಂಜು ವಡೆಯರ್, ಸಂದೀಪ ಪಟೇಲ್, ರಾವಸಾಬ್ ಪಾಟೀಲ, ಆನಂದ ದ್ಯಾಡೆ, ಮಹಾದೇವ ಅಲ್ಮಾಜೆ, ಜಗನ್ನಾಥ ಚಿಟ್ಮೆ, ಖಂಡೇರಾವ ರಂದವೆ, ರಾಮ ನರೋಟೆ, ಬಾಬು ರಾಠೋಡ, ಧನಾಜಿ ರಾಠೋಡ, ಪ್ರಕಾಶ ಅಲ್ಮಾಜೆ, ರಮೇಶ ಗೌಡಾ ಸೇರಿದಂತೆ ಮುಖಂಡರು, ಭಕ್ತರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಭಕ್ತರ ಹರ್ಷೋದ್ಘಾರ ಹಾಗೂ ಜಯಘೋಷ ಅಮರೇಶ್ವರ ಅಗ್ನಿ ಪೂಜೆ ಸಂಪನ್ನ

- ಮಲ್ಲಮ್ಮ ನುಡಿ ವಾರ್ತೆ ಔರಾದ :



ನಗರದ ಆರಾಧ್ಯ ದೈವ ಬೇಡಿದ ವರ ಕರುಣಿಸುವ ಕಾಮಧೇನು ಈ ಭಾಗದ ಜನರ ಸಂಕಷ್ಟ ಪರಿಹರಿಸುವ ಕಲ್ಪತರು ಉದ್ಭವಲಿಂಗ ಅಮರೇಶ್ವರ ಅಗ್ನಿ ಪೂಜೆ ವಿವಿಧ ಧಾರ್ಮಿಕ ಪದ್ಧತಿಗಳಿಂದ ಅತಿ ವಿಜೃಂಭಣೆಯಿಂದ ಜರುಗಿತು.

ಅಮರೇಶ್ವರ ದೇವರ ಶ್ರದ್ಧೆ, ಭಕ್ತಿಯೊಂದಿಗೆ ಅಗ್ನಿಪ್ರದಕ್ಷಿಣೆಯೂ ಜರುಗಿತು. ಸ್ಥಳೀಯರಲ್ಲದೆ ವಿವಿಧ ರಾಜ್ಯಗಳ ಸಹಸ್ರಾರು ಭಕ್ತರು ಪಾಲ್ಗೊಂಡು ಕೃತಾರ್ಥ ಭಾವ ಭಕ್ತರೊಂದಿಗೆ ಮೆರೆದರು.

ರವಿವಾರ ಮಂದಿರ ದಿಂದ ಹೊರಟ ಅಮರೇಶ್ವರ ದೇವರ ಮೆರವಣಿಗೆ ಪಟ್ಟಣದ ವಿವಿಧ ಬಡಾವಣೆಗಳಾದ ದೇಶಮುಖ ಗಲ್ಲಿ, ಖೂಬಾ ಗಲ್ಲಿ, ಶೆಟಕಾರ್ ಗಲ್ಲಿ,ಚೌದಾಪುಡೆಗಲ್ಲಿ,ಗಾಂದಿ ಚೌಕ,ಸರಕಾರಿ ದವಾಖಾನೆ ಮೂಲಕ ಸಕಲ ವಾದ್ಯ, ಡಿಜೆ ಗಳ ಮೂಖಾಂತರ ಅಗ್ನಿ ಕುಂಡದವರೆಗೆ ನಡೆಯಿತು. ಪಲ್ಲಕ್ಕಿಯನ್ನು ಭಕ್ತರು ತಲೆ ಮೇಲೆ ಹೊತ್ತು ಸಾಗಿದರು. 'ಓಂ ಭಲಾ–ಶಂಕರ್ ಭಲಾ', ಅಮರೇಶ್ವರ ಮಹಾರಾಜ್ ಕೀ ಜೈ, ಹರ–ಹರಾ ಮಹಾದೇವ ಎಂಬಿತ್ಯಾದಿ ಜಯಘೋಷಗಳು ಮೊಳಗಿದವು. ಪಲ್ಲಕ್ಕಿ ಮೆರವಣಿಗೆಯಲ್ಲಿ ಕೋಲಾಟ, ಭಜನೆ ಸೇರಿ ವಿವಿಧ ಕಲಾ ತಂಡಗಳು ಭಾಗವಹಿಸಿದ್ದವು. ಮೆರವಣಿಗೆ ಮೆರಗು ಹೆಚ್ಚಿಸಿದರು. ಅಗ್ನಿ ಪ್ರದಕ್ಷಿಣೆ ಮಾಡಿದ ಭಕ್ತ ವೃಂಧ ಮುಂಜಾನೆ 10 ಗಂಟೆ ಸುಮಾರಿಗೆ ಅಗ್ನಿ ಕುಂಡಕ್ಕೆ ಆಗಮಿಸಿದ ಪಲ್ಲಕ್ಕಿ ಪ್ರದಕ್ಷಿಣೆ ನಂತರ ಸರದಿ ಸಾಲಿನಲ್ಲಿ ನಿಂತು ಸಹಸ್ರಾರು ಭಕ್ತರು ಅಗ್ನಿ ತುಳಿದು ಪಾವನರಾದರು.

ಜಾತ್ರೆಗೆ ಆಗಮಿಸಿದ ಭಕ್ತರಿಗೆ ವಿವಿಧ ದಾಸೋಹಿಗಳಿಂದ ಅನ್ನ ಸಾಂಬಾರು, ಹುಗ್ಗಿ, ಅಂಬಲಿ , ಖಡಕ್ ರೊಟ್ಟಿ, ಭಜ್ಜಿ ಸೇರಿದಂತೆ ವಿವಿಧ ರೀತಿಯ ಮಹಾಪ್ರಸಾದ ವಿತರಣೆಯನ್ನು ಜರುಗಿತು. ಪಲ್ಲಕ್ಕಿ ಬರಲು ತಡವಾದ ಕಾರಣ ಭಕ್ತರು ಅಪಾರ ಸಂಖ್ಯೆಯಲ್ಲಿ ಸೇರಿದ್ದರು. ಒಳನುಗ್ಗಲು ಪ್ರಯತ್ನಿಸಿದಾಗ ಪೊಲೀಸರು ಎಲ್ಲರನ್ನು ಅಚ್ಚುಕಟ್ಟಾಗಿ ಪರಿಸ್ಥಿತಿ ನಿಯಂತ್ರಿಸಿ ಮುನ್ನೆಚ್ಚರಿಕೆ ಕ್ರಮವಾಗಿ ಬ್ಯಾರಿಕೇಡ್ ಅಳವಡಿಸಿ, ಬಿಗಿ ಬಂದೋಬಸ್ತ್ ಮಾಡಿದ್ದರಿಂದ ಅಗ್ನಿಪೂಜೆ ಹಾಗೂ ಪ್ರದಕ್ಷಿಣೆ ಶಾಂತಿಯುತವಾಗಿ ನೆರವೇರಿತು.

## ಬಿಗಿ ಪೊಲೀಸ್ ಬಂದೋಬಸ್ತ್

ಭಾಲ್ಕಿ ವಿಭಾಗದ ಡಿವೈ ಎಸ್ ಪಿ ಶಿವಾನಂದ ಪವಾಡಶೆಟ್ಟಿ ಮಾರ್ಗದರ್ಶನದಲ್ಲಿ ಇಡಿ ನಗರದಲ್ಲಿಯೇ ಪೋಲಿಸ್ ಬಿಗಿ ಬಂದೋಬಸ್ತ್ ಏರ್ಪಡಿಸಲಾಯಿತು. ಎಲ್ಲ ಕಡೆ ಪೊಲೀಸರು ಹದ್ದಿನ ಕಣ್ಣಿನಂತೆ ಭಕ್ತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಸಮರ್ಪಕ ಮುಂಜಾಗೃತಾ ಕ್ರಮವಹಿಸಿರುವುದು ಕಂಡು ಬಂತು. ಬಂದೋಬಸ್ತ್ ನಲ್ಲಿ ಸಿಪಿಐ ರಘುವೀರ ಸಿಂಗ್ ಠಾಕೂರ್, ಪಿ ಎಸ್ ಐಗಳಾದ ವಾಸೀಮ್ ಪಟೇಲ್,ರೇಣುಕಾ ಇತರರಿದ್ದರು.

# ಬಂಜಾರ ಸಮಾಜದ ಸರ್ವತೋಮುಖ ಏಳಿಗೆಗೆ ಸಂತ ಸೇವಾಲಾಲ್ ಮಾರ್ಗವೇ ಆದರ್ಶ: ಬಸವರಾಜ ಮತ್ತಿಮಡು

- ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



ಸಮಾನತೆ ಮತ್ತು ಕಾಯಕದ ಮಹತ್ವವನ್ನು ಜಗತ್ತಿಗೆ ಸಾರಿದ ಮಹಾನ್ ಸಂತ ಸೇವಾಲಾಲ್ ಮಹಾರಾಜರು ಬಂಜಾರ ಸಮಾಜದ ಸರ್ವತೋಮುಖ ಏಳಿಗೆಗೆ ಮಾದರಿ, ಅವರು ಹಾಕಿಕೊಟ್ಟ ದಾರಿಯಲ್ಲಿ ನಡೆಯುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಕಲಬುರಗಿ ಗ್ರಾಮೀಣ ವಿಧಾನ ಸಭಾ ಶಾಸಕರಾದ ಬಸವರಾಜ ಮತ್ತಿಮಡು ಹೇಳಿದರು.

ಭಾನುವಾರ ನಗರದ ಎಸ್ ಎಂ ಪಂಡಿತ್ ರಂಗಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮಹಾನಗರ ಪಾಲಿಕೆ ಹಾಗೂ ಜಿಲ್ಲಾ ಪಂಚಾಯತ್ ಕಲಬುರಗಿ ಇವರುಗಳ ಸಂಯುಕ್ತಾಶ್ರಯದಲ್ಲಿ ಶ್ರೀ ಸಂತ ಸೇವಾಲಾಲ ಮಹಾರಾಜರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು.

ಬಂಜಾರ ಸಮಾಜವು ಕಲೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಷೇತ್ರದಲ್ಲಿ ಇಡೀ ವಿಶ್ವಕ್ಕೆ ಮಾದರಿಯಾಗಿದೆ. ನುಡಿದಂತೆ ನಡೆಯುವ ಮತ್ತು ಕೈಹಿಡಿದವರನ್ನು ಎಂದಿಗೂ ಕೈಬಿಡದ ವಿಶ್ವಾಸಾರ್ಹ ಸಮಾಜವಿದು ಎಂದು ಶ್ಲಾಘಿಸಿದರು. ಬಂಜಾರ ಸಮಾಜದ ಅಭಿವೃದ್ಧಿಗೆ ರಾಜಕೀಯ ಮರೆತು ಒಂದಾಗಲು ನಾವೆಲ್ಲರೂ ಶ್ರಮಿಸಬೇಕು ಎಂದು ಹೇಳಿದರು.

ಚಿಂಚೋಳಿ ವಿಧಾನ ಸಭಾ ಶಾಸಕರಾದ ಡಾ. ಅವಿನಾಶ ಜಾಧವ ಮಾತನಾಡಿ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರು ಸರ್ಕಾರದಲ್ಲಿದ್ದಾಗ ಬಂಜಾರಾ ಸಮಾಜದ ನಿಗಮ ಸ್ಥಾಪನೆ ಮಾಡಿದರು. ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ನಮ್ಮ ಸಮುದಾಯದ ಅಭಿವೃದ್ಧಿಗೆ ಅನುದಾನ ನೀಡಿದರು. ಪಕ್ಷಾತೀತವಾಗಿ ನಡೆದ ಅಭಿವೃದ್ಧಿ ಕೆಲಸಗಳು ಸಮಾಜದ ಏಳಿಗೆಗಾಗಿ ಈ ಹಿಂದೆ ಅಧಿಕಾರದಲ್ಲಿದ್ದ ಎಲ್ಲ ಪಕ್ಷಗಳ ನಾಯಕರು ಶ್ರಮಿಸಿರುವುದನ್ನು ಅವರು ಸ್ಮರಿಸಿದರು.

ಸಮಾಜದ ಸರ್ವತೋಮುಖ ಅಭಿವೃದ್ಧಿಯಾಗಬೇಕಿದ್ದರೆ ಯಾವುದೇ ರಾಜಕೀಯ ಪಕ್ಷಪಾತ ಹಾಗೂ ಭಿನ್ನಾಭಿಪ್ರಾಯಗಳನ್ನು ಮರೆತು ನಾವೆಲ್ಲರೂ ಮೊದಲು ಒಂದಾಗಬೇಕು. ಸಮಾಜದ ಹಿರಿಯರು ಮತ್ತು ಕಿರಿಯರು ಒಗ್ಗಟ್ಟಿನಿಂದ ಶ್ರಮಿಸಿದರೆ ಮಾತ್ರ ಸಮಾಜಕ್ಕೆ ಒಳ್ಳೆಯದು ಮಾಡಲು ಸಾಧ್ಯ ಎಂದು ತಿಳಿಸಿದರು.

ಶ್ರೀ ಸಂತ ಸೇವಾಲಾಲ್ ಮಹಾರಾಜ ಜಿಲ್ಲಾ ಗೌರವಾಧ್ಯಕ್ಷರು ಹಾಗೂ ಮಾಜಿ ಸಚಿವರು ಶ್ರೀ ರೇವೂ ನಾಯಕ ಬೆಳಮಗಿ ಅವರು ಮಾತನಾಡಿ, ಅನೇಕ ಪವಾಡ್‌ಗಳು ಮಾಡಿದ ಅವರು ತಮ್ಮ ಪಾವಿತ್ರ್ಯತೆಯನ್ನು ಕಾಪಾಡಿಕೊಂಡು ಬಂಜಾರ ಸಮುದಾಯಕ್ಕೆ ನೀಡಿದ ತತ್ವಗಳು ಮತ್ತು ಆದರ್ಶ ಮಾರ್ಗದಲ್ಲಿ ಪ್ರತಿಯೊಬ್ಬರು ನಡೆಯಬೇಕೆಂದು ತಿಳಿಸಿದರು. ಹಾಗೂ ಬಂಜಾರ ಸಮುದಾಯದ ಸೇವಾಲಾಲ ಮಹಾರಾಜ ಜಯಂತಿ ವಿಜೃಂಭಣೆಯಿಂದ ಆಚರಿಸುವ ಮೂಲಕ ಈ ಸಮಾಜದ ಯುವಕರು ವಿದ್ಯಾರ್ಥಿಗಳು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಾರೆ ಎಂದರು.

ಇತ್ತೀಚಿನ ದಿನಗಳಲ್ಲಿ ಸಮಾಜಕ್ಕಿಂತ ರಾಜಕೀಯಕ್ಕೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ ಎಂಬ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ ಅವರು, ನಮ್ಮ ನಡುವೆ ಸಣ್ಣಪುಟ್ಟ ಗೊಂದಲಗಳಿರಬಹುದು ಆದರೆ ಸಮಾಜದ ಹಿತಕ್ಕಾಗಿ ಅದೆಲ್ಲವನ್ನೂ ಮರೆತು ಒಂದಾಗಬೇಕು. ರಾಜಕೀಯವನ್ನು ಎರಡನೇ ಆದ್ಯತೆಯನ್ನಾಗಿ ಇಟ್ಟುಕೊಂಡು, ಸಮಾಜದ ಏಳಿಗೆಗೆ ಮೊದಲ ಆದ್ಯತೆ ನೀಡಬೇಕು ಎಂದು ತಿಳಿಸಿದರು. ವಿಧಾನ ಪರಿಷತ್ ಶಾಸಕ ಡಾ.ಬಿ.ಜಿ. ಪಾಟೀಲ ಮಾತನಾಡಿದರು.

ಸಮಾಜದ ಮುಖಂಡರಾದ ಡಾ. ಗಣಪತಿ ರಾಠೋಡ ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಸೇವಾಲಾಲ ಜಯಂತಿ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿ ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕಿ ಜಗದೀಶ್ವರಿ ಅ ನಾಸಿ ಅವರು ಸ್ವಾಗತಿಸಿದರು.

ಇದಕ್ಕೂ ಮುನ್ನ ನಗರೇಶ್ವರ ಸ್ಕೂಲ್‌ನಿಂದ ಭವ್ಯವಾದ ಮೆರವಣಿಗೆ ಮೂಲಕ ರಂಗಮಂದಿರಕ್ಕೆ ಆಗಮಿಸಿತು.

ಸಮಾರಂಭದಲ್ಲಿ ವಿಧಾನ ಪರಿಷತ್ ಶಾಸಕರಾದ ಶಶೀಲ ಜಿ ನಮೋಶಿ, ಜಿಲ್ಲಾಧಿಕಾರಿ ಕಚೇ–ರಿಯ ಸಹಾಯಕ ಶಿವಪ್ರಭು ಹೀರೆಮಠ, ಸುಕ್ಷೇತ್ರ ಕೆಸರಟಗಿಯ ಮಾತಾ ಲತಾ ದೇವಿ, ಓಂಕಾರ ಮಹಾರಾಜ, ಶಂಕರ ಮಹಾರಾಜ ದಿವ್ಯ ಸಾನಿಧ್ಯವಹಿಸಿದರು. ಎಸ್.ಸಿ/ಎಸ್.ಟಿ ರಾಜ್ಯ ನೌರರ ಸಂಘದ ರಾಜ್ಯಾಧ್ಯಕ್ಷ ಮಹೇಶ ಹುಬಳ್ಳಿ ,ಜಯಂತಿ ಅಧ್ಯಕ್ಷರಾದ ಸಾಗರ ರಾಠೋಡ ಸೇರಿದಂತೆ ಸಮಾಜದ ಮುಖಂಡರಾದ ವಿಠಲ ಜಾಧವ, ಪ್ರೇಮಸಿಂಗ ಚವ್ಹಾಣ, ಶ್ಯಾಮನೂರ ಪವರ, ಕೃಷ್ಣೇನಾಯಕ, ಬಾಬು ಜಾಧವ, ಉಮೇಶ ರಾಠೋಡ, ರಾಕೇಶ ಚವ್ಹಾಣ ಸೇರಿದಂತೆ ಸಮಾಜದ ಮುಖಂಡರು ಇದ್ದರು.

### ಗ್ರಾಮಸ್ಥರಲ್ಲಿ ಭಯ ಮೂಡಿಸಿದ ಮೊಸಳೆ


# ಸೆರೆ ಹಿಡಿದು ಸುರಕ್ಷಿತ ಸ್ಥಳಕ್ಕೆ ಬಿಟ್ಟ ಅರಣ್ಯಾಧಿಕಾರಿಗಳು



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಗ್ರಾಮದ ಜನರು ನೀರಿಗೆ ಇಳಿಯುವ ಸಮಯದಲ್ಲಿ ಮತ್ತು ಜಾನುವಾರುಗಳನ್ನು ಇಳಿಸುವಾಗ ಜಾಗ್ರತೆ ವಹಿಸಬೇಕು. ಅರಣ್ಯ ಇಲಾಖೆ ಸಿಬ್ಬಂದಿಗಳು ನಿರಂತರವಾಗಿ ಮೊಸಳೆಗಳ ಬಗ್ಗೆ ನಿಗಾವಹಿಸಲಿದ್ದಾರೆ ಎಂದು ಅರಣ್ಯ ಇಲಾಖೆಯ ಡಿ.ವೈ.ಆರ್.ಎಫ್.ಓ ಭೀಮಾಶಂಕರ ಗಣಪುರ ಅವರು ತಿಳಿಸಿದರು. ಕಣೆಕಲ್ ಗ್ರಾಮಸ್ಥರಲ್ಲಿ ಭಯ ಮೂಡಿಸಿದ್ದ ಕೆರೆಯಲ್ಲಿನ ಸುಮಾರು 200ಇಾರ ಭಾರದ ಮೊಸಳೆಯನ್ನು ಸತತ 16 ಗಂಟೆಗಳ ಕಾರ್ಯಾಚರಣೆ ನಡೆಸಿ ಸೆರೆ ಹಿಡಿದು ಅವರು ಮಾತನಾಡಿದರು. ಮೊಸಳೆ ಕಂಡು ಬಂದಲ್ಲಿ ಸಾರ್ವಜನಿಕರು ತಕ್ಷಣ ಇಲಾಖೆಗೆ ತಿಳಿಸಿದರೆ ಅವುಗಳನ್ನು ಸೆರೆ ಹಿಡಿದು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳುತ್ತೇವೆ ಎಂದರು. ಈ ಸಂದರ್ಭದಲ್ಲಿ ಅರಣ್ಯ ಬೀಟ್ ಅಧಿಕಾರಿ ಶ್ರವಣಕುಮಾರ ಹೊಸಮಠ, ಅರಣ್ಯ ವೀಕ್ಷಕ ಸೋಮಯ್ಯ ಪ್ರಚಂಡಿ, ವಿಶ್ವರಾಧ್ಯ ಶರಣಪ್ಪ, ಮೀನುಗಾರರಾದ ಭಾಗಪ್ಪ, ಯಲ್ಲಪ್ಪ, ಗ್ರಾಮಸ್ಥರಾದ ಸುರೇಶ ಗೌಡ ಬೀರಾದರ್ ಪಾಟೀಲ, ಮಲ್ಲು ಗೌಡ ಪೊಲೀಸ್ ಪಾಟೀಲ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಸೇವಲಾಲರು ಹಸಿದವರಿಗೆ ರೊಟ್ಟಿಕೊಡಿ ಎಂದು ಮಾನವೀಯತೆ ಮೆರೆದ ಸಂತರು




• **ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು**


ತಾಲೂಕು ಕಛೇರಿಯ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ಇಂದು "ಶ್ರೀ ಸಂತ ಸೇವಾಲಾಲ್ ಜಯಂತಿ" ಕಾರ್ಯಕ್ರಮವನ್ನು ಆಚರಿಸಲಾಯಿತು. ಸೇವಾಲಾಲರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ತಹಶೀಲ್ದಾರರಾದ ಅಮರೇಶ್ ಜಿ ಕೆ ಇವರು ಚಾಲನೆ ನೀಡುತ್ತಾ, ಸೇವಾಲಾಲರು ಶ್ವೇತ ವಸ್ತ್ರ ಧಾರಿಯಾಗಿ, ಶ್ವೇತ ಧ್ವಜವನ್ನು ಹಿಡಿದು ದೇಶದ ನಾನಾ ಕಡೆ ಸಂಚರಿಸಿ ಶಾಂತಿಯ ಮಂತ್ರವನ್ನು ಭೋದಿಸಿದರು. ದಾರಿ ತಪ್ಪುತ್ತಿದ್ದ ಯುವಕರಿಗೆ "ಮಧ್ಯ, ಗಾಂಜಾ ವ್ಯವಸಗಳಿಂದ ದೂರವಿರಿ" "ಹಸಿದವರಿಗೆ ರೊಟ್ಟಿಕೊಡಿ" "ಬಾಯಾರಿದವರಿಗೆ ನೀರುಣಿಸಿ" ಎಂದು ಮಾರ್ಗದರ್ಶನ ನೀಡಿ ಮಾನವೀಯತೆಯನ್ನು ಮೆರೆದ ಸಂತರು. ಸಂಕಷ್ಟದಲ್ಲಿದ್ದ ಬಂಜಾರ ಸಮುದಾಯಕ್ಕೆ ದಾರಿ ದೀಪವಾಗಿದ್ದರು. ವಿವಿಧ ಜನಾಂಗದ ಸಂತರಂತೆ ಇವರು ಸಹಾ ಒಬ್ಬ ಮಹಾನ್ ಸಂತರಾಗಿದ್ದಾರೆ. ಸಂವಿಧಾನದ ಆಶಯದಂತೆ ಸೌಲಭ್ಯಗಳನ್ನು ಪಡೆದುಕೊಂಡು ಅಭಿವೃದ್ದಿಯನ್ನು ಹೊಂದಲು ಪ್ರಯತ್ನಿಸಿ ಎಂದರು.

ಜ್ಯೋತಿನಾಯ್ಕ ಉಪನ್ಯಾಸಕರು, ಚಿಕ್ಕಜೋಗಿಹಳ್ಳಿ ಇವರು ಜಗದಂಬೆಪ ಪರಮ ಭಕ್ತರಾಗಿದ್ದ ಸೇವಾಲಾಲರು 1739 ರಲ್ಲಿ ಭೀಮನಾಯ್ಕ ಧರಮಣೀ ಭಾಯಿಯವರ ಮಗನಾಗಿ ದಾವಣಗೆರೆ ಜಿಲ್ಲೆಯ ಸೂರಗೊಂಡನಕೊಪ್ಪ ಗ್ರಾಮದಲ್ಲಿ ಜನಿಸಿದರು. ನಾಡಿನಿಂದ ದೂರವಿದ್ದು ಕಾಡಿನಲ್ಲಿ ಬದುಕುದಿದ್ದ ಸಮುದಾಯವರು ಅನಕ್ಷರತೆ ಹಾಗೂ ಮೂಢ ನಂಬಿಕೆಗಳಿಂದ ಜೀವನ ನಡೆಸುತ್ತಿದ್ದ ಇವರಿಗೆ ಜ್ಞಾನ ನೀಡಿದ ಮಾರ್ಗದರ್ಶಕರು. ಶಾಂತಿ ಧೂತರಾಗಿ ಬರೀ ಭೋದಕರಾಗಿರದೇ ಸಂಕಷ್ಟ ಬಂದಾಗ ಕತ್ತಿ ಹಿಡಿದು ಹೋರಾಡಿ ಜನಾಂಗವನ್ನು ರಕ್ಷಿಸಿದ್ದಾರೆ. ಪೋರ್ಚ್ಗೀಸ್ ಹಡಗು ಸಂಕಷ್ಟದಲ್ಲಿದ್ದಾ ರಕ್ಷಿಸಿದ್ದರಿಂದ ಅವರು ಮುತ್ತಿನ ಹಾರವನ್ನು ನೀಡಿ ಸನ್ಮಾನಸಿದ್ದಾರೆ. ಹೈದರಾಬಾದಿನಲ್ಲಿ ಕಾಲರದಲ್ಲಿ ಸಂಕಷ್ಟದಲ್ಲಿ ಜನರನ್ನು, ನಿಜಾಮರ ತಾಯಿಯನ್ನು ಗುಣಪಡಿದ ಕಾರಣಕ್ಕೆ ಅವರನ್ನು ನಿಜಾಮರು ಗೌರಸಿದರು. ಬ್ರಿಟಿಷರ ಕ್ಯಾಪ್ಟನ್ ಬೆಸ್ಟ್ ವಿರುದ್ಧ ಸಹಾ ಹೋರಾಡಿ ಬಂಜಾರ ಸಮಾಜವನ್ನು ರಕ್ಷಿಸಿದ್ದಾರೆ. ಹೀಗಾಗಿ ಇವರನ್ನು ಲಂಬಾಣಿ ಜನಪದ ಹಾಡುಗಳಲ್ಲಿ, ಲಾವಣಿಗಳಲ್ಲಿ ಇವರನ್ನು ಹಾಡಿ ಹೊಗಳಿದ್ದಾರೆ. ಬಂಜಾರ ಸಮುದಾಯ ರಾಜಸ್ತಾನ, ತಮಿಳು, ಆಂದ್ರ, ತೆಲಂಗಾಣ, ಮಹಾರಾಷ್ಟ್ರ, ಮಧ್ಯ ಪ್ರದೇಶ ಹೀಗೆ ಹಲವಾರು ಕಡೆ ಇದೆ. ಇಂತಹ ಮಹಾ ಮಹಿಮಾನ್ ಸಂತರು ಕರ್ನಾಟಕದಲ್ಲಿ ಜನಿಸಿದ್ದರು ಎಂಬ ಸಂತಸ ನಮ್ಮದಾಗಿದ್ದು, ಅವರ ಸಂದೇಶದಂತೆ ನಾವೆಲ್ಲಾ ಮುನ್ನೆಡೆಯಬೇಕಿದೆ ಎಂದು ಉಪನ್ಯಾಸ ನೀಡಿದರು.

ತಾಲೂಕು ಬಂಜಾರ ಸಮಾಜದ ಅಧ್ಯಕ್ಷರಾದ ಭೀಮಾನಾಯ್ಕ, ರೈತ ಮುಖಂಡ ಜಯಪ್ರಕಾಶ್ ನಾಯ್ಕ ಕೆ ಎಸ್ ಇವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ದೂಪದಹಳ್ಳಿ ಹಟ್ಟಿ ನಾಯ್ಕ ಸೋಮ್ಲನಾಯ್ಕ, ಕೊಟ್ಟೂರಿನ ದೇವೇಂದ್ರನಾಯ್ಕ, ತಿಮ್ಮಲಾಪುರ ತಾಂಡದ ಶೇಖರನಾಯ್ಕ, ಕೃಷ್ಣನಾಯ್ಕ, ಬಾಲಾನಾಯ್ಕ, ರಮೇಶನಾಯ್ಕ, ಶಿರಸ್ತೇದಾರ್ ಚಂದ್ರನಾಯ್ಕ, ಉಪತಹಶೀಲ್ದಾರ್ ಅನ್ನದಾನೇಶ ಬಿ ಪತ್ತಾರ್, ಕಂದಾಯ ನಿರೀಕ್ಷಕ ಡಿ ಶಿವಕುಮಾರ್, ಗ್ರಾಮ ಆಡಳಿತ ಅಧಿಕಾರಿ ಹರೀಶ್, ಭೂಮಾಪನ ಸಿಬ್ಬಂದಿ ಬಸವರಾಜ, ನಾಗರಾಜ, ಗೌರಮ್ಮ ಪ್ರದಸ ಹಾಗೂ ಇತರರು ಇದ್ದರು. ಸಿ ಮ ಗುರುಬಸವರಾಜ ಸ್ವಾಗತಿಸಿ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಸಮುದಾಯದ ವಿವಿಧ ಮುಖಂಡರನ್ನು ಸನ್ಮಾನಿಸಲಾಯಿತು.

# ಸಂತ ಸೇವಾಲಾಲರ ಆದರ್ಶಗಳನ್ನು ಅಳವಡಿಸಿಕೊಳ್ಳಿ: ಶ್ರೀಧರ್



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಸಂತ ಸೇವಾಲಾಲ್‌ರು ಬಂಜಾರ ಸಮಾಜದ ಪವಾಡ ಪುರುಷ ಸಮಾಜದಲ್ಲಿನ ಮೌಢ್ಯತೆ ತೊಡೆದು ಹಾಕಿದ ಮಹಾನ್ ಸಂತ ಅವರ ಆದರ್ಶಗಳನ್ನು ನಿಜ ಜೀವನದಲ್ಲಿ ಆಳವಡಿಸಿಕೊಳ್ಳಬೇಕು ಎಂದು ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಶ್ರೀಧರ್ ಸಾಹುಕಾರ ಹೇಳಿದರು. ತಾಲೂಕು ಬಂಜಾರ ಸಮಾಜದಂತೆ ಹಮ್ಮಿಕೊಂಡಿದ್ದ ಸಂತ ಸೇವಾಲಾಲ್ ಮಹಾರಾಜರ ಜಯಂತಿಯ ಭಾವಚಿತ್ರ ಮೆರವಣಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಬಂಜಾರ ಸಮಾಜದ ಉದ್ದಾರಕ್ಕೆ ಜನಿಸಿದ ಸಂತ ಸೇವಾಲಾಲ್ ಅವರು ಸತ್ಯ, ಅಹಿಂಸಾ ತತ್ವವನ್ನು ಬೋಧಿಸಿದವರು. ತಪಸ್ಸು, ಧ್ಯಾನ ಮತ್ತು ಭಕ್ತಿ ಮೂಲಕ ಆಧ್ಯಾತ್ಮವನ್ನು ಅಪ್ಪಿಕೊಂಡು,

ದೇವರನ್ನು ಒಲಿಸಿಕೊಂಡ ಮಹಾನ್ ಜ್ಞಾನಿ ಸೇವಾಲಾಲ್ ಅವರು ಕೇವಲ ಒಂದು ಸಮುದಾಯಕ್ಕೆ ಸೀಮಿತರಾಗದೆ ಸರ್ವ ಜನಾಂಗದ ಏಳಿಗೆಗೆ ಶ್ರಮಿಸಿದ್ದಾರೆ ಎಂದು ಹೇಳಿದರು. ಕಲಬುರ್ಗಿ ಬೀದರ್ ಹಾಲು ಒಕ್ಕೂಟದ ಮಾಜಿ ಅಧ್ಯಕ್ಷ ಸಿದ್ದಣ್ಣಗೌಡ ಕಾಡಂನೋರ ಮಾತನಾಡಿ ಸಂತ ಸೇವಾಲಾಲರು ಮೌಢ್ಯತೆ ನಿವಾರಣೆಗೆ ಸಮಾಜಕ್ಕೆ ಉತ್ತಮ ಸಂದೇಶಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಸೇವಾಲಾಲರಂತ ಮಹಾನ್ ಪುರುಷರ ಜೀವನ ಚರಿತ್ರೆಯನ್ನು ಇಂದಿನ ಯುವ ಪೀಳಿಗೆಯು ಅರಿತುಕೊಳ್ಳಬೇಕಾಗಿದೆ ಬಂಜಾರ ಸಮುದಾಯದ ಜನ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಅವರನ್ನೆ ಆಸ್ತಿಯನ್ನಾಗಿಸಿಕೊಳ್ಳುವುದರ ಜೊತೆಗೆ ಸರಕಾರದ ವಿವಿಧ ಸೌಲಭ್ಯಗಳನ್ನು ಪಡೆದು ಆರ್ಥಿಕವಾಗಿ ಸದೃಢರಾಗಬೇಕು ಎಂದು ಹೇಳಿದರು.

ಸೇವಾಲಾಲರ ಭಾವಚಿತ್ರದ ಮೆರವಣಿಗೆಯು ಪಟ್ಟಣದ ಸರ್ಕಾರಿ ಆಸ್ಪತ್ರೆಯಿಂದ ವಾಲ್ಮೀಕಿ ವೃತ್ತದ ವರೆಗೆ ಜರುಗಿತು. ಈ ಸಂದರ್ಭದಲ್ಲಿ ಡಾ.ಜಗದೀಶ್ ಹಿರೇಮಠ, ಡಾ.ಮರೆಪ್ಪ ನಾಟೇಕಾರ, ಮಲ್ಲಣ್ಣ ನೀಲಳ್ಳಿ, ಶಿವಕುಮಾರ್ ಕೊಂಕಲ, ಮಂಜು ಗುತ್ತೇದಾರ್, ಮಲ್ಲು ಚಾಪೆಲ್, ಬಸವರಾಜ್ ರಾಠೊಡ್, ಲಕ್ಷ್ಮಣ್ ನಾಯಕ್, ರಾಜಪ್ಪ, ಖೇಮಣ್ಣ ನಾಯಕ್, ಬಸವರಾಜ್ ರಮೇಶ್, ಕಮಲಪ್ಪ ನಾಯಕ್, ಪಂಪಣ್ಣ ನಾಯಕ್, ಡಾಖಪ್ಪ, ಗೋವಿಂದ, ಬಸವರಾಜ್ ದಳಪತಿ, ಬಸವರಾಜ ರಾಠೋಡ್, ಪಂಪಣ್ಣರಾಠೊಡ, ಖೆಮಣ್ಣ ಪವಾರ್ ಕಮಲಪ್ಪ ನಾಯಕ್, ಹಾಗೂ ಸಮಾಜದ ಮುಖಂಡರು, ಯುವಕರು, ಮಹಿಳೆಯರು ಇದ್ದರು.

### ವೇಮನರ ತತ್ವಚಿಂತನ–ಪ್ರದೀಪ ಗುರೂಜಿ ಅಭಿಮತ

# ಮಹಾತ್ಮರ ಸಂದೇಶಗಳು ಸವೆಯದ ಸಂಪತ್ತು



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ**

ಮಹಾತ್ಮರು, ಶರಣರು, ತತ್ವಜ್ಞಾನಿಗಳ ಸಂದೇಶ, ಅವರ ತತ್ವದಾರ್ಶಗಳು ಸರ್ವಕಾಲಕ್ಕೂ ಸವೆಯದ ಸಂಪತ್ತು ಎಂದು ಆಧ್ಯಾತ್ಮಿಕ ಚಿಂತಕ ಪ್ರದೀಪ ಗುರೂಜಿ ಹೇಳಿದರು.

ಬೆನಕಟ್ಟಿಯ ಹೇಮ ವೇಮನ ಸದ್ಬೋಧನ ಪೀಠ ಮುಧೋಳ ತಾಲ್ಲೂಕಿನ ಕಿಲ್ಲಾಹೊಸಕೋಟಿಯ ಪಾಂಡುರಂಗ ದೇವಸ್ಥಾನದಲ್ಲಿ ಶನಿವಾರ ಸ್ಥಳೀಯ ಹೇಮ ವೇಮನ ಯುವಕ ಸಂಘದ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಮನೆ ಮನದಲ್ಲಿ ವೇಮನರ 189 ನೇ ಮಾಸಿಕ ತತ್ವ ಚಿಂತನ ಹಾಗೂ ಹೇಮರಡ್ಡಿ ಮಲ್ಲಮ್ಮ ಸ್ಮರಣೋತ್ಸವ ಕಾರ್ಕ್ರಮದಲ್ಲಿ 'ದೇಶ ವೇಷಗಳನು ದೇವ ನೋಡನಯ್ಯ...' ಎಂಬ ಮಹಾಯೋಗಿ ವೇಮನರ ವಚನ ಕುರಿತು ಅವರು ಉಪನ್ಯಾಸ ನೀಡಿದರು.

ವೇಷ ಭೂಷಣಗಳನ್ನು ಹಾಕಿಕೊಂಡು ದೇವರನ್ನು ಕಾಣಬಯಸಿದರೆ ಆಗದು ಎಂದಿರುವ ಮಹಾಯೋಗಿ ವೇಮನರು, ಭಕ್ತಿ, ಭಾವದಿಂದ ನಮ್ಮೊಳಗೇ ದೇವರನ್ನು ಕಾಣಬಹುದಾಗಿದೆ ಎಂದಿದ್ದಾರೆ. ಹೀಗಾಗಿ ಉದರ ನಿಮಿತ್ತಕ್ಕೆ ವೇಷ ಹಾಕುವ ಮನಸ್ಥಿತಿಯಿಂದ ಮನುಷ್ಯ ದೂರವಿರಬೇಕು ಎಂದ ಗುರೂಜಿ, ಪ್ರತಿಯೊಬ್ಬ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಒಳ್ಳೆಯ ಸಂಸ್ಕಾರ ಕೊಟ್ಟು ಸನ್ಮಾರ್ಗಿಗಳನ್ನಾಗಿ ಮಾಡಿ ಶಿವಯೋಗದ ಮಾರ್ಗದಲ್ಲಿ ನಡೆಯುವಂತೆ ಮಾಡಬೇಕು ಎಂದರು.

ಅತಿಥಿಗಳಾಗಿದ್ದ ನಿವೃತ್ತ ಶಿಕ್ಷಕ ಡಿ.ಪಿ.ಅಮಲಝರಿ, ಸತ್ಸಂಗ ಮನುಷ್ಯನನ್ನು ಪರಿಪೂರ್ಣನನ್ನಾಗಿ ಮಾಡುತ್ತದೆ. ಶ್ರದ್ಧೆ, ಭಕ್ತಿ ಬೆಳೆಸಿಕೊಂಡು ನಿಷ್ಠೆಯಿಂದ ಕಾಯಕ ಮಾಡಿ ಬದುಕು ಸಾಗಿಸಿ ನೆಮ್ಮದಿ ಪಡೆಯಬೇಕು. ಮಕ್ಕಳಿಗೆ ಮಹಾಯೋಗಿ ವೇಮನರ ಸಂದೇಶಗಳನ್ನು ತಿಳಿಸಿ ಸುಂದರ ಬದುಕು ಕಟ್ಟಿಕೊಳ್ಳಲು ಮಾರ್ಗದರ್ಶನ ಮಾಡಬೇಕು ಎಂದು ಹೇಳಿದರು.

ವೆಂಕನಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಗಾಳೆಪ್ಪ ಮುಳ್ಳೂರ, ವೆಂಕಣ್ಣ ಬೂದಿಹಾಳ, ವೆಂಕಣ್ಣ ವರ್ಚಗಲ್, ಗೋಪಾಲ ಕಿಲಬನೂರ, ಅಪ್ಪಾಸಾಹೇಬ ಮುಳ್ಳೂರ ಅತಿಥಿಗಳಾಗಿದ್ದರು. ರಾಕೇಶ ಮುದಿಗೌಡರ, ಸಚಿನ್ ಮುಳ್ಳೂರ, ರಂಗನಾಥ ಮುಳ್ಳೂರ, ನವೀನ ಮುಳ್ಳೂರ, ಶಿಕ್ಷಕ ರವಿ ಕಂಗಳ, ಡಿ.ಎಂ.ಬೆಣ್ಣೂರ, ಮಾಲತೇಶ ಅಮಾತೆಪ್ಪನವರ ವೇದಿಕೆಯಲ್ಲಿದ್ದರು.

ಬೆನಕಟ್ಟಿಯ ಹೇಮರಡ್ಡಿ ಮಲ್ಲಮ್ಮ ಭಜನಾ ತಂಡದವರು ವೇಮನ ವಚನ ಪಠಿಸಿದರು. ಬಸವರಾಜ ವರ್ಚಗಲ್ ಸ್ವಾಗತಿಸಿದರು. ರಮೇಶ ಅಣ್ಣಿಗೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು.

# ಯಾದಗಿರಿ ಜಿಲ್ಲಾ ಉತ್ಸವ ಯಾವಾಗ? ಬಿರೇಶ ಚಿರತೆನೋರ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**



ಯಾದಗಿರಿ ಜಿಲ್ಲೆಯಾಗಿ 17 ವರ್ಷ ಕಳೆದರೂ ಕೂಡಾ ಯಾದಗಿರಿಯಲ್ಲಿ ಜಿಲ್ಲಾ ಉತ್ಸವ ಕಾರ್ಯಕ್ರಮ ಆಗಿರುವುದಿಲ್ಲ, ಇಲ್ಲಿನ ನೆಲ, ಜಲ, ಭಾಷೆ, ಸಾಂಸ್ಕೃತಿಕ, ಸಾಹಿತ್ಯ, ಜಾನಪದ, ಗೀಗಿ ಪದ, ಡೊಳ್ಳಿನ ಪದ, ಶೋಭಾನ ಪದ, ಹಗಲು ವೇಷ, ನಾನಾ ರೀತಿಯ ಕಲಾವಿಧರು ಇದ್ದರು ಕೂಡಾ ಗುರುತಿಸುವ ಕೆಲಸ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಕನ್ನಡ & ಸಂಸ್ಕೃತಿ ಇಲಾಖೆ, ನಗರಸಭೆ ಯಾವುದೇ ರೀತಿಯ ಉತ್ಸವ ಮಾಡಲು ಮುಂದೆ ಬರುತ್ತಿಲ್ಲ ಎಂದು ಕರ್ನಾಟಕ ರಕ್ಷಣಾ ವೇದಿಕೆಯ ಸ್ವಾಭಿಮಾನಿ ಬಣ ಜಿಲ್ಲಾಧ್ಯಕ್ಷ ಬಿರೇಶ ಚಿರತೆನೋರ ಮಾಧ್ಯಮದ ಮೂಲಕ ಸರ್ಕಾರಕ್ಕೆ ಮನವಿ ಮಾಡಿದರೆ. ರಾಜ್ಯ ಸರ್ಕಾರ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಉತ್ಸವ ಆಚರಣೆ ಮಾಡುತ್ತಿದ್ದು, ಆದರೆ ಯಾದಗಿರಿ ಜಿಲ್ಲೆಯ ಜನತೆಗೆ ನಿರಾಸದಾಯಕ ಮೂಡಿಸಿದ್ದು, ಜಿಲ್ಲೆಯ ಜನರು ಅಪಾರವಾದ ನಿರೀಕ್ಷೆ ಇಟ್ಟುಕೊಂಡಿದ್ದು, ಆದರೆ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಅಧಿಕಾರಿಗಳ ದಿವ್ಯ ನಿರ್ಲಕ್ಷ ತನದಿಂದ ಜಿಲ್ಲಾ ಉತ್ಸವ ಕಾರ್ಯಕ್ರಮ ನೆನೆಗುದಿಗೆ ಬಿದ್ದಿದೆ ಎಂದು ನಿರಾಸದಾಯಕವಾಗಿ ಹೇಳಿದರು.

# ಜಿಲ್ಲಾ ಬಿಜೆಪಿ ಅಧ್ಯಕ್ಷ, ಪದಾಧಿಕಾರಿಗಳ ನೇಮಕ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಬಿಜೆಪಿ ಜಿಲ್ಲಾ ಸಮಿತಿ ಹಾಗೂ ವಿವಿಧ ಮೋರ್ಚಗಳಿಗೆ ನೂತನ ಅಧ್ಯಕ್ಷ ಹಾಗೂ ಪದಾಧಿಕಾರಿಗಳನ್ನು ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಮೊಕ ಅವರು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ. ಜಿ. ಟಿ.ಪಂಪಾಪತಿ, ಕೆ. ಬಿ.ವೆಂಕಟೇಶ್, ಹಾಲಕುಂದಿ ಮಲ್ಲಿಕಾರ್ಜುನ ಗೌಡ, ಅಳ್ಳಳ್ಳಿ ವೀರೇಶ್ ಗೌಡ, ಪುಷ್ಪಾವತಿ, ದೊಡ್ಡ ಹುಲಗಪ್ಪ, ಉಡೆಡ್ ಸುರೇಶ್, ಶ್ರೀನಿವಾಸ್ (ಜಿಲ್ಲಾ ಉಪಾಧ್ಯಕ್ಷರು), ಆರ್.ಸೋಮನ ಗೌಡ, ಅಡವಿ ಸ್ವಾಮಿ, ಸುನಿಲ್ ರೆಡ್ಡಿ ( ಜಿಲ್ಲಾ ಪ್ರಧಾನ ಕಾರ್ಯದರ್ಶಿ), ರಾಮಾಂಜನಿ, ಡಾ.ರೇಣುಕಾ, ಮಲ್ಲಿಕಾರ್ಜುನ ಗೌಡ ನ್ಯಾಯವಾದಿ, ರಾಘವೇಂದ್ರ ಛಲವಾದಿ, ನಾನಾ ಸಾಹೇಬ್ ನಿಕ್ಕಂ, ಜ್ಯೋತಿ ಪ್ರಕಾಶ್, ಎಸ್. ಆರ್.ಶರಣ್ ಕುಮಾರ್, ಹುಂಡೇಕರ್ ರಾಜೇಶ್ (ಜಿಲ್ಲಾ ಕಾರ್ಯದರ್ಶಿಗಳು), ಬುಡಾ ಮಾಜಿ ಅಧ್ಯಕ್ಷ ಮಾರುತಿ ಪ್ರಸಾದ್ ಸರ್ವಶೆಟ್ಟಿ(ಖಜಾಂಚಿ), ಕೆ.ರವಿಕುಮಾರ್ ಜಿಲ್ಲಾ ಕಾರ್ಯಾಲಯದ ಕಾರ್ಯದರ್ಶಿಗಳನ್ನಾಗಿ ನೇಮಕ ಮಾಡಿದ್ದಾರೆ.

ವಿವಿಧ ಮೋರ್ಚಗಳಿಗೆ ಅಧ್ಯಕ್ಷರ ನೇಮಕ: ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಹಂಪಿ ರಮಣ, ಎಸ್ಟಿ ಮೋರ್ಚಾ ಜಿಲ್ಲಾಧ್ಯಕ್ಷ ಧರಪ್ಪ ನಾಯಕ್, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಹನುಮಂತಪ್ಪ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಇಬ್ರಾಹಿಂಪುರ ವೀರನಗೌಡ, ಅಲ್ಪಸಂಖ್ಯಾತ ಘಟಕದ ಜಿಲ್ಲಾಧ್ಯಕ್ಷ ಅಲ್ಲಾಬಕಾಶ್, ಒಬಿಸಿ ಮೋರ್ಚಾದ ಜಿಲ್ಲಾಧ್ಯಕ್ಷರಾಗಿ ತಿರುಮಲ ಅವರನ್ನು ಜಿಲ್ಲಾಧ್ಯಕ್ಷ ಅನಿಲ್ ಕುಮಾರ್ ಅವರು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ.

# ಹಯ್ಯಾಳಲಿಂಗೇಶ್ವರ ದೇವಸ್ಥಾನದಲ್ಲಿ ಮಹಾ ಶಿವರಾತ್ರಿ ಸಂಭ್ರಮ



• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ**

ಮಹಾ ಶಿವರಾತ್ರಿ ನಿಮಿತ್ಯ ತಾಲೂಕಿನ ಸುಕ್ಷೇತ್ರ ಹಯ್ಯಾಳ (ಬಿ) ಗ್ರಾಮದ ಶ್ರೀ ಹಯ್ಯಾಳ ಲಿಂಗೇಶ್ವರ ದೇವಸ್ಥಾನದಲ್ಲಿ ಬೆಳಿಗ್ಗೆಯಿಂದಲೇ ವಿವಿಧ ಪೂಜಾ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಗಿತ್ತು. ಸಾಯಂಕಾಲ 8:00 ಯಿಂದ ಶಿವನಾಮದೊಂದಿಗೆ ವಿಶೇಷ ಪೂಜೆ ದೀಪಾರತಿ ಶಂಕ ಡೊಳ್ಳಿನ ವಾದ್ಯದೊಂದಿಗೆ ಅತ್ಯಂತ ಸಂಭ್ರಮದಿಂದ ಶಿವ ರಾತ್ರಿ ಜಾಗರಣೆ ಜರುಗಿತು. ಪ್ರತಿ ಶಿವರಾತ್ರಿಯಂದು ದೇವಸ್ಥಾನದಲ್ಲಿ ವಿವಿಧ ಬಗೆಯ ಸಿಹಿ ತಿನುಸಕಗಳು ಬಜಿ ಕರದಂಟು ಕಡಲೆ ಗುಗ್ಗರಿ ಮಂಡಾಳು ಒಗ್ಗರಣೆ ತಯಾರಿಸಿ ಶಿವರಾತ್ರಿ ಅಂಗವಾಗಿ ಉಪವಾಸ ವೃತ ಮಾಡುವ ಭಕ್ತರಿಗೆ ಪ್ರಸಾದ ರೂಪದಲ್ಲಿ ವಿತರಿಸುವ ವಾಡಿಕೆಯು ಹಿಂದಿನ ಕಾಲದಿಂದ ಬಂದಿದೆ ಎಂದು ದೇವಸ್ಥಾನದ ಪೂಜಾರಿಗಳು ತಿಳಿಸಿದರು. ಗ್ರಾಮದ ಮಹಿಳೆಯರು ಕೂಡಾ ಮನೆಯಲ್ಲಿ ವಿವಿಧ ಬಗೆಯ ಸಿಹಿ ತಿಂಡಿ ಹಣ್ಣು ಹಂಪಲುಗಳನ್ನು ತಂದು ದೇವಸ್ಥಾನಕ್ಕೆ ನೀಡುವೂ ವಿಶೇಷತೆ ಇದೆ ಭಕ್ತರು ನೀಡಿದಂತಹ ಎಲ್ಲಾ ಹಣ್ಣು ಹಂಪಲು ಸಿಹಿ ತಿಂಡಿಗಳನ್ನು ಒಂದೆಡೆ ಸಂಗ್ರಹಿಸಿ ಎಲ್ಲಾ ಭಕ್ತರಿಗೆ ಸಾಮೂಹಿಕವಾಗಿ ವಿತರಿಸಿದರು. ವಿವಿಧ ಭಾಗಗಳಿಂದ ಸಹ್ರಾರು ಭಕ್ತರು ಆಗಮಿಸಿ ಶ್ರೀ ಹಯ್ಯಾಳ ಲಿಂಗೇಶ್ವರ ದರ್ಶನ ಪಡೆದರು ಜಾಗರಣೆ ನಿಮಿತ್ಯ ದೇವಸ್ಥಾನದಲ್ಲಿ ರಾತ್ರಿ ಇಡಿ ಭಜನಾ ಡೊಳ್ಳಿನ ಕಾರ್ಯಕ್ರಮ ನಡೆಯಿತು.

# ಸೋಲಪೂರ್ ಅವರಿಗೆ ಜೆಡಿಎಸ್ ಕಚೇರಿಯಲ್ಲಿ ಅಭಿನಂದನೆ

• **ಮಲ್ಲಮ್ಮ ನುಡಿ ವಾರ್ತೆ ಬೀದರ್**

ಜೆಡಿಎಸ್ ಜಿಲ್ಲಾ ಅಧ್ಯಕ್ಷರಾಗಿ ರಮೇಶ್ ಪಾಟೀಲ್ ಸೋಲಪೂರ್ ಅವರಿಗೆ ಮೂರನೇ ಅವಧಿಗೆ ಮುಂದುವರಿಕೆ ನೀಡಿರುವ ಹಿನ್ನೆಲೆಯಲ್ಲಿ ನಗರದ ಜೆಡಿಎಸ್ ಜಿಲ್ಲಾ ಕಚೇರಿಯಲ್ಲಿ ಅಭಿನಂದನಾ ಕಾರ್ಯಕ್ರಮ ಜರುಗಿತು. ಇದೇ ಸಂದರ್ಭದಲ್ಲಿ ಮೊಹ್ಮದ್ ಅಸದೊದ್ದಿನ್ ಅವರಿಗೆ ಎರಡನೇ ಬಾರಿ ಜೆಡಿಎಸ್ ರಾಜ್ಯ ವಕ್ತಾರರಾಗಿ ನೇಮಕಗೊಂಡ ಹಿನ್ನೆಲೆಯಲ್ಲಿ ಅವರಿಗೂ ಸನ್ಮಾನಿಸಲಾಯಿತು.

ರಮೇಶ್ ಪಾಟೀಲ್ ಸೋಲಪೂರ್ ಅವರು ಪಕ್ಷದ ಸಂಘಟನೆ ಬಲಪಡಿಸುವಲ್ಲಿ ತೋರಿದ ಕಾರ್ಯಕ್ಷಮತೆ, ಪಕ್ಷದ ವಿಸ್ತರಣೆಗೆ ನೀಡಿದ ಸೇವೆ ಹಾಗೂ ಕಾರ್ಯಕರ್ತರನ್ನು ಒಗ್ಗೂಡಿಸುವಲ್ಲಿ ವಹಿಸಿದ ಪಾತ್ರವನ್ನು ಪರಿಗಣಿಸಿ ಪಕ್ಷದ ವತಿಯಿಂದ ಈ ಗೌರವ ಸಮಾರಂಭ ಆಯೋಜಿಸಲಾಯಿತು.



ಕಾರ್ಯಕ್ರಮದಲ್ಲಿ ಮುಖಂಡರು ಹಾಗೂ ಕಾರ್ಯಕರ್ತರು ಅವರಿಗೆ ಶಾಲು ಹೊದಿಸಿ, ಹೂಮಾಲೆ ಹಾಕಿ ಅಭಿನಂದಿಸಿ ಮುಂದಿನ ದಿನಗಳಲ್ಲಿ ಪಕ್ಷವನ್ನು ಇನ್ನಷ್ಟು ಬಲಪಡಿಸುವಂತೆ ಶುಭ ಹಾರೈಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ರಮೇಶ್ ಪಾಟೀಲ್ ಸೋಲಪೂರ್ ಅವರು ಪಕ್ಷದ ನಾಯಕರ ವಿಶ್ವಾಸಕ್ಕೆ ಕೃತಜ್ಞತೆ ಸಲ್ಲಿಸಿ, ಜೆಡಿಎಸ್ ಸಂಘಟನೆ ಬಲವರ್ಧನೆಗೆ ಇನ್ನಷ್ಟು ಶ್ರಮಿಸುವುದಾಗಿ ತಿಳಿಸಿದರು. ಬೀದರ್ ಜಿಲ್ಲೆಯಲ್ಲಿ ಪಕ್ಷವನ್ನು ಗ್ರಾಮಮಟ್ಟದಲ್ಲಿ ಬಲಪಡಿಸುವುದು ತಮ್ಮ ಪ್ರಮುಖ ಗುರಿಯಾಗಿದೆ ಎಂದರು. ಇದೇ ವೇಳೆ ಫೆಬ್ರವರಿ 27ರಂದು ಬಿಜಾಪೂರದಲ್ಲಿ ನಡೆಯಲಿರುವ ಜೆಡಿಎಸ್ ಪಕ್ಷದ ರಜತ ಮಹೋತ್ಸವದ ಬೃಹತ್ ಸಮಾವೇಶಕ್ಕೆ ಬೀದರ್ ಜಿಲ್ಲೆಯ ಹೆಚ್ಚಿನ ಸಂಖ್ಯೆಯ ಕಾರ್ಯಕರ್ತರು ಭಾಗವಹಿಸುವಂತೆ ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷ ಸಜ್ಜಾದ ಸಾಹೇಬ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಶೋಕ ಕೊಡಗೆ, ಜಿಲ್ಲಾ ಪ.ಜಾತಿ ವಿಭಾಗದ ಅಧ್ಯಕ್ಷ ದೇವೇಂದ್ರ ಸೋನಿ,

ಜಿಲ್ಲಾ ಪ.ಪಂ ಅಧ್ಯಕ್ಷ ಬೊಮ್ಮಗೊಂಡ ಚಿಟ್ಟಾವಾಡಿ, ಬೀದರ ಉತ್ತರ ಅಧ್ಯಕ್ಷ ಬಸವರಾಜ ಪಾಟೀಲ್ ಹಾರೂರಗೇರಿ, ಭಾಲ್ಕಿ ತಾಲೂಕು ಅಧ್ಯಕ್ಷ ಮಲ್ಲಿಕಾರ್ಜುನ ನೇಳಗೆ, ಔರಾದ ತಾಲೂಕು ಅಧ್ಯಕ್ಷ ತಾನಾಜಿ ತೊರಣಕರ್, ಹುಮನಾಬಾದ್ ತಾಲೂಕು ಅಧ್ಯಕ್ಷ ಮೊಹ್ಮದ್ ನಜಿಬೊದ್ದಿನ್, ನಗರಸಭೆ ಸದಸ್ಯ ರಾಜು ಚಿಂತಾಮಣಿ, ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿ. ಪ್ರಧಾನ ಕಾರ್ಯದರ್ಶಿ ಶಿವುಪತ್ರ ಮಾಳಗೆ,

ಪ್ರಶಾಂತ ವಿಶ್ವಕರ್ಮ, ಮುಖಂಡರಾದ ರಮೇಶ್ ಶೀಲಕೆ, ಬಸವರಾಜ ಅಲ್ಲಾಪೂರ, ಮೊಹ್ಮದ್ ಅಬೀದ ಅಲಿ, ಅಶೋಕ ಕಾಗೆ ಸೇರಿದಂತೆ ಪಕ್ಷದ ಹಲವಾರು ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

# ಈದ್ಗಾದ ಜಮೀನು ನಕಲಿ ದಾಖಲೆ ಮೂಲಕ ಪಾಲಿಕೆ ಪರರಿಗೆ ಪರಭಾರೆ : ಮೋತ್ಕರ್



> ನಕಲಿ ದಾಖಲೆಗಳ ಮೂಲಕ, ಸರಿಯಾದ ಕ್ರಮದಲ್ಲಿ ಫಾರಂ 2 ನೀಡಿಲ್ಲ. ಇದರಲ್ಲಿ ಅಧಿಕಾರಿಗಳ ತಪ್ಪು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಇದಕ್ಕಾಗಿ ಈ ಬಗ್ಗೆ ಕ್ರಿಮಿನಲ್ ಕೇಸು ದಾಖಲಿಸಿ. ತನಿಕಜೆ ನಡೆಸಲಿದೆ.
>
> **ಪಿ.ಎಸ್.ಮಂಜುನಾಥ**
> **ಆಯುಕ್ತರು, ಮಹಾನಗರ ಪಾಲಿಕೆ, ಬಳ್ಳಾರಿ.**

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಗರದ ಬೆಂಗಳೂರು ರಸ್ತೆಯ ಈದ್ಗಾ ಮೈದಾನಕ್ಕೆ ಸೇರಿದ ಅಂ–ದಾಜು 11.5 ಎಕರೆ ಜಮೀನನ್ನು ಮಹಾನಗರಪಾಲಿಕೆಯ ಅಧಿಕಾರಿಗಳು ನಕಲಿ ದಾಖಲೆ ಮೂಲಕ ಪರರಿಗೆ ಪರಭಾರೆ ಮಾಡಿಕೊಟ್ಟಿದ್ದಾರೆ ಎಂದು ಪಾಲಿಕೆಯ ಪ್ರತಿಪಕ್ಷದ ನಾಯಕ ಶ್ರೀನಿವಾಸ್ ಮೋತ್ಕರ್ ಆರೋಪಿಸಿದ್ದಾರೆ.

ಈ ಬಗ್ಗೆ ಇಂದು ನಗರದಲ್ಲಿ ಸುದ್ದಿಗೋಷ್ಟಿ ನಡೆಸಿದ ಅವರು. ನಗರದ ಟಿಎಸ್ ನಂ.650 ಕ್ಕೆ ಸೇರಿದ 46902.67 ಚ.ಮೀಟರ್ ನ ಆಸ್ತಿಗೆ ಪಾಲಿಕೆಯ ಅಧಿಕಾರಿಗಳು ಫಾರಂ 2 ನೀಡಿದ್ದಾರೆ.

ವಾಸ್ತವದಲ್ಲಿ ಇದು ಇದ್ಗಾ ಮೈದಾನ ಅಂದರೆ ವಕ್ಫ ಆಸ್ತಿಯಾಗಿದ್ದು. ಪಟೇಲ್ ನಗರದ ಎ.ಪ್ರಭಾವತಿ ಎಂಬುವವರು ಹೆಸರಲ್ಲಿ ಫಾರಂ 2 ಪಡೆದಿದ್ದಾರೆ. ಹೀಗೆ ಪಡೆಯುವಾಗ ಅವರು ಅಗತ್ಯ ಶುಲ್ಕವನ್ನು ಪಾವತಿಸಿಲ್ಲ. ಅಲ್ಲದೆ ಕೊಳಗಲ್ಲಿನ ಪದ್ಮಾವತಿ ಎಂಬುವವರ ದಾಖಲೆ ಪತ್ರ ನೀಡಿ ಪಾರಂ 2 ಪಡೆದಿದ್ದಾರೆ. ಅಷ್ಟೇ ಅಲ್ಲದೆ ಪಾಲಿಕೆಯ ಜೋನ್ ಎರಡರಲ್ಲಿ ಬರುವ ಈ ಆಸ್ತಿಗೆ ಜೋನ್ 3 ರಲ್ಲಿ ಅನುಮೋದನೆ ನೀಡಿದೆ. ಇದರಲ್ಲಿ ಪಾಲಿಕೆಯ ಕಂದಾಯ ಅಧಿಕಾರಿಗಳ ಕೈವಾಡ ಇದೆ ಎಂದರು.

ಬಿಜೆಪಿ ಪಕ್ಷದ ನಗರ ಅಧ್ಯಕ್ಷ ಜಿ.ವೆಂಕಟರಮಣ ಮಾತನಾಡಿ, ಕಾಂಗ್ರೆಸ್ ನವರು ಮಾವು ಮುಸ್ಲೀಂರ ಆಸ್ತಿ ರಕ್ಷಣೆ ಮಾಡುತ್ತೇವೆ ಎನ್ನುತ್ತಾರೆ. ಇದೇನ ಅವರು ರಕ್ಷಣೆ ಮಾಡುವ ವಿಧಾನ ಎಂದು ಪ್ರಶ್ನಿಸಿದರು.

ಪಾಲಿಕೆಸದಸ್ಯಕೆಹನುಮಂತಮಾತನಾಡಿ. ನಗರದಲ್ಲಿನ ಉದ್ಯಾನವನಗಳನ್ನು ಸಹ ಲಪಟಾಯಿಸಲಾಗುತ್ತಿದೆ. ಆದರೂ ಪಾಲಿಕೆ ಮೌನವಹಿಸಿದೆಂದು ಆರೋಪಿಸಿದರು.

ಅಸ್ತಿಯ ಅಕ್ರಮ ವರ್ಗಾವಣೆ ಬಗ್ಗೆ ತನಿಖೆಯಾಗಬೇಕೆಂದು ಆಗ್ರಹಿಸಲಾಯ್ತು. ಪಾಲಿಕೆ ಯಲ್ಲಿ ಗುತ್ತಿಗೆ ಆಧಾರಿತ ಪಾಲಿಕೆ ನೌಕರರನ್ನು ವರ್ಗಾವಣೆ ಮಾಡುವಲ್ಲಿಯೂ ಹಣ ವಸೂಲಿ ನಡೆದಿದೆ. ವರ್ಗಾವಣೆ ಮಾಡಿದ ಒಂದೇ ದಿನದಲ್ಲಿ ಮತ್ತೆ ಕೆಲವರನ್ನು ಅದೇ ಸ್ಥಾನದಲ್ಲಿ ಮುಂದುವರೆಸಿರುವುದು ಲಂಚ ಪಡೆದಿರುವುದಕ್ಕೆ ಪುಷ್ಟಿ ಮೀಡುತ್ತದೆಂದರು.

ಸುದ್ದಿಗೋಷ್ಟಿಯಲ್ಲಿ ಪಾಲಿಕೆ ಸದಸ್ಯರುಗಳಾದ ಸುರೇಖ ಮಲ್ಲನಗೌಡ, ಕೆ.ಎಸ್.ಅಶೋಕ್ ಕುಮಾರ್, ಹನುಂತಪ್ಪ, ಎನ್. ಗೋವಿಂದರಾಜುಲು ಮೊದಲಾದವರು ಇದ್ದರು.

# ಅರ್ಜಿ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು**

ಕೇಂದ್ರ ಸರ್ಕಾರದ ಮಿಷನ್ ವಾತ್ಸಲ್ಯ ಮಾರ್ಗಸೂಚಿಯಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ರಾಯಚೂರು ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿನ ಮಕ್ಕಳಿಗಾಗಿ ಸಂಗೀತ ಹೇಳಿಕೊಡಲು ಇಬ್ಬರು ಅರೆಕಾಲಿಕ ಸಂಗೀತ ಶಿಕ್ಷಕರನ್ನು ನೇಮಕಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು ಅರ್ಜಿಯೊಂದಿಗೆ ವಿದ್ಯಾರ್ಹತೆ, ಅನುಭವ ಮತ್ತು ಇತರೆ ದಾಖಲಾತಿಗಳನ್ನು ಲಗತ್ತಿಸಿ ದಿನಾಂಕ: 23–02–2026ರೊಳಗಾಗಿ ಅಗತ್ಯ ದಾಖಲೆಗಳೊಂದಿಗೆ ಅರ್ಜಿಯನ್ನು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಾರ್ಯಾಲಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಕಾರ್ಯಾಲಯ ಮ.ನಂ. 1–9–138 ಮಾರೆಮ್ಮ ದೇವಸ್ಥಾನದ ಹತ್ತಿರ, ಆಜಾದ ನಗರ ರಾಯಚೂರು ದೂರವಾಣಿ ಸಂಖ್ಯೆ: 08532–226226ಗೆ ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಅಮರೇಶ ಹಾವಿನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೃಷಿ ಸಮೂಹಗಳ ಅಭಿವೃದ್ಧಿಗೆ ರೂ 1.60 ಕೋಟಿ ಅನುದಾನ : ಸಾಗರ್ ಖಂಡ್ರೆ



• **ಮಲ್ಲಮ್ಮ ನುಡಿ ವಾರ್ತೆ ಬೀದರ**

ಜಿಲ್ಲೆಯ ರೈತ ಬಾಂಧವರ ಆರ್ಥಿಕ ಸಬಲೀಕರಣ ಮತ್ತು ಕೃಷಿ ಚಟುವಟಿಕೆಗಳಿಗೆ ಹೆಚ್ಚಿನ ವೇಗ ನೀಡಲು ಜಾರಿಗೆ ತಂದಿರುವ ಸಮಗ್ರ ಕೃಷಿ ಸಮೂಹಗಳ ಯೋಜನೆಯಡಿಯಲ್ಲಿ ಜಿಲ್ಲೆಯ ಪ್ರಮುಖ ಒಕ್ಕೂಟಗಳಿಗೆ ಅನುದಾನದ ಚೆಕ್ ವಿತರಿಸುವ ಮೂಲಕ ಕೃಷಿ ವಲಯದ ಬಲವರ್ಧನೆಗೆ ಆದ್ಯತೆ ನೀಡಲಾಗುತ್ತಿದೆ ಎಂದು ಬೀದರ್ ಲೋಕಸಭಾ ಕ್ಷೇತ್ರದ ಸಂಸದರಾದ ಸಾಗರ್ ಖಂಡ್ರೆ ಅವರು ತಿಳಿಸಿದರು. ಅವರು ಸೋಮವಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕೇಂದ್ರ ಪುರಷ್ಕೃತ ಯೋಜನೆಗಳ ಅನುಷ್ಠಾನಾ ಪ್ರಗತಿ ಪಶೀಲನೆ ಜಿಲ್ಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ದಿಶಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಕುರಿತು ಮಾಹಿತಿ ನೀಡಿದ ಅವರು, ಜಿಲ್ಲೆಯಲ್ಲಿ ಒಟ್ಟು 24 ಕ್ಲಸ್ಟಗಳನ್ನು ಈ ಯೋಜನೆಯಡಿ ಆಯ್ಕೆ ಮಾಡಲಾಗಿದ್ದು, ಮೊದಲ ಹಂತದಲ್ಲಿ ಆಯ್ದ 8 ಕ್ಲಸ್ಟಗಳಿಗೆ ತಲಾ ರೂ. 20 ಲಕ್ಷದಂತೆ ಒಟ್ಟು ರೂ.1.60 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಈಗಾಗಲೇ ಮೊದಲ ಹಂತದಲ್ಲಿ ಜಿಲ್ಲೆಯ ಹುಮ್ನಾಬಾದ್, ಬಸವಕಲ್ಯಾಣ, ಔರಾದ್, ಕಮಲನಗರ ಮತ್ತು ಭಾಲ್ಕಿ ತಾಲೂಕಿನ ಐದು ಕ್ಲಸ್ಟಗಳಿಗೆ ತಲಾ ರೂ.20 ಲಕ್ಷ ಅನುದಾನ ತಲುಪಿದೆ ಎಂದರು. ಉಳಿದ ಮೂರು ಪ್ರಮುಖ ತಾಲ್ಲೂಕುಗಳ ಒಕ್ಕೂಟಗಳಾದ ಬೀದರನ ತಾಲ್ಲೂಕಿನ ಜನವಾಡಾದ ಕೃಷ್ಣ ಸಂಜೀವಿನಿ ಜಿಪಿಎಫ್, ಚಿಟಗುಪ್ಪಾ ತಾಲ್ಲೂಕಿನ ನಿರ್ಣಾದ ನಿರ್ಣಾ ಸಂಜೀವಿನಿ ಜಿಪಿಎಫ್, ಹುಲಸೂರ ತಾಲ್ಲೂಕಿನ ಗೋರ್ಟಾದ ವೈಭವಿ ಸಂಜೀವಿನಿ ಜಿಪಿಎಫ್ ಒಕ್ಕೂಟಗಳಿಗೆ ಸಂಸದರು ಚೆಗಳನ್ನು ವಿತರಿಸಿದರು. ಸಂಘಟಿತ ಕೃಷಿ ಪದ್ಧತಿಯ ಮೂಲಕ ರೈತರು ಸ್ವಾವಲಂಬಿಗಳಾಗಬೇಕು ಹಾಗೂ ಸರ್ಕಾರಿ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಜಿಲ್ಲೆಯ ಪ್ರತಿಯೊಂದು ಕೃಷಿ ಸಮೂಹವು ಅಭಿವೃದ್ಧಿ ಪಥದಲ್ಲಿ ಸಾಗುವಂತೆ ಮಾಡಲು ನಾವು ಬದ್ಧರಾಗಿದ್ದೇವೆ," ಎಂದು ಸಂಸದರು ಇದೇ ಸಂದರ್ಭದಲ್ಲಿ ಆಶಯ ವ್ಯಕ್ತಪಡಿಸಿದರು. ಜಿಲ್ಲೆಯಲ್ಲಿ ಬಿಪಿ ಮತ್ತು ಮಧುಮೇಹ ರೋಗಿಗಳ ಸಂಖ್ಯೆ ಹೆಚ್ಚುತ್ತಿರುವ ಕಾರಣ ಗ್ರಾಮ ಪಂಚಾಯತ ಮಟ್ಟದಲ್ಲಿ ಆರೋಗ್ಯ ಕ್ಯಾಂಗಳ ಮೂಲಕ ಜಾಗೃತಿ ಮೂಡಿಸಿ ಆರೋಗ್ಯ ತಪಾಸಣೆ ಮಾಡಿ ಅಂತಹವರಿಗೆ ಉಚಿತವಾಗಿ ಔಷಧೋಪಚಾರ ಮಾಡುವಂತೆ ಕ್ರಮ ವಹಿಸಲು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಿಗೆ ಸೂಚಿಸದರು. ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿನ ಸೌಲಭ್ಯಕ್ಕೆ ಜಲಜೀವನ ಮಿಷನ್ ಯೋಜನೆ ಜಾರಿಗೆ ತಂದಿದ್ದರೂ ಸಹ ಪ್ರತಿ ಮನೆಗಳಿಗೆ ಸಮರ್ಪಕವಾಗಿ ಶುದ್ಧ ಕುಡಿಯುವ ನೀರು ಸರಬರಾಜು ಆಗುತ್ತಿಲ್ಲ ಎಂದು ದೂರುಗಳು ಬರುತ್ತಿವೆ, ಸಂಬಂಧಪಟ್ಟ ಅಧಿಕಾರಿ ಗಳು ಗಮನಹರಿಸಬೇಕು ಮುಂದಿನ ದಿನಗಳಲ್ಲಿ ಬೇಸಿಗೆ ಕಾಲ ಬರುವುದರಿಂದ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು ಗಮನಹರಿಸಿ ಕುಡಿಯುವ ನೀರಿನ ಸಮಸ್ಯೆ ಆಗದಂತೆ ನೋಡಿಕೊಳ್ಳಬೇಕು ಎಂದರು. ಇದೇ ಸಂದರ್ಭದಲ್ಲಿ ರೈಲ್ವೆ, ರಾಷ್ಟ್ರೀಯ ಹೆದ್ದಾರಿ ಇಲಾಖೆ, ಅಂಚೆ ಇಲಾಖೆ, ಪಶುಪಾಲನಾ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ನಡೆಸಿದರು.

ಈ ಸಭೆಯಲ್ಲಿ ಜಿಲ್ಲಾಧಿಕಾರಿಗಲಾದ ಶಿಲ್ಪಾ ಶರ್ಮಾ, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಗಿರೀಶ ಬದೋಲೆ, ಬೀದರ ಮಹಾನಗರ ಪಾಲಿಕೆ ಆಯುಕ್ತರಾದ ಮುಕುಲ್ ಜೈನ್, ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿ ಆಶೀಷ್ ರೆಡ್ಡಿ, ಜಿಲ್ಲಾ ಹಾಗೂ ತಾಲ್ಲೂಕಾ ಮಟ್ಟದ ಅಧಿಕಾರಿಗಳು ಸೇರಿದಂತೆ ಆಳಂದ, ಚಿಂಚೋಳಿ ತಾಲ್ಲೂಕಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು,



ಚಿಟಗುಪ್ಪ: ಮಹಾ ಶಿವರಾತ್ರಿ ಹಬ್ಬದ ಪ್ರಯುಕ್ತ ಪಟ್ಟಣದ ಮಹಾದೇವ ಮಂದಿರಕ್ಕೆ ರವಿವಾರ ಸಾವಿರಾರು ಭಕ್ತರು ದೇವಸ್ಥಾನಕ್ಕೆ ತೆರಳಿ ಸರದಿ ಸಾಲಿನಲ್ಲಿ ನಿಂತುಕೊಂಡು ಮಹಾದೇವ ದೇವರ ದರ್ಶನ ಪಡೆದರು. (ಮಲ್ಲಮ್ಮ ನುಡಿ ಚಿತ್ರ)

# ಕಾರಂಜಾ ಜಲಾಶಯದ ಕಾಲುವೆಯಲ್ಲಿ ಜಾರಿ ಬಿದ್ದು ತಂದೆ–ಮಗ ಸಾವು

> ಕಾರಂಜಾ ಜಲಾಶಯದ ಕಾಲುವೆಗೆ ಬಿದ್ದು ತಂದೆ, ಮಗ ಸಾವು ಹಳ್ಳಿಖೇಡ(ಬಿ) ಗ್ರಾಮದ ವಿಶ್ವನಾಥ್ ಜಮಾದಾರ್, ಮಗ ಅಮರೇಶ್ ಸಾವು ಧನ್ನೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ,

• **ಮಲ್ಲಮ್ಮ ನುಡಿ ವಾರ್ತೆ ಬೀದರ**

ಬೀದರ್ ಜಿಲ್ಲೆಯ ಭಾಲ್ಕಿ ತಾಲೂಕಿನ ಬ್ಯಾಲಹಳ್ಳಿ ಗ್ರಾಮದ ಕಾರಂಜಾ ಕಾಲುವೆಯಲ್ಲಿ ಸಂಭವಿಸಿದ ದುರ್ಘಟನೆಯಲ್ಲಿ ತಂದೆ–ಮಗ ಇಬ್ಬರು ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಮೃತರನ್ನು ಹಳ್ಳಿಖೇಡ(ಬಿ) ಗ್ರಾಮದ ವಿಶ್ವನಾಥ್ ಜಮಾದಾರ್ (50) ಹಾಗೂ ಅಮರೇಶ್ (23) ಎಂದು ಗುರುತಿಸಲಾಗಿದೆ.

ಬೀದರ್‌ನಲ್ಲಿ ಸಿಮೆಂಟ್ ಖಾಲಿ ಮಾಡಿ ವಾಪಸ್ ಹಳ್ಳಿಖೇಡ(ಬಿ)ಗೆ ತೆರಳುತ್ತಿದ್ದ ವೇಳೆ ಈ ದುರ್ಘಟನೆ ನಡೆದಿದೆ. ಈ ವೇಳೆ ಅಮರೇಶ್ ಕಾರಂಜಾ ಕಾಲುವೆಗೆ ಇಳಿದು ಕೈ–ಕಾಲು ಹಾಗೂ ಮುಖ ತೊಳೆಯುತ್ತಿದ್ದರು. ಆಗ ಆಯತಪ್ಪಿ ಕಾಲು ಜಾರಿ ಕಾಲುವೆಯಲ್ಲಿ ಬಿದ್ದಿದ್ದಾರೆ. ಮಗ ಕಾಲುವೆಯಲ್ಲಿ ಬಿದ್ದಿರುವುದನ್ನು ಗಮನಿಸಿದ ತಂದೆ ವಿಶ್ವನಾಥ್ ಜಮಾದಾರ್ ಮಗನನ್ನು ರಕ್ಷಿಸಲು ಕಾಲುವೆಗೆ ಇಳಿದಿದ್ದಾರೆ, ಇಬ್ಬರೂ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ.

ಘಟನೆ ಕುರಿತು ಮಾಹಿತಿ ತಿಳಿದ ತಕ್ಷಣ ಸ್ಥಳಕ್ಕೆ ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಭೇಟಿ ನೀಡಿ ಶೋಧ ಕಾರ್ಯ ನಡೆಸಿದರು. ಬಳಿಕ ಇಬ್ಬರ ಮೃತದೇಹಗಳನ್ನು ಹೊರತೆಗೆದಿದ್ದಾರೆ.

ಮೃತದೇಹಗಳನ್ನು ಹಳ್ಳಿಖೇಡ(ಬಿ) ಪಟ್ಟಣದ ಆಸ್ಪತ್ರೆಗೆ ರವಾನಿಸಲಾಗಿದ್ದು, ಆಸ್ಪತ್ರೆ ಮುಂದೆ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿದೆ. ಘಟನೆ ಧನ್ನೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.

# ಬಂಜಾರ ಸಮಾಜಕ್ಕೆ ಸೇವಾಲಾಲರ ಕೊಡುಗೆ ಅಪಾರ



• **ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ**

ಸಂತ ಸೇವಾಲಾಲ ಮಹಾರಾಜರು ತಮ್ಮ ಆಧ್ಯಾತ್ಮಿಕ ನೆಲಗಟ್ಟಿ ಮುಖಾಂತರ ಬಂಜಾರ ಸಮುದಾಯವನ್ನು ಅಭಿವೃದ್ಧಿ ಜೀವನದತ್ತ ಕೊಂಡೊಯ್ದ ಮಹಾನ ಸಂತರು ಎಂದು ತಹಶಿಲ್ದಾರ ಬಸವರಾಜ ಹೊಂಕಣ್ಣವರ ಮಾತನಾಡಿದರು.

ಅವರು ಪಟ್ಟಣದ ತಹಶೀಲ್ದಾರ ಕಛೇರಿಯಲ್ಲಿ ತಾಲೂಕಾಡಳಿತ ವತಿಯಿಂದ ಆಯೋಜಿಸಿದ ಸಂತ ಸೇವಾಲಾಲರ 287 ನೇ ಜಯೋಂತಯೋತ್ಸವ ನಿಮಿತ್ಯ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಕಲ ಉದ್ಘಾಟಿಸಿ ಮಾತನಾಡುತ್ತ 17 ನೇ ಶತಮಾನದಲ್ಲಿ ಮರಿಯಮ್ಮದೇವಿಯ ವರ ಪ್ರಸಾದದಿಂದ ಭೀಮಾ ನಾಯಕ ಹಾಗೂ ಧರ್ಮಣಿ ದಂಪತಿಗಳಿಗೆ ಜನಿಸಿದ ಸಂತ ಸೇವಾಲಾಲ ತನ್ನ 12 ವಯಸ್ಸಿನಲ್ಲಿ ಆಧ್ಯಾತ್ಮಿಕ ಮೂಲಕ ಸಮಾಜದಲ್ಲಿ ಚದುರಿಹೋದ ಸಮುದಾಯನ್ನು ಗಂಪು, ತಂಡಗಳನ್ನಾಗಿ ಸೇರಿಸಿ ಸಮಾಜಿಕ ಆರ್ಥಿಕವಾಗಿ ಬೆಳೆಯಲು ಶ್ರಮಿಸಿದವರು. ದೇಶಾದ್ಯಂತ ಸಮುದಾಯದ ನೇತೃತ್ವ ವಹಿಸಿ ಗುರು ಪೀಠ ಪಡೆದು ಅನೇಕ ಪವಾಡಗಳಿಂದ ಸಮಾಜವನ್ನು ಉದ್ಧರಿಸಿದವರು ಸಾತ್ವೀಕ ನೆಲಗಟ್ಟಿನ ಮೂಲಕ ಮುಖ್ಯವಾಹಿಗೆ ತಂದು ಅಭಿವೃದ್ಧಿ ಪಥದತ್ತ ನಡೆಸಿದರು.

ಸಮಾಜದ ತಾಲೂಕಾ ಅಧ್ಯಕ್ಷ ವಾಸು ಲಮಾಣಿ ಮಾತನಾಡಿ ನಮ್ಮ ಬಂಜಾರ ಸಮಾಜ ರಾಜಸ್ಥಾನ ಮಹಾರಾಷ್ಟ್ರ ರಾಜ್ಯಗಳಲ್ಲಿ ವಾಸಿಸುತ್ತಿದ್ದ ಹೆಚ್ಚಾಗಿ ದೈರ್ಯ, ಶೌರ್ಯಕ್ಕೆ ಹೆಸರುವಾಸಿಯಾಗಿದ್ದವರು.

ಬಂಜಾರ ಸಮಾಜದ ಮುಖಂಡರಾದ ಅರ್ಜುನ ಲಮಾಣಿ ವಾಸು ಲಮಾಣಿ ಮಾತನಾಡಿದರು. ಮಕ್ಕಳಿಂದ ಬಂಜಾರ ಸಂಪ್ರದಾಯಕ ನೃತ್ಯ ಕಾರ್ಯಕ್ರಮ ಜರುಗಿತು.

ಬೆಳಿಗ್ಗೆ ಸಂತ ಸೇವಾಲಾಲರ ಭೋಗ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮದಲ್ಲಿ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಪಿ.ವಾಯ್ ಸಾವಂತ, ಪ.ಪಂ ಮುಖ್ಯಾಧಿಕಾರಿ ಚಂದ್ರಶೇಖರ .ಬಿ, ನೌಕರ ಸಂಘದ ತಾಲೂಕಾ ಅಧ್ಯಕ್ಷ ಜಗದೀಶ ವಿರಕ್ತಿಮಠ, ತೋಟಗಾರಿಕೆ ಅಧಿಕಾರಿ ಕೆ.ವಿ.ಅಂಗಡಿ, ಶಿವಪ್ಪ ಲಮಾಣಿ, ಲಕ್ಷ್ಮಣ ಲಮಾಣಿ, ಪಾಂಡು ಲಮಾಣಿ, ಅನೀಲ ಪಮ್ಮಾರ, ರಾಜು ಲಮಾಣಿ, ವಾಸು ಲಮಾಣಿ, ರವಿ ಲಮಾಣಿ, ಯಮನಮ್ಮ ಲಮಾಣಿ, ಗಂಗಾ ರಾಠೋಡ, ಶಿವು ಲಮಾಣಿ ಗಣೇಶ ಲಮಾಣಿ, ಲಚ್ಚಪ್ಪ ರಾಠೋಡ, ತಾಂಡಾದ ನಾಯಕ ,ಡಾವ, ಕಾರಭಾರಿ, ಸಮಾಜ ಬಾಂಧವರು ಇದ್ದರು.

ಚಿತ್ರ ಇದೆ 15ಕೆ.ಎಲ್.ಜಿ1 ಕಲಘಟಗಿ ಪಟ್ಟಣದಲ್ಲಿ ತಾಲೂಕಾ ಮಟ್ಟದ ಸಂತ ಸೇವಾಲಾಲರ ಜಯಂತಿ ನಿಮಿತ್ಯ ಭೋಗ ಕಾರ್ಯಕ್ರಮದ ಜರುಗಿತು.

ಚಿತ್ರ ಇದೆ 15ಕೆ.ಎಲ್.ಜಿ1ಎ ಕಲಘಟಗಿ ಪಟ್ಟಣದಲ್ಲಿ ತಾಲೂಕಾ ಮಟ್ಟದ ಸಂತ ಸೇವಾಲಾಲರ ಜಯಂತಿ ನಿಮಿತ್ಯ ಕಾರ್ಯಕ್ರಮವನ್ನು ಸಸಿಗೆ ನೀರೆರೆಯುವ ಮೂಲಕ ತಹಶಿಲ್ದಾರ ಬಸವರಾಜ ಹೊಂಕಣ್ಣವರ ಉದ್ಘಾಟಿಸಿದರು.

# ಶಾಲೆ ಆದರ್ಶ ಬಿತ್ತುವ ಕೇಂದ್ರ: ಚವ್ಹಾಣ



ಮಲ್ಲಮ್ಮ ನುಡಿ ವಾರ್ತೆ ಕಮಲನಗರ :

ಶಾಲೆ ಜೀವನದ ಆದರ್ಶಗಳನ್ನು ಬಿತ್ತುವ ಕೇಂದ್ರವಾಗಲಿ ಅಂದಾಗ ಮಾತ್ರ ನೆಮ್ಮದಿಯ ಸಮಾಜ ರಚನೆಯಾಗಲು ಸಾಧ್ಯ ಕೇವಲ ಶಿಕ್ಷಣ ಕೊಟ್ಟರೆ ಸಾಲದು ಸಂಸ್ಕಾರ ಅತ್ಯವಾಶ್ಯಕವೆಂದು ಶಾಸಕ ಪ್ರಭು ಬಿ ಚವ್ಹಾಣ ನುಡಿದರು.

ಪಟ್ಟಣದ ಹೊರ ಒಲಯ ರಾಂಪುರ ರಸ್ತೆಯ ಹತ್ತಿರ ಇರುವ ದಿ ಗೋಲ್ಡನ್ ವ್ಯಾಲಿ ಪಬ್ಲಿಕ್ ಶಾಲಯಲ್ಲಿ ಹಮ್ಮಿಕೊಂಡ 8ನೇ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಜ್ಯೋತಿ ಬೆಳಗಿಸಿ ಉದ್ಘಾಟನೆ ನೀಡಿ

ಮಾತನಾಡಿದರು. ಮಕ್ಕಳಲ್ಲಿ ಅಡಗಿಗಿರುವ ಪ್ರತಿಭೆ ಹೊರ ತೆಗೆದು ಮಾನವ ಸಂಪನ್ಮೂಲವನ್ನಾಗಿ ರಚನೆಯಾಗ ಬೇಕು, ಅವಾಗ ಮಾತ್ರ ಪ್ರತಿಭಾವಂತ ವಿದ್ಯಾರ್ಥಿಗಳು ಸಮಾಜದ ಸಂಪತ್ತಾಗಲು ಸಾಧ್ಯ ಎಂದರು. ತಾಪಂ ಕಾರ್ಯ ನಿರ್ವಾಹಕ ಅಧಿಕಾರಿ ಹನಮಂತರಾಯ ಕೌಟಗೆ ಮಾತನಾಡಿ,

ಮಕ್ಕಳು ಕೇವಲ ಅಂಕ ತೆಗೆದು ಕೊಳ್ಳುವ ಯಂತ್ರವಾಗದೆ ಮಾನವೀಯ ಮೌಲ್ಯಗಳು ಬೆಳೆಸುವದು ಅವಶ್ಯಕ ಪಾಲಕರು ಮಕ್ಕಳ ಅಂಕ ನೋಡದೆ ಸಂಸ್ಕಾರ ನೋಡಿ ಇಂದಿನ ಮಕ್ಕಳು ಭವಿಷ್ಯದ ನಾಗರಿಕರು, ಹಾಗಾಗಿ ಗುಣಮಟ್ಟದ ಶಿಕ್ಷಣದ ಜೋತೆಗ ಸಂಸ್ಕಾರಯುತ ಶಿಕ್ಷಣ ಹಿಂದೆಂದಿಗಿಂತಲೂ ಇಂದು ಅವಶ್ಯಕವಾಗಿದೆ ಎಂದು ಹೇಳಿದರು. ನಂತರ ಶಾಲಾ ಮಕ್ಕಳಿಂದ ಸಂಸ್ಕೃತಿಕ ಕಾರ್ಯಕ್ರಮ ಜರುಗಿದವು. ಸಮಾರಂಭದ ಅಧ್ಯಕ್ಷತೆ ಸಂಸ್ಥೆಯ ಅಧ್ಯಕ್ಷೆ ಜಯಶ್ರೀ ಬಿರಾದಾರ ವಹಿಸಿದರು, ಕಾರ್ಯದರ್ಶಿ ಅರುಣಕುಮಾರ ಪಾಟೀಲ ಪ್ರಾಸ್ತಾವಿಕ ನುಡಿ ನುಡಿದರು, ವೇದಿಕೆಯ ಮೇಲೆ ತಹಸೀಲ್ದಾರ ಅಮೀತಕುಮಾರ ಕುಲಕರ್ಣಿ, ಗ್ರಾಪಂ ಮಾಜಿ ಅಧ್ಯಕ್ಷೆ ಸುಶೀಲಾ ಸಜ್ಜನ್, ಪಿಎಸ್ಐ ಆಶಾ ರಾಠೋಡ್, ನಂದಿನಿ. ಪ್ರವೀಣ ಪಾಟೀಲ್, ಕಿರಣ ಪಾಟೀಲ್, ಶಿವಾನಂದ ವಡ್ಡೆ, ಲಿಂಗಾನಂದ ಮಹಾಜನ ಇನ್ನಿತ್ತರರು ಹಾಜರಿದ್ದರು. ವಿಜಯ ಲಕ್ಷ್ಮೀ ಸೋಲಾಪೂರೆ ಸುಷ್ಮಾ ನಿರೂಪಿಸಿದರು. ಶರಣು ಸೋಲಾಪೂರೆ ಸ್ವಾಗತಿಸಿ ವಂದಿಸಿದರು.

## ಗೋಲ್ಡನ್ ವ್ಯಾಲಿ ಶಾಲಾ ವಾರ್ಷಿಕೋತ್ಸವ

# ಕಾಂತಾರ ನೃತ್ಯ ವೈಭವಕ್ಕೆ ಪ್ರೇಕ್ಷಕರು ಫಿದಾ



**ಮಲ್ಲಮ್ಮ ನುಡಿ ವಾರ್ತೆ ಕಮಲನಗರ:**

ಪಟ್ಟಣದ ಹೊರ ಒಲಯ ರಾಂಪುರ ರಸ್ತೆಯಲ್ಲಿ ಇರುವ ದಿ ಗೋಲ್ಡನ್ ವ್ಯಾಲಿ ಪಬ್ಲಿಕ್ ಶಾಲೆಯ ವಾರ್ಷಿಕೋತ್ಸವ ಸಮಾರಂಭವು ಅತ್ಯಂತ ಸಂಭ್ರಮ ಸಡಗರದಿಂದ ಜರುಗಿತು. ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿ ಮೂಡಿಬಂದ ವಿದ್ಯಾರ್ಥಿಗಳ 'ಕಾಂತಾರ' ದೈವಾರಾಧನೆಯ ನೃತ್ಯ ರೂಪಕವು ನೆರೆದಿದ್ದ ಸರ್ವರನ್ನು ಬೆರಗುಗೊಳಿಸಿ ಫಿದಾ ಆಗುವಂತೆ ಮೂಡಿಬಂತು.

ಶಾಲಾ ವಿದ್ಯಾರ್ಥಿಗಳು 'ಕಾಂತಾರ' ಚಲನಚಿತ್ರದ ಆವೇಶಭರಿತ ನೃತ್ಯವನ್ನು ವೇದಿಕೆಯ ಮೇಲೆ ಮರುಸೃಷ್ಟಿಸಿದರು. ವೇಷಭೂಷಣ, ಮುಖವರ್ಣಿಕೆ ಹಾಗೂ ವಿದ್ಯಾರ್ಥಿಗಳ ನಟನಾ ಕೌಶಲ ನೋಡುಗರನ್ನು ಮಂತ್ರಮುಗ್ಧರನ್ನಾಗಿಸಿತು.

ತಾಂತ್ರಿಕ ಮೆರುಗು ನೃತ್ಯದ ಜೊತೆಗೆ ಅಳವಡಿಸಲಾಗಿದ್ದ ಪಟಾಕಿಗಳ ಚಿತ್ತಾರ ಹಾಗೂ ಎಲ್ಇಡಿ ಪರದೆಯ ಹಿನ್ನೆಲೆಯು ಪ್ರದರ್ಶನಕ್ಕೆ ಹೆಚ್ಚಿನ ಕಳೆ ನೀಡಿತು.

ವಾರ್ಷಿಕೋತ್ಸವದ ಅಂಗವಾಗಿ ಸಾಂಸ್ಕೃತಿಕ ಹಬ್ಬ ನಡೆಯಿತು. ಕೇವಲ ಕಾಂತಾರ ಮಾತ್ರವಲ್ಲದೆ, ವಿವಿಧ ಜಾನಪದ ಹಾಗೂ ಶಾಸ್ತ್ರೀಯ ನೃತ್ಯಗಳ ಮೂಲಕ ಮಕ್ಕಳು ಭಾರತೀಯ ಸಂಸ್ಕೃತಿಯ ಅನಾವರಣ ಮಾಡಿದರು.

# ಜಿಂದಾಲ್‌ನಿಂದ ಶಾಲಾ ಶೌಚಾಲಯ ನಿರ್ಮಾಣ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಜೆ ಎಸ್ ಡಬ್ಲ್ಯೂ ಪೇಂಟ್ಸ್ ಮತ್ತು ಜೆ ಎಸ್ ಡಬ್ಲ್ಯೂ ಫೌಂಡೇಶನ್ ಸಹಯೋಗ ದಲ್ಲಿ ಕಾರ್ಪೋರೇಟ್ ಸಾಮಾಜಿಕ ಜವಾಬ್ದಾರಿಯಡಿ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳ ಅಡಿಯಲ್ಲಿ, ಸಂಡೂರು ತಾಲೂಕಿನ ತೋರಣಗಲ್ಲು ಅಂಕಾಳಮ್ಮ ವಾರ್ಡ್ ನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳಿಗೆ ಶೌಚಾಲಯ ನಿರ್ಮಾಣ ಮಾಡಲಾಗಿದ್ದು ಇದರ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಉದ್ಘಾಟನೆ ಮಾಡಿ ಮಾತನಾಡಿದ ಜೆ ಎಸ್ ಡಬ್ಲ್ಯೂ ಸ್ಟೀಲ್ ಲಿಮಿಟೆಡ್ ನ ಹಿರಿಯ ಉಪಾಧ್ಯಕ್ಷ ಸುನಿಲ್ ರಾಲ್ಫ್ "ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು ಶೌಚಾಲಯ ನಿರ್ಮಿಸಿದ್ದು ಶಾಲಾ ಆಡಳಿತ ಮತ್ತು ಎಸ್ ಡಿ ಎಂ ಸಿ ಸದಸ್ಯರು ನಿರ್ವಹಣೆ ಮಾಡಿಕೊಂಡು ಉತ್ತಮ ಶಿಕ್ಷಣ ಒದಗಿಸುವಲ್ಲಿ ಸಹಕರಿಸಬೇಕೆಂದರು.

ಶಾಲಾ ಮುಖ್ಯಶಿಕ್ಷಕ ಬಂದೇನವಾಜ್ ಮಾತನಾಡಿ " ಪ್ರಸ್ತುತ 600 ಕ್ಕೂ ಅಧಿಕ ವಿದ್ಯಾರ್ಥಿಗಳು ಕಲಿಯುತ್ತಿದ್ದು ಶೌಚಾಲಯ ನಿರ್ಮಾಣದಿಂದ ವಿದ್ಯಾರ್ಥಿಗಳು ಆವರಣ ಬಿಟ್ಟು ಹೋಗುವುದು ತಪ್ಪುತ್ತದೆ ಮತ್ತು ವಿಶೇಷವಾಗಿ ಹೆಣ್ಣು ಮಕ್ಕಳ ಸ್ವಚ್ಛತೆ ಹಾಗೂ ಸುರಕ್ಷತೆಗೆ ಅನುಕೂಲವಾಗಲಿದೆ" ಎಂದರು.

ಕಾರ್ಯಕ್ರಮದಲ್ಲಿ ಜೆ ಎಸ್ ಡಬ್ಲ್ಯೂ ಫೌಂಡೇಶನ್ ದಕ್ಷಿಣ ವಲಯ ಮುಖ್ಯಸ್ಥ ಪೆದ್ದಣ್ಣ ಬೀಡಲಾ, ಶ್ರೀನಿವಾಸ್ ರಾವ್, ಭವಾನಿ ಸಿಂಗ್ ಮತ್ತು ಎಸ್ ಡಿ ಎಂ ಸಿ ಅಧ್ಯಕ್ಷ ಭಗವಂತಪ್ಪ, ವಾರ್ಡ್ ಸದಸ್ಯ ಪುಲಿಕೊಂಡ ಹಾಗು ಮದೀನ ಕಂಟ್ರಾಕ್ಟರ್ ಶುಭಾನ್ ಭಾಷಾ ಮತ್ತು ಶಿಕ್ಷಕರು ಹಾಗು ವಿದ್ಯಾರ್ಥಿಗಳು ಭಾಗವಹಿಸಿದ್ದರು.

# 24ರ ಬಂದ್ ಹೋರಾಟಕ್ಕೆ ಗವಿಶ್ರೀಗಳ ಮಾರ್ಗದರ್ಶನ ಪಡೆದ ಸಮಿತಿ



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ಗವಿಸಿದ್ದ ಕೃಪೆ ಮಾಡಿದಾಗ ನಾನು ಬರುತ್ತೇನೆ. ಈಗ ನೀವು ಮುಂದುವರೆದ ಹೋರಾಟ ಸಾತ್ವಿಕವಾಗಿ ನಡೆದುಕೊಂಡು ಹೋಗುತ್ತಿದೆ. ನಾನು ಸುಮ್ಮನೆ ಕೂತಿಲ್ಲ. ನನ್ನ ಹಂತದಲ್ಲಿ ಎಲ್ಲಾ ಪ್ರಯತ್ನ ಮಾಡುತ್ತೇನೆ. ಎಂ.ವಿ.ಭೂಸನೂರುಮಠ ವಕೀಲರನ್ನು ಉದ್ದೇಶಿಸಿ ನೀವು ಅಹ ಹೋರಾಟದ ಮುಂಚೂಣಿಯಲ್ಲಿ ಇದ್ದು ಮುನ್ನಡೆಸಿರಿ ಎಂದು ಶ್ರೀ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಹೋರಾಟ ಸಮಿತಿಯಿಂದ ಭೇಟಿ ಮಾಡಿದ ಮುಖಂಡರ ತಂಡಕ್ಕೆ ಮಾರ್ಗದರ್ಶನ ಮಾಡುತ್ತಾ, ಮಠ ನಿಮ್ಮದೆ. ಯಾವಾಗಲೂ ನೀವೇ ಪ್ರಸಾದ ತಯಾರಿಸಿಕೊಂಡು ಚಳವಳಿಯಲ್ಲಿ ಬಂದವರಿಗೆ ಅನ್ನದಾಸೋಹ ಮಾಡಿರಿ ಎಂದರು.

108ನೇ ದಿನದ ಬಲ್ಡೋಟ ಹಟಾವೋ ಕೊಪ್ಪಳ ಬಚಾವೋ ಧರಣಿಯನ್ನು ಬೆಂಬಲಿಸಿ ಡಿ.ವೈ. ಎಫ್.ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಮಾತನಾಡಿ 'ಇಲ್ಲಿ ಜೀವ ಹಾರಿ ಹೋಗುತ್ತವೆ ಎಂದಾದರೆ ಉದ್ಯೋಗ ಸಮಸ್ಯೆ ಕುರಿತು ಮಾತನಾಡಿದರೆ ತಪ್ಪಾಗುತ್ತದೆ. ಇಷ್ಟೊಂದು ಕಾರ್ಖಾನೆಗಳು ಕೇಂದ್ರಿಕೃತಗೊಂಡು ಯಾರಿಗೆ ಉದ್ಯೋಗ ಕೊಟ್ಟಿವೆ. ಚೀಪ್ ಲೇಬರ್ ಗಳನ್ನು ಈಶಾನ್ಯ ಭಾರತ, ಉತ್ತರ ಭಾರತ ರಾಜ್ಯಗಳಿಂದ ತಂದು ಅವರ ಆರೋಗ್ಯವನ್ನು ಹಾಳು ಮಾಡುತ್ತವೆ. ಎಲ್ಲರೂ ಇಲ್ಲಿ ಬಲಿಪಶುಗಳೇ ಆಗಿದ್ದೇವೆ. ಫೆ. 24ರ ಬಂದ್ ಗೆ ನಮ್ಮ ಸಂಘಟನೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ಆ ಹೋರಾಟ ಅಭೂತಪೂರ್ವವಾಗಿ ಯಶಸ್ವಿಗೊಳಿಸಲು ಶ್ರಮಿಸೋಣ ಎಂದರು. ಸ್ವಾಮೀಜಿ ಭೇಟಿ ಮಾಡಿದ ತಂಡದಲ್ಲಿ ಹಿರಿಯ ನ್ಯಾಯವಾದಿ ವಿ.ಎಂ.ಭೂಸನೂರಮಠ, ವಕೀಲರಾದ ಪೀರಾ ಹುಸೇನ ಹೊಸಳ್ಳಿ, ಕೃಷಿ ಬೆಲೆ ಆಯೋಗ ಸದಸ್ಯ ಡಿ.ಎಚ್.ಪೂಜಾರ, ಮಹಿಳಾ ಘಟಕ ಪ್ರಮುಖರಾದ ಕಾವ್ಯಾ ಪ್ರಸನ್ನ ಗಡಾದ್, ಸರೋಜಾ ಬಾಕಳೆ, ಸೌಮ್ಯ ನಾಲವಾಡ, ಶ್ವೇತಾ ಅಕ್ಕಿ, ವಿದ್ಯಾ ನಾಲವಾಡ, ವಕೀಲ ರಾಜು ಬಾಕಳೆ, ಸಂಚಾಲಕರಾ ಮಲ್ಲಿಕಾರ್ಜುನ ಬಿ. ಗೋನಾಳ, ಮಂಜುನಾಥ ಜಿ.ಗೊಂಡಬಾಳ, ಡಾ. ಮಂಜುನಾಥ ಸಜ್ಜನ್, ಶರಣು ಗಡ್ಡಿ, ಮಹಾಂತೇಶ ಕೊತಬಾಳ, ವಿಪಿನ್ ಕುಮಾರ್ ತಾಲೆಡಾ, ವಕೀಲ ಪ್ರವೀಣ ಅಕ್ಕಿ, ರಾಜಶೇಖರ ಏಳುಬಾವಿ, ಮಹಾದೇವಪ್ಪ ಮಾವಿನಮಾಡು, ಮೂಕಪ್ಪ ಮೇಸ್ತ್ರಿ ಬಸಾಪುರ, ಸುರೇಶ ಪೂಜಾರ ಮುಂತಾದವರು ಇದ್ದರು.

ಧರಣಿ ನೇತೃತ್ವವಹಿಸಿದ್ದ ಅಲ್ಲಮಪ್ರಭು ಬೆಟ್ಟದೂರು ಅವರು ನಗರದ ನಾಗರಿಕರು ಫೆ 24ರ ಬಂದ್ ಯಶಸ್ವಿ ಮಾಡಬೇಕೆಂದು ವಿನಂತಿಸಿಕೊಂಡರು. ಗುರುರಾಜ ದೇಸಾಯಿ ಧರಣಿ ಬೆಂಬಲಿಸಿ ಮಾತನಾಡಿದರು.

# ಬೆಳಗಲ್ಲು ತಾಂಡಾದಲ್ಲಿ ಸೇವಾಲಾಲ್ ಜಯಂತಿ ಆಚರಣೆ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಬಂಜಾರ ಸಂಸ್ಕೃತಿ ಮತ್ತು ಮತ್ತು ಭಾಷಾ ಅಕಾಡೆಮಿಯಿಂದ ಸಂತ ಸೇವಾಲಾಲ್ ಜಯಂತಿಯನ್ನು ತಲೂಕಿನ ಬೆಳಗಲ್ ತಾಂಡದಲ್ಲಿ ನಿನ್ನೆ ಆಚರಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ನಿಷ್ಠಿ ರುದ್ರಪ್ಪ ದೇವರು ಎಲ್ಲಾ ಕಡೆಗೂ ತಾನು ಬರಲು ಆಗದ ಕಾರಣ ತನ್ನ ಒಬ್ಬ ಪ್ರತಿನಿಧಿಯನ್ನು ಭೂಮಿಯ ಮೇಲೆ ಕಳುಹಿಸುತ್ತಾನೆ ಅಂತಹ ಒಬ್ಬ ದೇವರ ಪ್ರತಿನಿಧಿಯೇ ಶ್ರೀ ಸಂತ ಸೇವಾಲಾಲ್ ರು ಎಂಸರು.

ಡಾ.ಕೇಶವಮೂರ್ತಿ ಬಂಜಾರ ಭಾಷಾ ಅಧ್ಯಯನ ಹಂಪಿ ಇವರು ಮಾತನಾಡಿ, ತಾಂಡಗಳಲ್ಲಿ ಬಡತನ ಶೋಷಣೆ ದಬ್ಬಾಳಕಿಗಳಂತು ಅನಿಸ್ತಾಗಳಿವೆ ಇವುಗಳಿಗೆ ಒಂದೇ ಪರಿಹಾರ ಶಿಕ್ಷಣದ ಮೂಲಕ ಮನುಷ್ಯ ಜ್ಞಾನ ಸಂಪಾದಿಸುತ್ತಾನೆಂದರು.

ಪ್ರಸ್ತಾವಿಕವಾಗಿ ಮಾತನಾಡಿದ ಬಂಜಾರ ಸಂಸ್ಕೃತಿ ಮತ್ತು ಭಾಷೆ ಅಕಾಡೆಮಿಯ ಸದಸ್ಯ ಸಂಚಾಲಕ ಪ್ರೊ. ಶಿರಗಾನಹಳ್ಳಿ ಶಾಂತ ನಾಯಕ್, ಬಂಜಾರ ಸಂಸ್ಕೃತಿ ಗಾಯನ ಕಸೂತಿ ವಿಶಿಷ್ಟವಾದ ಭಾಷೆಯ ಉಳಿವಿಗಾಗಿ ಬಂಜಾರ ಜನ ಸಮುದಾಯದ ಸ್ಮೃತಿಯಾಗಿ ಕೆಲಸ ನೆರವೇರಿಸುತ್ತಾರೆ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿಯು ಲಂಬಾಣಿ ಮತ್ತು ಈ ನಾಡಿನ ಇತರ ಸಮುದಾಯಗಳಂತೇ ಜೊತೆ ಅದನ್ನ ಮುನ್ನಲ್ಲಿಗೆ ತರಲು ಪ್ರಯತ್ನಿಸುತ್ತಿದೆಂದರು.

ರೂಪಾಲಿ ಪವರ್ ಪ್ರಾರ್ಥನೆ, ತಾಂಡವ ನಾಯಕ ಕಾರ್ಬಾರಿ ಡಾವೋ ಹಾಗೂ ತಾಂಡದ ಮುಖಂಡರಾದ ರಾಮನಾಯಕ ಲಕ್ಷ್ಮಣನಾಯಕ ಸ್ವಾಮಿನಾಯಕ ಮಲ್ಲಿಕಾರ್ಜುನ ಮುಂತಾದವರು ಹಾಜರಿದ್ದರು. ತಿಪ್ಪೇಸ್ವಾಮಿ ನಾಯಕ ಕಾರ್ಯಕ್ರಮ ನಿರೂಪಣೆ ಮಾಡಿದರು.

# ಅಂಬೇಡ್ಕರ್ ಕಂಚಿನ ಪುತ್ಥಳಿ ಸ್ಥಾಪನೆಗೆ ಮನವಿ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಗರದ ಹೊಸ ಡಿಸಿ ಕಚೇ–ರಿಯ ಮುಂದೆ ಡಾ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಕಂಚಿನ ಪುತ್ಥಳಿಯ ಪ್ರತಿಮೆಯನ್ನು ಸ್ಥಾಪಿಸುವಂತೆ ಕರ್ನಾಟಕ ದಲಿತ ರಕ್ಷಣಾ ವೇದಿಕೆ ಜಿಲ್ಲಾ ಸಮಿತಿ ಇಂದು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದೆ.

ಅಂಬೇಡ್ಕರ್ ಅವರು ಭಾರತ ದೇಶಕ್ಕೆ ದೇಶಕ್ಕೆ ಸಂವಿಧಾನವನ್ನು ಬರೆದು ಕೊಟ್ಟಿದ್ದರಿಂದ ಭಾರತದ ದೇಶದಲ್ಲಿ ಸಂವಿಧಾನಾತ್ಮಕ ಆಡಳಿತ ನಡೆಸಲು ಸಹಕಾರಿಯಾಗಿ ಸಾಗಿ ಮುನ್ನಡೆಯುತ್ತಿದು ಅಭಿವೃದ್ಧಿ ಭಾರತ ದೇಶಕ್ಕೆ ಭದ್ರ ಬುನಾದಿ ಹಾಕಿಕೊಟ್ಟ ಧೀಮಂತ ನಾಯಕರಾಗಿದ್ದದಾ–ರೆ. ತುಳಿತಕ್ಕೊಳಪಟ್ಟ ಶೋಷಿತರ ಸಮಾನತೆಯ ಸಮಬಾಳು ಸಮಪಾಲು ದೊರಕಿಸಿಕೊಟ್ಟಿದ್ದು ಹಾಗೂ ದೇಶಕ್ಕೆ ಅಪಾರ ಕೊಡುಗೆ ನೀಡಿದ್ದಾರೆ.ಆದ್ದರಿಂದ ಡಾ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಕಂಚಿನ ಒಳ್ಳೆಯ ಪುತ್ಥಳಿಯನ್ನು ಬಳ್ಳಾರಿ ನಗರದ ಹೊಸ ಜಿಲ್ಲಾ ಆಡಳಿತ ಕಛೇರಿಯ ಮುಂದೆ ಸ್ಥಾಪಿಸಬೇಕು ಎಂದು ಕರ್ನಾಟಕ ದಲಿತ ರಕ್ಷಣಾ ವೇದಿಕೆ ಜಿಲ್ಲಾ ಸಮಿತಿಯ ಕೆ. ಶಂಕರ್ ನಂದಿಹಾಳ, ಸಿ. ಹನುಮೇಶ್ ಕಟ್ಟಿಮನಿ, ಓಂಕಾರಪ್ಪ ಬೂದಗುಂಪ ಮೊದಲಾದವರು ಮನವಿ ಸಲ್ಲಿಸಿದ್ದಾರೆ.

# ಸಂಗೀತ ಕಾರ್ಯಕ್ರಮ



• **ಮಲ್ಲಮ್ಮ ನುಡಿ ಹುಣಸಗಿ:**

ಪಟ್ಟಣದ ಕುಪ್ಪಿ ಕ್ರಾಸ್ ಕೋಜಾಪುರ ದಲ್ಲಿ ಶಿವರಾತ್ರಿ ಜಾಗರಣೆ ನಿಮಿತ್ಯ ಸಂಗೀತ ಕಾರ್ಯಕ್ರಮವನ್ನು ಬಸವರಾಜ ಸ್ವಾಮಿ ಸ್ಥಾವರಮಠ ಅವರು ಆಯೋಜನೆ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಪಾರ್ವತಿಯರ ವಿವಾಹದ ಸಂಕೇತವಾಗಿ, ಭಕ್ತರು ರಾತ್ರಿಯಿಡೀ ಉಪವಾಸ ಮತ್ತು ಪ್ರಾರ್ಥನೆ ಮೂಲಕ ನಡೆಸುವ ಭಕ್ತಿ ಆಚರಣೆಯಾಗಿದೆ. ಭಜನೆ, ರುದ್ರಪಠಣ, ಮತ್ತು ಯಾಮಗಳ ವಿಶೇಷ ಅಭಿಷೇಕದೊಂದಿಗೆ ಜಾಗರಣೆ ನಡೆಸುವುದರಿಂದ ಆಧ್ಯಾತ್ಮಿಕ ಶಕ್ತಿ ಲಭಿಸುತ್ತದೆ ಎಂದು ನಂಬಲಾಗೆದೆ ಎಂದರು ನಂತರ ಅಶೋಕ ರಾಜನ ಕೋಳೂರು, ಗುರು ಬಿರಾದಾರ, ಪ್ರವೀಣ ಪತ್ತಾರ ಹಾಗೂ ಅಪ್ಪನ ಬಡಿಗೇರ, ಚಳಿಗೆಪ್ಪ ಬೇವಿನಗಿಡ ಪುಟ್ಟರಾಜ ಗವಾಯಿ ಸಂಗೀತ ಪಾಠಶಾಲೆ ವಿದ್ಯಾರ್ಥಿಗಳಿಂದ ಸಂಗೀತ ಕಾರ್ಯಕ್ರಮ ನಡೆಯಿತು.ಸಂಗೀತ ಸೇವೆಗೈದ ಗಾಯಕರಿಗೆ ಗೌರವಿಸಿ ಸನ್ಮಾನಿಸಲಾಯಿತು

# ಗಮನ ಸೆಳೆದ ಶಿವರಾತ್ರಿ ಸಾಂಸ್ಕೃತಿಕ ಉತ್ಸವ




• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ನಗರದ ಸತ್ಯನಾರಾಯಣ ಪೇಟೆಯ ವಿರೂಪಾಕ್ಷದೇವಾಲಯದ ಆವರಣದಲ್ಲಿ ತುಂಗ ಗಂಗಾ ಸಾಂಸ್ಕೃತಿಕ ಕಲಾ ಟ್ರಸ್ಟ್ ನಿಂದ ನಿನ್ನೆ ಹಮ್ಮಿಕೊಂಡ ಶಿವರಾತ್ರಿ ಸಾಂಸ್ಕೃತಿಕ ಉತ್ಸವದಲ್ಲಿ ಕಲಾವಿದೆ ಶ್ರೀಜಾ ತಂಡ ಶಾಸ್ತ್ರೀಯ ನೃತ್ಯ ಪ್ರದರ್ಶನ ಭಕ್ತರನ್ನು ತನ್ಮಯ ಗೊಳಿಸಿತು.

ವಸುಂಧರ ತಂಡದ ಭಕ್ತಿ ಗೀತೆಗಳ ಸಮೂಹ ನೃತ್ಯ ಪ್ರದರ್ಶನ ರಂಜಿಸಿತು. ಕಲೆ, ಸಾಹಿತ್ಯ ಸಂಸ್ಕೃತಿ ಉಳಿಸುವ ನಿಟ್ಟಿನಲ್ಲಿ ಇಂತಹ ಅನೇಕ ಕಾರ್ಯಕ್ರಗಳನ್ನು ಟ್ರಸ್ಟ್ ನಡಿಸಿಕೊಂಡು ಬರುತ್ತಿರುವುದು ಅಭಿನಂದನೀಯ ಎಂದು ಗೋಪಿ ಶರ್ಮ ಹೇಳಿದರು.

.ಕಾರ್ಯಕ್ರಮದಲ್ಲಿ ಸಂಸ್ಥೆಯ ಕಾರ್ಯದರ್ಶಿ ವಿ.ರಾಮಚಂದ್ರ, ಉಪಾಧ್ಯಕ್ಷ ಶ್ರೀಧರ್, ಶಿವರುದ್ರಯ್ಯ, ಜಡೆಪ್ಪ, ವೆಂಕಟೇಶ , ಶೈನು, ಅಮೃತ, ಸಿಂಧು, ದೀಕ್ಷಾ, ಭಾಂಧವಿ, ಸೋನು, ಕೀರ್ತಿ, ದೀಪ್ತಿ, ರಾಧಾಕೃಷ್ಣ ಮೊದಲಾದವರು ಇದ್ದರು.

# ಪಾತಾಳಕ್ಕೆ ಕುಸಿದ ಟೊಮೆಟೊ ಬೆಲೆ, ಕೆಜಿಗೆ 10 ರೂಪಾಯಿಗೂ ಕೇಳೋರೇ ಇಲ್ಲ!

**ಮಲ್ಮನ ನುಡಿ ವಾರ್ತೆ ಮಸ್ಕಿ :**

ನೂರು ರೂಪಾಯಿ ಗಡಿದಾಟಿ ಭಾರೀ ಸದ್ದು ಮಾಡಿದ್ದ ಟೊಮಟೊವನ್ನು ಈಗ ಕೇಳುವವರೇ ಇಲ್ಲದಂತಾಗಿದೆ. ಇದರಿಂದ ಸದ್ಯ ಕೆಜಿ ಟೊಮೆಟೊ 10 ರೂ.ಗೆ ಮಾರಾಟವಾಗುತ್ತಿದ್ದು, ಬೆಳೆಗಾರರು ಕಂಗಾಲಾಗಿದ್ದಾರೆ. ಪ್ರತಿ ಎಕರೆಗೆ ಕಡ್ಡಿ, ಸಸಿ ಸೇರಿದಂತೆ 40 ಸಾವಿರ ರೂ.ವರೆಗೆ ಖರ್ಚು ಮಾಡುವ ರೈತರಿಗೆ ಸದ್ಯ ಕೆಜಿಗೆ ಕೇವಲ 10 ರೂಪಾಯಿ ಮಾತ್ರ ಸಿಗುತ್ತಿದೆ. ಇದರಿಂದ ಹಾಕಿದ ಬಂಡವಾಳ ಕೂಡ ಕೈಸೇರುತ್ತಿಲ್ಲ.



ಬೆಲೆ ದಿಢೀರ್ ಕುಸಿತ ಕಂಡಿ–ದ್ದು, ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಕಷ್ಟಪಟ್ಟು ಬೆಳೆದ ಟೊಮೆಟೊ ಕೈಗೆ ಬಂದರೂ, ಮಾರುಕಟ್ಟೆಯಲ್ಲಿ ಬೆಲೆ ಸಿಗದೆ ರೈತರು ಕಣ್ಣೀರು ಹಾಕುವ ಪರಿಸ್ಥಿತಿ ನಿರ್ಮಾಣವಾಗಿದೆ.

ಪಟ್ಟಣದಲ್ಲಿ ಪ್ರತಿ ಭಾನುವಾರ ನಡೆಯುವ ವಾರದ ಸಂತೆಯಲ್ಲಿ ಟೊಮೆಟೊ ದರ ಪಾತಾಳಕ್ಕೆ ಕುಸಿದಿದೆ. ಒಂದು ಕೆಜಿ ಕೇವಲ 10 ರೂಪಾಯಿ ಮಾತ್ರ ಸಿಗುತ್ತಿದೆ. ಇನ್ನೂ, ಒಂದು ಬಾಕ್ಸ್ ಟೊಮೆಟೊಗೆ 100 ರೂಪಾಯಿಗೆ ಮಾರಾಟವಾಗುತ್ತಿದೆ. ಇದರಿಂದಾಗಿ ತಮ್ಮ ಬೆಳೆಗಳಿಗೆ ಮಾರುಕಟ್ಟೆ ಕಲ್ಪಿಸಲು ರೈತರು ಹರಸಾಹಸ ಪಡುತ್ತಿದ್ದಾರೆ.


ವಾಹನ ಬಾಡಿಗೆ ಖರ್ಚು ಸಹ ರೈತರೇ ಭರಿಸಬೇಕಾದ ದುಸ್ಥಿತಿ ಎದುರಾಗಿದೆ. ಇದರಿಂದ ಬೇಸರಗೊಂಡ ಟೊಮೆಟೊ ಬೆಳೆಗಾರರು ಮತ್ತು ಮಾರಾಟಗಾರರು, ಸಂಜೆಯ ವೇಳೆಗೆ ಮಾರಾಟವಾಗದೆ ಉಳಿದ 25ಕ್ಕೂ ಹೆಚ್ಚು ಬಾಕ್ಸ್ ಟೊಮೆಟೊ ಗಳನ್ನು ಮಾರುಕಟ್ಟೆಯಲ್ಲೇ ಬಿಸಾಕಿ ನಿರಾಸೆಯಿಂದ ಮನೆಗೆ ಮರಳಿದ್ದರು.

ಅದೇ ಏನೇ ಇರಲಿ ಈ ದೇಶದಲ್ಲಿ ಅನ್ನದಾತನ ಗೋಳು ಕೇಳುವವರು ಯಾರು ಇಲ್ಲದಂತಾಗಿದೆ ನಾವು ರೈತರ ಪರ ಅಂತ ಬಡಾಯಿ ಕೊಚ್ಚಿಕೊಳ್ಳುವ ಸರಕಾರ ಇನ್ನಾದರೂ ಇತ್ತ ಗಮನಹರಿಸಿ ಬೆಂಬಲ ಬೆಲೆ ಕನಿಷ್ಟ ಬೆಲೆ ನಿಗದಿ ಮಾಡಬೇಕಿದೆ. ಇಲ್ಲವಾದರೆ ಅನ್ನದಾತನ ಬದುಕು ಬೀದಿ ಪಾಲಾಗೋದರಲ್ಲಿ ಅನುಮಾನವಿಲ್ಲ.

# ಶ್ರೀ ಗುರು ಭದ್ರೇಶ್ವರರ ರಥೋತ್ಸವ ನಾಳೆ

**ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:**

ತಾಲೂಕಿನ ಇಟಗಾ ಗ್ರಾಮದ ಶಿವ ಸಿದ್ದಯೋಗಾಶ್ರಮ ಶಾಖಾ ಮುಕ್ತಿ ಮಠ ಶ್ರೀ ಗುರು ಭದ್ರೇಶ್ವರರ 49ನೇಯ ಜಾತ್ರಾ ಮಹೋತ್ಸವ ಫೆಬ್ರವರಿ 15ರಿಂದ ಜಾತ್ರಾ ಮಹೋತ್ಸವದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಸಡಗರದಿಂದ ಆರಂಭಗೊಂಡಿವೆ.



ಫೆಬ್ರವರಿ 17ರಂದು ಲಿಂಗೈಕ್ಯ ಚನ್ನಮಲೇಶ್ವರ ತ್ಯಾಗಿಗಳ ತೊಟ್ಟಿಲು ಕಾರ್ಯಕ್ರಮ ಸಾಯಂಕಾಲ 6 ಘಂಟೆಗೆ ಜರುಗಲಿದೆ. ಭದ್ರೇಶ್ವರರಿಗೆ ಹಾಗೂ ಅಂಬಾ ಭವಾನಿ ದೇವಿಗೆ ಅಭಿಷೇಕ್ ಕಾರ್ಯಕ್ರಮ ಜರುಗಲಿದೆ. 18ರಂದು ಸಾಯಂಕಾಲ 5 ಘಂಟೆಗೆ ಶಿವ ಸಿದ್ದ ಸೋಮೇಶ್ವರ ಶಿವಾಚಾರ್ಯರ ಹಾಗೂ ಶಂಭುಲಿಂಗೇಶ್ವರ ಶಿವಾಚಾರ್ಯರ ದಿವ್ಯ ಸಾನಿಧ್ಯದಲ್ಲಿ ಸಹಸ್ರಾರು ಭಕ್ತರ ಸಮ್ಮುಖದಲ್ಲಿ ರಥೋತ್ಸವ ಜರುಗಲಿದೆ. ಆದ ಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ ದೇವರ ದರ್ಶನ ಪಡೆದು ಜಾತ್ರಾ ಮಹೋತ್ಸವ ಯಶಸ್ವಿಗೊಳಿಸಬೇಕೆಂದು ಕಮಿಟಿಯವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಜಿ ಸಂಧಾನದ ಮೂಲಕ ಪ್ರಕರಣ ಇತ್ಯರ್ಥ ಪಡಿಸಿಕೊಳ್ಳಿ: ನ್ಯಾ. ಮಹಾಂತೇಶ



• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ಮಾರ್ಚ್ 14 ರಂದು ನಡೆಯುವ ರಾಷ್ಟ್ರೀಯ ಲೋಕ್ ಅದಾಲತ್‌ನಲ್ಲಿ ತಮ್ಮ– ತಮ್ಮ ಇಲಾಖೆಯಿಂದ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಬಗೆಹರಿಸಿಕೊಳ್ಳಬೇಕೆಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಕೊಪ್ಪಳ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾಂತೇಶ ಎಸ್. ದರಗದ ಅವರು ವಿವಿಧ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದರು.

ಬುಧವಾರ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಕಛೇರಿ ಸಭಾಂಗಣದಲ್ಲಿ ಮಾರ್ಚ್ 14 ರಂದು ನಡೆಯುವ ರಾಷ್ಟ್ರೀಯ ಲೋಕ್ ಅದಾಲತ್‌ನ ಅಂಗವಾಗಿ ವಿವಿಧ ಇಲಾಖೆಯ ಅಧಿಕಾರಿಗಳಿಗೆ ಕರೆದ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಹಳಷ್ಟು ಜನರಿಗೆ ಕಾನೂನಿನ ಅರಿವೇ ಇಲ್ಲ. ಈ ಕುರಿತು ನಾವೆಲ್ಲರೂ ಜನರಿಗೆ ಮಾಹಿತಿ ನೀಡುವ ಕೆಲಸ ಮಾಡಬೇಕಿದೆ. ರಾಷ್ಟ್ರೀಯ ಲೋಕ ಅದಾಲತ್ ನಡೆಯುತ್ತಿರುವ ಕುರಿತು ಹೆಚ್ಚಿನ ಪ್ರಚಾರ ನೀಡಿ. ನಗರಸಭೆ ವಾಹನಗಳಲ್ಲಿ ಮತ್ತು ಬಸ್ ನಿಲ್ದಾಣಗಳಲ್ಲಿ ಹಾಗೂ ಪತ್ರಿಕೆಗಳಲ್ಲಿ ಈ ಕುರಿತು ಹೆಚ್ಚು ಪ್ರಚಾರ ಆಗಬೇಕು. ರಾಜಿ ಸಂಧಾನದ ಮೂಲಕ ಪ್ರಕರಣಗಳು ಇತ್ಯರ್ಥವಾದರೆ ಜನರ ಸಮಯ ಮತ್ತು ಅವರ ಸಂಬಂಧಗಳು ಉಳಿಯುತ್ತವೆ. ಈ ಸಲ ಹೆಚ್ಚು ಪ್ರಕರಣಗಳನ್ನು ಇತ್ಯರ್ಥಪಡಿಸುವ ಗುರಿ ಇದ್ದು, ಇದಕ್ಕೆ ತಮ್ಮೆಲ್ಲರ ಸಹಕಾರ ಬೇಕಾಗುತ್ತದೆ ಎಂದು ಹೇಳಿದರು.


ಬಹಳಷ್ಟು ಪ್ರಕರಣಗಳು ಕುಟುಂಬದ ಅಕ್ಕ– ಅಣ್ಣ ತಮ್ಮಂದಿರ ಪಾಲು ಕೊಡುವಂತವುಗಳೇ ಆಗಿರುತ್ತವೆ. ಅವುಗಳನ್ನು ಮನೆಯಲ್ಲಿ ಕುಳಿತು ಬಗೆಹರಿಸಿಕೊಳ್ಳಬಹುದು. ಆದರೆ ಅವುಗಳು ಕೋರ್ಟಿಗೆ ಬರುತ್ತವೆ. ವಿಚ್ಛೇದನ ಪ್ರಕರಣಗಳಲ್ಲಿ ಹೊಂದಾಣಿಕೆ ಇಲ್ಲದ ಕಾರಣ, ನಾನು ಎನ್ನುವ ಅಹಂ ಭಾವದಿಂದ ತಮ್ಮ ಕುಟುಂಬವನ್ನೇ ಹಾಳು ಮಾಡಿಕೊಳ್ಳುವ ಹಂತಕ್ಕೆ ಬರುತ್ತವೆ. ಇಬ್ಬರೂ ಪರಸ್ಪರ ಹೊಂದಾಣಿಕೆಯಿಂದ ಜೀವನ ನಡೆಸಿದರೆ ಯಾವುದೇ ಸಮಸ್ಯೆಗಳು ಬರುವುದಿಲ್ಲ. ಇಂದು ಎಲ್ಲರೂ ಸ್ವತಂತ್ರ ಜೀವನದಲ್ಲಿ ಬದುಕುವಂತವರಾಗಿದ್ದಾರೆ. ಮಾರ್ಚ್ 14 ರಂದು ರಾಜ್ಯದಾದ್ಯಂತ ನಡೆಯುವ ರಾಷ್ಟ್ರೀಯ ಲೋಕ್ ಅದಾಲತ್‌ನ ಸದುಪಯೋಗವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕೆಂದು ಹೇಳಿದರು.

ಸಭೆಯಲ್ಲಿ ಕೊಪ್ಪಳ ತಹಶೀಲ್ದಾರ ಬಸವರಾಜ, ಪರಿಸರ ಇಲಾಖೆ ಅಧಿಕಾರಿ ವೈ.ಎಸ್. ಹರಿಶಂಕರ್, ಅಬಕಾರಿ ಉಪಾಧೀಕ್ಷಕರಾದ ಆಂಜನೇಯ, ವಾರ್ತಾ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಸುರೇಶ ಜಿ., ಲೇಬರ್ ಇನ್ಸ್‌ಪೆಕ್ಟರ್ ಮಂಜುಳಾ ಸೇರಿದಂತೆ ನಗರಸಭೆ, ಸಾರಿಗೆ, ಅರಣ್ಯ ಹಾಗೂ ಇತರೆ ವಿವಿಧ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಕರ್ತವ್ಯ ನಿರ್ವಹಣೆಯಲ್ಲಿ ಸೇವಾ ಭಾವ ಮುಖ್ಯ: ಬಡಿಗೇರ್

**ಮಲ್ಲಮ್ಮ ನುಡಿ ಹುಣಸಗಿ:**

ತಾಲೂಕಿನ ಘಟಕದಲ್ಲಿ ಶ್ರೀ ಸತ್ಯ ಸೇವಾಲಾಲ್ ಮಹಾರಾಜರ 287 ನೇ ಜಯಂತಿಯನ್ನು ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದರ ಮೂಲಕ ಆಚರಿಸಲಾಯಿತು. ಗೃಹರಕ್ಷಕ ದಳದ ವಾರದ ಕವಾಯ್ತನ್ನು ವೀಕ್ಷಿಸಿದ ನಂತರ ಜಿಲ್ಲಾ ಕಮಾಂಡಂಟ್ ಈರಣ್ಣ ಬಡಿಗೇರ್ ಮಾತನಾಡಿ, ನಿಮ್ಮ ಕರ್ತವ್ಯ ನಿರ್ವನೆಯಲ್ಲಿ ಯಾವಾಗಲೂ ಸೇವಾ ಭಾವ ಮುಖ್ಯವಾಗಿರಲಿ, ಮಾಡುವ ಕೆಲಸದಲ್ಲಿ ಮಾನವೀಯತೆ ಇರಲಿ ಸೇವೆಯೇ ಪರಮ ಧರ್ಮ. ನಿಮ್ಮ ಸಮವಸ್ತ್ರಕ್ಕೆ ಪ್ರಮಾಣಿಕತೆಯೇ ಜೀವಾಳ. ಯಾವುದೇ ಪ್ರಲೋಭನೆಗೆ ಒಳಗಾಗದೆ ನಿಷ್ಠೆಯಿಂದ



ಕಾರ್ಯನಿರ್ವಾಹಿಸಿರಿ. ಸಮಯಕ್ಕೆ ಸರಿಯಾಗಿ ವರದಿ ಮಾಡಿಕೊಳ್ಳುವುದು ಮತ್ತು ಕರ್ತವ್ಯ ನಿರ್ವಹಿಸುವುದೇ ನಿಮ್ಮ ವಿಶೇಷತೆಯಾಗಲಿ ಎಂದು ಹೇಳಿದರು. ನಂತರ ಗಣೇಶ್, ಈದಮಿಲಾದ ಹಬ್ಬಗಳ ಸಂದರ್ಭದಲ್ಲಿ ಪ್ರಾಮಾಣಿಕ ಸೇವೆ ಮೆಚ್ಚಿ ಕರ್ತವ್ಯ ನಿರ್ವಹಿಸಿದ ಗೃಹರಕ್ಷಕ ಸಿಬ್ಬಂದಿಗೆ ಯಾದಗಿರಿ ಜಿಲ್ಲಾ ಎಸ್ಪಿ ಪೃಥ್ವಿಕ ಶಂಕರ್ ಅವರು ಕೊಡಮಾಡಿದ ಪ್ರಶಂಸನಾ ಪತ್ರವನ್ನು ಜಿಲ್ಲಾ ಕಮಾಂಡಂಟ್ ಈರಣ್ಣ ಬಡಿಗೇರ್ ಅವರು ಸಿಬ್ಬಂದಿಗಳಿಗೆ ವಿತರಿಸಿದರು. ಈ ಸಂದರ್ಭದಲ್ಲಿ ಘಟಕ ಅಧಿಕಾರಿ ಮಹಮ್ಮದ್ ಆಶಿಕ್, ಶಾಂತಪ್ಪ, ರಾಮಪ್ಪ, ರಾಜಕುಮಾರ್, ಹಣಮಂತರಾಯಗೌಡ, ಮೈಬೂಬ್ ಸಾಬ್ ಸೇರಿದಂತೆ ಇತರ ಗೃಹರಕ್ಷಕರು ಇದ್ದರು.

# ಕುರುಗೋಡು ಉತ್ಸವ: ಅದ್ದೂರಿಯಾಗಿ ನಡೆದ ಸಾಂಸ್ಕೃತಿಕ ಸೊಬಗಿನ ಜಾನಪದ ಮೆರವಣಿಗೆ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಕುರುಗೋಡು ಉತ್ಸವದ ಅಂಗವಾಗಿ ಭಾನುವಾರ ಪಟ್ಟಣದಲ್ಲಿ ಸಾಂಸ್ಕೃತಿಕ ಸೊಬಗಿನ ಜಾನಪದ ಮೆರವಣಿಗೆಯು ಅದ್ದೂರಿಯಾಗಿ ನಡೆಯಿತು.

ಪಟ್ಟಣದ ಸಿಂಧಿಗೇರಿ ರಸ್ತೆಯಲ್ಲಿನ ಶ್ರೀ ಗಾದಿಲಿಂಗೇಶ್ವರ ದೇವಸ್ಥಾನ ಬಳಿ ಉತ್ಸವದ ಮೂರ್ತಿ ಪಾರ್ವತಿ–ಪರಮೇಶ್ವರನಿಗೆ ಕಂಪ್ಲಿ ಶಾಸಕ ಹಾಗೂ ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ (ಕಾವೇರಿ ಹ್ಯಾಂಡ್‌ಲೂಮ್ಸ್) ದ ಅಧ್ಯಕ್ಷರೂ ಆಗಿರುವ ಜೆ.ಎನ್.ಗಣೇಶ್ ಅವರು ಪುಷ್ಪಾರ್ಚನೆ ಮಾಡಿ ಜಾನಪದ ಮೆರವಣಿಗೆಗೆ ಚಾಲನೆ ನೀಡಿದರು. ಚೊಚ್ಚಲ ಉತ್ಸವ ಅಂಗವಾಗಿ ಕಲಾ ತಂಡಗಳ ಮೂಲಕ ಗ್ರಾಮೀಣ ಭಾಗದ ಸಾಂಸ್ಕೃತಿಕ ವೈವಿಧ್ಯತೆಗೆ ಜಾನಪದ ಮೆರವಣಿಗೆಯು ಸಾಕ್ಷಿಯಾಯಿತು. ಪಟ್ಟಣದ ಇಕ್ಕೆಲಗಳಲ್ಲಿ ನೆರೆದಿದ್ದ ನೋಡುಗ ಜನರ ಜನಮನ ಸೆಳೆಯಿತು.

ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ತಾಸಿ ರಾಂಡೋಲ್, ಹಲಗೆವಾದನ, ವೀರಗಾಸೆ, ಹಗಲುವೇಷ, ಗೊರವರ ನೃತ್ಯ ಕುಣಿತ, ನಂದಿಧ್ವಜ, ಕಹಳೆ ವಾದನ, ಹಕ್ಕಿಪಿಕ್ಕಿ ನೃತ್ಯ ಕಲಾತಂಡಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದವು. ಕಳಸ–ಕುಂಭ ಹೊತ್ತ 100 ಕ್ಕೂ ಹೆಚ್ಚು ಮಹಿಳೆಯರು ಗಮನಸೆಳೆದರು.

ಜಾನಪದ ಮೆರವಣಿಗೆಯು ಗಾದಿಲಿಂಗೇಶ್ವರ ದೇವಸ್ಥಾನದಿಂದ ಆರಂಭಗೊಂಡು ಪಟ್ಟಣದ ಮುಖ್ಯವೃತ್ತದ ಮಾರ್ಗವಾಗಿ ದೊಡ್ಡಬಸವೇಶ್ವರ ದೇವಸ್ಥಾನದ ಆವರಣಕ್ಕೆ ತಲುಪಿ ಸಂಪನ್ನಗೊಂಡಿತು. ಈ ವೇಳೆ ಕುರುಗೋಡು ಪುರಸಭೆ ಅಧ್ಯಕ್ಷ ಟಿ.ಶೇಖಣ್ಣ, ಕುರುಗೋಡು ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಸವನಗೌಡ, ತಹಶೀಲ್ದಾರ ನರಸಪ್ಪ, ತಾಪಂ ಇಓ ನಿರ್ಮಲಾ, ಸೇರಿದಂತೆ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

# ಕುರುಗೋಡು ಉತ್ಸವ: ಶಿವಬಸವ ಆರತಿಯ ಮೂಲಕ ದೈವಿಕ ದರ್ಶನ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಕುರುಗೋಡು ಉತ್ಸವದ ಅಂಗವಾಗಿ ಆಯೋಜಿಸಿದ್ದ ಶಿವಬಸವ ಆರತಿ ಕಾರ್ಯಕ್ರಮವು ದೈವಿಕ ದರ್ಶನಕ್ಕೆ ಸಾಕ್ಷಿಯಾಯಿತು.

ಐತಿಹಾಸಿಕ ಪಟ್ಟಣ ಕುರುಗೋಡಿನ ಆರಾಧ್ಯದೈವ ಶ್ರೀ ದೊಡ್ಡಬಸವೇಶ್ವರ ದೇವಸ್ಥಾನ ಸನ್ನಿಧಿ ಮುಂಭಾಗದ ದೊಡ್ಡಬಸವೇಶ್ವರ ವೇದಿಕೆಯಲ್ಲಿ ಉತ್ಸವದ ಮೊದಲ ದಿನವಾದ ಭಾನುವಾರ ವಾರಣಾಸಿಯ ಅರ್ಚಕರು ಗಂಗಾರತಿಯ ಮಾದರಿಯಲ್ಲಿ ಶಿವಬಸವ ಆರತಿ ನಡೆಸಿಕೊಟ್ಟರು.

ಅರ್ಚಕರು ಸಾಲಾಗಿ ನಿಂತು, ಮಂತ್ರಘೋಷಗಳ ನಡುವೆ ದೊಡ್ಡದಾದ ಕಂಚಿನ ದೀಪಗಳಿಂದ ಆರತಿ ಬೆಳಗಿದರು. ಮಂತ್ರಗಳ ಪಠಣ ಮತ್ತು ಶಂಖನಾದವು ಸಾರ್ವಜನಿಕರಲ್ಲಿ ಭಕ್ತಿಭಾವ ಮೂಡಿಸಿತು. ಆರತಿ ಕಾರ್ಯಕ್ರಮವು ದಾರ್ಶನಿಕ ಪಾವಿತ್ರ್ಯತೆಯನ್ನು ಮರುಕಳಿಸುವ ಕ್ಷಣಕ್ಕೆ ನಾಂದಿಯಾಯಿತು.



ಇದೇ ವೇಳೆ ಮಹಾಶಿವರಾತ್ರಿಯಂದು ದೇವಸ್ಥಾನಕ್ಕೆ ಆಗಮಿಸಿದ್ದ ಭಕ್ತಗಣ ಹಾಗೂ ಅಪಾರ ಜನಸ್ತೋಮ ಶಿವಬಸವ ಆರತಿ ಕಂಡು ಪುನೀತರಾದರು. ಶಿವಬಸವ ಆರತಿ ಕಾರ್ಯಕ್ರಮಕ್ಕೆ ಭರತನಾಟ್ಯ ಕಲಾವಿದರ ಹೆಜ್ಜೆಯ ನಾದವು ಜೊತೆಯಾಗಿದ್ದು, ನೋಡುಗರಿಗೆ ರೋಮಾಂಚನ ಮೂಡಿಸಿತು.

ಇದಕ್ಕೂ ಮುನ್ನ ಕಂಪ್ಲಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ (ಕಾವೇರಿ ಹ್ಯಾಂಡ್‌ಲೂಮ್ಸ್) ದ ಅಧ್ಯಕ್ಷರೂ ಆಗಿರುವ ಜೆ.ಎನ್. ಗಣೇಶ್ ಅವರು ಉತ್ಸವದ ಮೂರ್ತಿ ಪರಮೇಶ್ವರನಿಗೆ ಪೂಜಾ ಧಾರ್ಮಿಕ ವಿಧಿ–ವಿಧಾನ ನೆರವೇರಿಸಿದರು.

ಬಳಿಕ ಶ್ರೀ ದೊಡ್ಡ ಬಸವೇಶ್ವರ ದೇವಸ್ಥಾನದ ಆರತಿ ವೇದಿಕೆಯಲ್ಲಿ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ,

ನಂತರ ಸಾಧಕರಿಗೆ ಹಾಗೂ ನೌಕರರಿಗೆ ಸನ್ಮಾನ ಕಾರ್ಯಕ್ರಮ ಜರುಗಿದವು.

ಈ ವೇಳೆ ಕುರುಗೋಡು ಪುರಸಭೆಯ ಅಧ್ಯಕ್ಷ ಟಿ.ಶೇಖಣ್ಣ, ಕುರುಗೋಡು ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಬಸವನಗೌಡ, ತಹಶೀಲ್ದಾರ ನರಸಪ್ಪ, ತಾಪಂ ಇಓ ನಿರ್ಮಲಾ ಸೇರಿದಂತೆ ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿ– ಸಿಬ್ಬಂದಿ ಹಾಗೂ ಸಾರ್ವಜನಿಕರು ಇದ್ದರು.

# ಪರೀಕ್ಷಾ ಕೊಠಡಿಯಲ್ಲಿ ಸಿಸಿಟಿವಿ ಕಣ್ಗಾವಲು: 28ಕ್ಕೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಜಿಲ್ಲೆಯಾದ್ಯಂತ ಫೆಬ್ರವರಿ 28 ರಿಂದ ಮಾರ್ಚ 17 ವರೆಗೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳು ನಡೆಯಲಿದ್ದು, ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸುವಂತೆ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಅಧಿಕಾರಿಗಳಿಗೆ ಸೂಚಿಸಿದರು.



ಜಿಲ್ಲಾಡಳಿತ ಭವನದಲ್ಲಿರುವ ಆಡಿಟೋರಿಯಂ ಹಾಲ್‌ನಲ್ಲಿ ಸೋಮವಾರ ಜರುಗಿದ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ಪೂರ್ವ ಸಿದ್ದತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಜಿಲ್ಲೆಯಲ್ಲಿ ಒಟ್ಟು 27009 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದು, ಅದಕ್ಕಾಗಿ ಜಿಲ್ಲೆಯಾದ್ಯಂತ 165 ಕಾಲೇಜುಗಳಲ್ಲಿ ಒಟ್ಟು 39 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಪರೀಕ್ಷೆಯಲ್ಲಿ ಯಾವುದೇ ರೀತಿಯ ಅಕ್ರಮ ಚಟುವಟಿಕೆಗಳು ನಡೆಯದಂತೆ ಮುಂಜಾಗ್ರತಾ ಕ್ರಮವಹಿಸಿ ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಅಗತ್ಯ ಸಿದ್ದತೆ ಮಾಡಿಕೊಳ್ಳುವಂತೆ ತಿಳಿಸಿದರು.

ಪರೀಕ್ಷಾ ಕೇಂದ್ರಕ್ಕೆ ನೇಮಕಗೊಂಡ ಮುಖ್ಯ ಅಧೀಕ್ಷಕರು, ಕೊಠಡಿ ಮೇಲ್ವಿಚಾರಕರು, ಪ್ರಶ್ನೆ ಪತ್ರಿಕೆ ವಿತರಕರ ತಂಡ, ಸಿಟಿಂಗ್ ಸ್ಕ್ವಾಡ್, ಜಿಲ್ಲಾ ಜಾಗೃತ ದಳದವರು ತಮ್ಮ ತಮ್ಮ ಕರ್ತವ್ಯಗಳನ್ನು ಅರಿತು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಬೇಕು. ಪರೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡ ಸಿಬ್ಬಂದಿಗಳು ಇಲಾಖೆಯಿಂದ ನೀಡಿದ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಬಳಸಬೇಕು. ಪರೀಕ್ಷಾ ಕಾರ್ಯಕ್ಕೆ ನಿಯೋಜನೆಗೊಂಡ ಸಿಬ್ಬಂದಿ ಹೊರತುಪಡಿಸಿ ಪರೀಕ್ಷಾ ಕೇಂದ್ರದಲ್ಲಿ ಪ್ರವೇಶವನ್ನು ನಿಷೇಧಿಸಲಾಗಿದೆ ಎಂದರು.

ಸಮಯಕ್ಕೆ ಸರಿಯಾಗಿ ಪ್ರಶ್ನೆ ಪತ್ರಿಕೆ ಆಯಾ ಪರೀಕ್ಷಾ ಕೇಂದ್ರಕ್ಕೆ ತಲುಪಿಸುವ ಕೆಲಸವಾಗಬೇಕು. ಪರೀಕ್ಷಾ ಕಾರ್ಯಕ್ಕೆ ನೀಡಲಾದ ನಿರ್ದೇಶನಗಳನ್ನು ಚಾಚೂ ತಪ್ಪದೇ ಪಾಲಿಸಬೇಕು. ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಉತ್ತಮವಾದ ಡೆಸ್ಕ ವ್ಯವಸ್ಥೆ, ಕುಡಿಯುವ ನೀರು ಹಾಗೂ ಶೌಚಾಲಯ ವ್ಯವಸ್ಥೆ ಮಾಡಬೇಕು. ಪರೀಕ್ಷಾ ಕೇಂದ್ರದಲ್ಲಿ ಮಾಡಲಾದ ಆಸನಗಳ ವ್ಯವಸ್ಥೆ ಬಗ್ಗೆ ಸೂಚನಾ ಫಲಕದಲ್ಲಿ ಅಂಟಿಸಬೇಕು. ಪ್ರಶ್ನೆಪತ್ರಿಕೆ ಬಂಡಲ್ ತೆರೆಯುವಾಗ, ಉತ್ತರ ಪತ್ರಿಕೆ ಸ್ವೀಕರಿಸುವ, ಬಂಡಲ್ ಮಾಡುವುದು ಸೇರಿದಂತೆ ಇತರೆ ಪ್ರಕ್ರಿಯೆಗಳನ್ನು ಸಿಸಿಟಿವಿ ಕಣ್ಗಾವಲು ಮೂಲಕ ನಡೆಸಲು ಅಪರ ಜಿಲ್ಲಾಧಿಕಾರಿ ತಿಳಿಸಿದರು.

ಪರೀಕ್ಷಾ ಕೇಂದ್ರದಲ್ಲಿ ಮುಖ್ಯ ಅಧೀಕ್ಷಕರನ್ನು ಹೊರತುಪಡಿಸಿ ಇತರೆ ಅಧಿಕಾರಿಗಳು, ಸಿಬ್ಬಂದಿಗಳು, ವಿದ್ಯಾರ್ಥಿಗಳಿಗೆ ಮೊಬೈಲ್ ಫೋನ್, ಇ-ಕ್ಯಾಮರಾ, ಲ್ಯಾಪಟಾಪ್ ತರುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ಪರೀಕ್ಷೆಗಳನ್ನು ಸುಸೂತ್ರವಾಗಿ ಮತ್ತು ಲೋಪದೋಷಗಳಿಲ್ಲದೆ ಜರುಗಿಸಲು ಪರೀಕ್ಷಾ ಕೇಂದ್ರಗಳ ಸುತ್ತಲೂ 200 ಮೀಟರ್‌ಗಳವರೆಗೆ ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ. ಈ ಪ್ರದೇಶದಲ್ಲಿ ಪರೀಕ್ಷಾ ಅವಧಿಯಲ್ಲಿ ಝರಾಕ್ಸ ಅಂಗಡಿಗಳು ಇದ್ದಲ್ಲಿ ಮುಚ್ಚತಕ್ಕದ್ದೆಂದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪುಂಡಲೀಕ ಕಾಂಬಳೆ, ತಹಶೀಲ್ದಾರರಾದ ವಾಸುದೇವ ಸ್ವಾಮಿ, ವಿನೋದ ಹತ್ನಟ್ಟಿ, ಗಿರೀಶ ಸ್ವಾದಿ, ಡಾ.ಚಿಕ್ಕಪ್ಪ ಎಂ.ನಾಯಕ, ಅನೀಲ ಮೇತ್ರಿ, ಡಿವಾಯ್‌ಎಸ್‌ಪಿ ಗಜಾನನ ಸುತಾರ ಸೇರಿದಂತೆ ಪರೀಕ್ಷಾ ಕೇಂದ್ರ ಮುಖ್ಯ ಅಧೀಕ್ಷಕರು ಉಪಸ್ಥಿತರಿದ್ದರು.

# ತೆರಿಗೆ ಸಂಗ್ರಹ ಅಭಿಯಾನಕ್ಕೆ ಸಿಇಓ ಚಾಲನೆ



• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಗ್ರಾಮ ಪಂಚಾಯತಿಗಳ ಆರ್ಥಿಕ ಸ್ವಾವಲಂಬನೆ ಹಾಗೂ ಅಭಿವೃದ್ಧಿ ಕಾರ್ಯಗಳಿಗೆ ವೇಗ ನೀಡುವ ಉದ್ದೇಶದಿಂದ ಹಮ್ಮಿಕೊಳ್ಳಲಾದ ಬೃಹತ್ ತೆರಿಗೆ ಸಂಗ್ರಹ ಅಭಿಯಾನಕ್ಕೆ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಶಿಧರ ಕುರೇರ ವಿವಿಧ ಗ್ರಾಮ ಪಂಚಾಯತಿಗಳಿಗೆ ಸೋಮವಾರ ಭೇಟಿ ನೀಡಿ ಚಾಲನೆ ನೀಡಿದರು.

ಬಾಗಲಕೋಟೆ ತಾಲೂಕಿನ ಕಲಾದಗಿ, ಖಜ್ಜಿಡೋಣಿ, ದೇವನಾಳ, ತುಳಸಿಗೇರಿ ಹಾಗೂ ಗದ್ದನಕೇರಿ ಗ್ರಾಮ ಪಂಚಾಯತಿಗಳಿಗೆ ಭೇಟಿ ನೀಡಿದ ಸಿಇಓ, ತೆರಿಗೆ ಸಂಗ್ರಹ ಪ್ರಗತಿ, ಬಾಕಿ ತೆರಿಗೆ ಪಟ್ಟಿ, ದಿನನಿತ್ಯದ ವಸೂಲಾತಿ ದಾಖಲೆಗಳು ಹಾಗೂ ಇ-ಗ್ರಾಮ ಸ್ವರಾಜ್ ಪೋರ್ಟಲ್‌ನಲ್ಲಿ ದಾಖಲಾದ ಮಾಹಿತಿಯನ್ನು ಪರಿಶೀಲಿಸಿದರು. ತೆರಿಗೆ ವಸೂಲಾತಿ ಗುರಿ ನಿಗದಿ ಮಾಡಿ ದಿನವಾರ ಮತ್ತು ವಾರವಾರ ಪ್ರಗತಿ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಗ್ರಾಮಸ್ಥರೊಂದಿಗೆ ಸಂವಾದ ನಡೆಸಿದ ಅವರು, ಗ್ರಾಮದ ರಸ್ತೆ, ಕುಡಿಯುವ ನೀರು, ಸ್ವಚ್ಛತೆ, ಬೀದಿ ದೀಪ, ಒಳಚರಂಡಿ ಹಾಗೂ ಇತರೆ ಮೂಲಭೂತ ಸೌಲಭ್ಯಗಳ ನಿರ್ವಹಣೆಗಾಗಿ ತೆರಿಗೆ ಆದಾಯವೇ ಪ್ರಮುಖ ಆಧಾರವಾಗಿದೆ. ಆದ್ದ-ರಿಂದ ಪ್ರತಿಯೊಬ್ಬ ನಾಗರಿಕರೂ ಸಮಯಕ್ಕೆ ಸರಿಯಾಗಿ ತೆರಿಗೆ ಪಾವತಿಸಬೇಕು ಎಂದು ಕರೆ ನೀಡಿದರು.

ಅಭಿಯಾನದ ಅಂಗವಾಗಿ ಮನೆಮನೆಗೆ ಭೇಟಿ ನೀಡಿ ಬಾಕಿ ಇರುವ ಆಸ್ತಿ ತೆರಿಗೆ, ನೀರಿನ ಶುಲ್ಕ ಹಾಗೂ ಇತರೆ ಕರಗಳನ್ನು ಪಾವತಿಸುವಂತೆ ಮನವಿ ಮಾಡಲಾಯಿತು. ದೀರ್ಘಕಾಲ ಬಾಕಿ ಉಳಿಸಿಕೊಂಡಿರುವವರ ವಿರುದ್ಧ ನಿಯಮಾನುಸಾರ ನೋಟಿಸ್ ಜಾರಿಗೊಳಿಸಿ ಅಗತ್ಯ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

ಗ್ರಾಮ ಪಂಚಾಯತ್ ಸಿಬ್ಬಂದಿಗೆ ದಾಖಲೆ ನಿರ್ವಹಣೆಯಲ್ಲಿ ಪಾರದರ್ಶಕತೆ ಕಾಪಾಡುವುದು, ಆದಾಯ ಖರ್ಚಿನ ಲೆಕ್ಕಪತ್ರಗಳನ್ನು ನವೀಕರಿಸುವುದು ಹಾಗೂ ಆನ್‌ಲೈನ್ ವ್ಯವಸ್ಥೆಯನ್ನು ಸಮರ್ಪಕವಾಗಿ ಬಳಸುವಂತೆ ಮಾರ್ಗದರ್ಶನ ನೀಡಿದರು. ಮುಂದಿನ 15 ದಿನಗಳೊಳಗೆ ತೆರಿಗೆ ವಸೂಲಾತಿಯಲ್ಲಿ ಗಮನಾರ್ಹ ಪ್ರಗತಿ ಸಾಧಿಸಬೇಕು ಎಂದು ಸೂಚಿಸಿದ ಸಿಇಓ ಅವರು, ಅಗತ್ಯವಿದ್ದಲ್ಲಿ ಮರುಪರಿಶೀಲನಾ ಸಭೆ ನಡೆಸಲಾಗುವುದು ಎಂದು ತಿಳಿಸಿದರು.

ಅಭಿಯಾನವನ್ನು ಜನಸಹಭಾಗಿತ್ವದ ಚಳುವಳಿಯಾಗಿ ರೂಪಿಸಿ, ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಸಹಕರಿಸುವಂತೆ ಸಾರ್ವಜನಿಕರಿಗೆ ಸಿಇಓ ಕುರೇರ ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಬಾಗಲಕೋಟೆ ಕಾರ್ಯನಿರ್ವಾಹಕ ಅಧಿಕಾರಿ ಸುಭಾಷ ಸಂಪಗಾವಿ ಸೇರಿದಂತೆ ಆಯಾ ಗ್ರಾಮ ಪಂಚಾಯತಿಗಳ ಕರ ವಸೂಲಾತಿಗಾರರು ಉಪಸ್ಥಿತರಿದ್ದರು.

## ನಿಜಲಿಂಗಪ್ಪ ಮೆಡಿಕಲ್ ಕಾಲೇಜಿನಲ್ಲಿ ಶಿವರಾತ್ರಿ ಸಂಭ್ರಮ

# ಸಾತ್ವಿಕ ಭಾವವಿದಿಂದ ನಾಡು ಸಮೃದ್ಧಿ: ವೀರಣ್ಣ ಚರಂತಿಮಠ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಭಕ್ತಿ ಮತ್ತು ಪೂಜೆ ಮನುಷ್ಯನಲ್ಲಿ ಸಾತ್ವಿಕ ಭಾವವನ್ನು ಹುಟ್ಟಿಸುವ ವಿಶಿಷ್ಠ ಅನುಭೂತಿಗಳು. ಮನುಷ್ಯನಲ್ಲಿರುವ ರಜೋಗುಣಗಳು ಅಳಿದು ಸಾತ್ವಿಕ



ಭಾವ ನೆಲೆಗೊಳ್ಳಬೇಕು. ಎಲ್ಲಿ ಸಾತ್ವಿಕ ಭಾವವಿರುತ್ತದೆ ಅಲ್ಲಿ ನಾಡು ಸಮೃದ್ಧವಾಗಿರುತ್ತದೆ ಎಂದು ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಸಿ.ಚರಂತಿಮಠ ಹೇಳಿದರು. ನಗರದ ಬಿ.ವಿ.ವಿ.ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಹಾನಗಲ್ಲ ಶ್ರೀ ಕುಮಾರೇಶ್ವರ ಆಸ್ಪತ್ರೆಯ ಆವರಣದಲ್ಲಿರುವ ಶಿವಾಲಯದಲ್ಲಿ ಶಿವರಾತ್ರಿ ನಿಮಿತ್ಯ ಭಾನುವಾರ ಬೆಳಗ್ಗೆ ಮಹಾಪೂಜೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಈಶ್ವರ ಎಲ್ಲರಿಗೂ ಸನ್ಮಂಗಳವನ್ನುಂಟು ಮಾಡಲಿ. ನಾಡಿನ ಜನತೆಗೆ ಒಳ್ಳೆಯದಾಗಲಿ ಮತ್ತು ನಾಡು ಸುಭಿಕ್ಷವಾಗಿರಲಿ ಎಂದು ಹೇಳಿದರು.

ಕಳೆದ ಅನೇಕ ವರ್ಷಗಳಿಂದ ನಿಜಲಿಂಗಪ್ಪ ಮೆಡಿಕಲ್ ಕಾಲೇಜಿನ ಶಿವಾಲಯದಲ್ಲಿ ಪ್ರತಿ ಮಹಾಶಿವರಾತ್ರಿಯಂದು ಮಹಾಪೂಜೆ ಮತ್ತು ಸಂಗೀತ ಶಿವರಾತ್ರಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಶಿವನ ದರ್ಶನಕ್ಕೆ ಬರುವ ಭಕ್ತರಿಗೆ ಅನುಕೂಲವಾಗುವಂತೆ ಅಚ್ಚುಕಟ್ಟಾದ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಬಿ.ವಿ.ವಿ.ಸಂಘದ ಬಾಗಲಕೋಟೆ ಅಕ್ಕನ ಬಳಗದ ಮಾತೆಯರಿಂದ ಸಾಮೂಹಿಕ ಶ್ರೀರುದ್ರಪಾರಾಯಣ ನಡೆಯಿತು. ಮಹಾಶಿವರಾತ್ರಿ ನಿಮಿತ್ಯ ಶಿವಾಲಯದಲ್ಲಿ ಶಿವನ ಮೂರ್ತಿಗೆ ಮಾಡಿದ ವಿಶೇಷ ಅಲಂಕಾರ ಕಣ್ಮನಗಳನ್ನು ಸೆಳೆಯುವಂತಿತ್ತು. ನಗರದ ಸಾರ್ವಜನಿಕರು ಸರತಿ ಸಾಲಿನಲ್ಲಿ ಬಂದು ಶಿವನ ದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು.

ಶಿವಾಲಯದಲ್ಲಿ ನಡೆದ ಮಹಾಪೂಜೆಯ ಸಂದರ್ಭ ಬಿ.ವಿ.ವಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಮ್.ಸಜ್ಜನ (ಬೇವೂರ), ಬಿ.ವಿ.ವಿ ಸಂಘದ ಸದಸ್ಯರಾದ ವೀರಣ್ಣ ಹಲಕುರ್ಕಿ, ವಿಜಯ ಅಂಗಡಿ ಮತ್ತು ಕುಮಾರ ಜಿಗಜಿನ್ನಿ, ಮೆಡಿಕಲ್ ಕಾಲೇಜ್ ಪ್ರಾಚಾರ್ಯೆ ಡಾ.ಭುವನೇಶ್ವರಿ ಯಳಮಲಿ, ಸುಪರ್ ಸ್ಪೆಷಾಲಿಟಿ ಆಸ್ಪತ್ರೆಯ ಸಿ.ಇ.ಓ ಡಾ.ನವೀನ ಚರಂತಿಮಠ, ಉಪಪ್ರಾಚಾರ್ಯ ಡಾ.ಸಿ.ಎಸ್.ಹಿರೇಮಠ ಮತ್ತು ಎಲ್ಲ ಆರೋಗ್ಯ ಮಹಾವಿದ್ಯಾಲಯಗಳ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.



ಮಹಾಶಿವರಾತ್ರಿ ಹಬ್ಬದ ನಿಮಿತ್ತ ಮಹಾದೇವನ ವಿಶೇಷ ಪೂಜೆಗೆ ಸಿದ್ಧನಾದ ಪ್ರಭುರೆಡ್ಡಿ ಪುಟ್ಟಾರವರ ಮೊಮ್ಮಗನಾದ ಅಭಿನವರೆಡ್ಡಿ (ಮಲ್ಲಮ್ಮನುಡಿ ಚಿತ್ರ)



ಹುಮನಾಬಾದ ತಾಲ್ಲೂಕಿನ ರಾಂಪೂರ ಗ್ರಾಮದ ಶ್ರೀಕಾಂತರೆಡ್ಡಿರವರ ಮಗಳಾದ ಅನ್ವಿತಾರೆಡ್ಡಿ ಮಹಾಶಿವರಾತ್ರಿ ಹಬ್ಬದ ಅಂಗವಾಗಿ ವಿಶೇಷವಾಗಿ ಮಹಾದೇವ ಲಿಂಗ ಪೂಜೆ ಮಾಡಿ ದರ್ಶನ ಪಡೆದು ಮಹಾದೇವನ ಹಾಡು ಹಾಡಿದನ್ನು ನೋಡುಗರ ಕಣ್ಮನ ಸೆಳೆಯಿತು.

(ಮಲ್ಲಮ್ಮ ನುಡಿ ಚಿತ್ರ)

# ಹೋಳಿ: ಸಮಿತಿ ಸಭೆ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಬರಲಿರುವ ಹೋಳಿ ಹಬ್ಬ ಆಚರಣೆಯ ಹಿನ್ನೆಲೆಯಲ್ಲಿ ಹೋಳಿ ಆಚರಣಾ ಸಮಿತಿ ಸಭೆಯನ್ನು ಫೆ.18 ರಂದು ಬುಧವಾರ ಕರೆಯಲಾಗಿದೆ. ನಗರದ ಸ್ಟೇಶನ್ ರಸ್ತೆಯಲ್ಲಿರುವ ಅಂಬಾಭವಾನಿ ದೇವಸ್ಥಾನದ ಸಮುದಾಯ ಭವದದಲ್ಲಿ ಬುಧವಾರ ಸಾಯಂಕಾಲ 6-30 ಗಂಟೆಗೆ ನಡೆಯಲಿರುವ ಈ ಪೂರ್ವಭಾವಿ ಸಭೆಯಲ್ಲಿ ನಗರದ ಐದೂ ಓಣಿಗಳ ಬಾಬುದಾರರು, ಹೋಳಿ ಆಚರಣಾ ಸಮಿತಿ ಪದಾಧಿಕಾರಿಗಳು, ನವನಗರ, ವಿದ್ಯಾಗಿರಿ ಹಾಗೂ ಹಳೇ ನಗರದ ಹಿರಿಯರು, ಯುವಕರು ಪಾಲ್ಗೊಂಡು ಸಲಹೆ ಸೂಚನೆಗಳನ್ನು ನೀಡುವಂತೆ ಹೋಳಿ ಆಚರಣಾ ಸಮಿತಿ ಅಧ್ಯಕ್ಷ ಕಳಕಪ್ಪ ಬಾದವಾಡಗಿ, ಪ್ರಧಾನ ಕಾರ್ಯದರ್ಶಿ ಮಹಾಬಳೇಶ ಗುಡಗುಂಟಿ ಪ್ರಕಟಣೆಯಲ್ಲಿ ಕೋರಿದ್ದಾರೆ.



ಬಸವಕಲ್ಯಾಣ:- ತಾಲೂಕಿನ ಹಾರಕೂಡ ಶ್ರೀಮಠದಲ್ಲಿ ಮಾತೋಶ್ರೀ ಈರಮ್ಮ ವಡ್ಡನಕೇರಿ ಪ್ರತಿಷ್ಠಾನದಿಂದ ಹಾರಕೂಡದ ಪೂಜ್ಯಶ್ರೀ ಡಾ. ಚನ್ನವೀರ ಶಿವಾಚಾರ್ಯರಿಗೆ ಮತ್ತು ಕಲಬುರ್ಗಿ ಶರಣಬಸವ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ. ದಾಕ್ಷಾಯಿಣಿಎಸ್. ಅಪ್ಪ ಅವರಿಗೆ ಅವ್ವ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಬಬಲಾದಿನ ಗುರುಪಾದಲಿಂಗ ಮಹಾಸ್ವಾಮಿಗಳು, ಮಾತೋಶ್ರೀ ಈರಮ್ಮ ವಡ್ಡನ್ ಕೇರಿ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಶರಣಬಸಪ್ಪ ವಡ್ಡನಕೇರಿ, ಡಾ. ಬಸವರಾಜ ಕೊನೆಣಟಿಜಜಜಿಟಿಜಜಕ, ಮಲ್ಲಿನಾಥ ಹಿರೇಮಠ ಹಾರಕೂಡ, ಶ್ರೀಮತಿ ಗೋರೂರು ಪಂಕಜಾ, ಅಲ್ಲಮಪ್ರಭು ದೇಶಮುಖ ಮುಂತಾದವರು ಉಪಸ್ಥಿತರಿದ್ದರು.

(ಮಲ್ಲಮ್ಮ ನುಡಿ ಚಿತ್ರ)

# ಬಿಜೆಪಿ ಕಚೇರಿಯಲ್ಲಿ ಸೇವಾಲಾಲ ಜಯಂತಿ

• ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ

ಶಿಕ್ಷಣದ ಮಹತ್ವವನ್ನು ಸಾರಿ ಎಲ್ಲರೂ ಸುಶಿಕ್ಷಿತರಾಗಿ ಅಕ್ಷರ ಜ್ಞಾನ ಪಡೆದು ಜಗತ್ತಿಗೆ ದಾರಿ ದೀಪವಾಗಿರಿ ಎಂದು ತಮ್ಮ ತತ್ವ, ಜ್ಞಾನದ ಮೂಲಕ ಸಾರಿ ಸಮುದಾಯದಲ್ಲಿ ಸ್ವಾಭಿಮಾನ ಕಲಿಸಿದ ಸಂತ ಸೇವಾಲಾಲ ಎಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಹೇಳಿದರು.




ನಗರದ ಶಿವಾನಂದ ಜೀನನಲ್ಲಿ ಭಾರತೀಯ ಜನತಾ ಪಾರ್ಟಿ ಬಾಗಲಕೋಟೆ ಮತಕ್ಷೇತ್ರದ ವತಿಯಿಂದ ಹಮ್ಮಿಕೊಂಡ ಸಂತ ಸೇವಾಲಾಲ ಜಯಂತ್ಯೋತ್ಸವ ನಿಮಿತ್ಯ ಅವರ ಭಾವಚಿತ್ರಕ್ಕೆ ಪುಷ್ಪಾಂಜಲಿ ಸಲ್ಲಿಸಿ ಮಾತನಾಡಿದ ಅವರು, ಭರತ ಖಂಡದ ಧಾರ್ಮಿಕ ರಾಯಭಾರಿ ಎಂದೇ ಹೆಸರಾದ ಸಂತ ಸೇವಾಲಾಲ್ ಮಹಾರಾಜರು ಹಲವು ಪವಾಡಗಳ ಮೂಲಕ ಜನರ ಮನ ಗೆದ್ದವರು ಎಂದರು.

ಜಗದಂಬೆಯ ಆರಾಧಕರಾಗಿ ಇಡೀ ಜೀವಮಾನದುದ್ದಕ್ಕೂ ಬ್ರಹ್ಮಚರ್ಯವನ್ನೇ ಪಾಲನೆ ಮಾಡಿದ ಸಂತ ಸೇವಾಲಾಲರು ಇಂದಿಗೂ ಜನ ಮಾನಸದಲ್ಲಿ ಗುರುವಿನ ಸ್ಥಾನವನ್ನು ಪಡೆದಿದ್ದಾರೆ. ಜನತೆಗೆ ವ್ಯಸನ ಮುಕ್ತರಾಗಿ ಎಂದು ಬೋಧಿಸಿದ ಸೇವಾಲಾಲರು ಸತ್ಯ, ಅಹಿಂಸೆ, ತ್ಯಾಗ ಮನೋಭಾವದ ನೀತಿಮಾತು ಹೇಳಿದ್ದರು. ಸರ್ವರನ್ನು ಒಳಗೊಂಡ ಸಮಸಮಾಜದ ನಿರ್ಮಾಣ ಹಾಗೂ ಸರ್ವರಲ್ಲೂ ಸೋದರತೆಯ ಭಾವನೆಯನ್ನು ಮೂಡಿಸಲು ಸೇವಾಲಾಲರು ಪ್ರೇರೇಪಿಸಿದರು ಎಂದರು.

ಡಾ. ಎಂ.ಎಸ್.ದಡ್ಡೆನ್ನವರ, ನಗರಮಂಡಲ ಅಧ್ಯಕ್ಷ ಬಸವರಾಜ ಹುನಗುಂದ, ಬಸವರಾಜ ಯಂಕಂಚಿ, ಶಿವಾನಂದ ಟವಳಿ, ಸತ್ಯನಾರಾಯಣ ಹೆಮಾದ್ರಿ, ಗುಂಡುರಾವ ಶಿಂದೆ, ಅಂಭಾಜಿ ಜೋಷಿ, ಶಿವಾನಂದ ರಾಠೋಡ, ದೀಲಿಪ್ ರಾಠೋಡ, ಗಂಗಾರಾಮ ಚವ್ಹಾಣ, ಗಣೇಶ ರಾಥೋಡ, ಹನಮಂತ ಚವ್ಹಾಣ, ರಣಧೀರ ರಾಠೋಡ, ಸುರೇಶ ಲಮಾಣಿ, ಸುನೀಲ ಚವ್ಹಾಣ, ಆನಂದ ಕೊಟಗಿ, ಗೀರಿಶ ಭಾಂಡಗೆ, ವೀರಣ್ಣ ಹಳೆಗೌಡರ, ಉಮೇಶ ಹಂಚಿನಾಳ ಸೇರಿದಂತೆ ಅನೇಕರು ಇದ್ದರು.

# ಭಕ್ತಿ-ಆತ್ಮ ಶುದ್ಧಿಗಾಗಿ ಇರುವುದೇ ಮಹಾಶಿವರಾತ್ರಿ: ಯೋಗಿನಿ ಅಕ್ಕ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಶಿವನ ನೆನಪಿನಿಂದಲೇ ಸತ್ಯವಾದ ನೆಮ್ಮದಿ ಶಾಂತಿಯನ್ನು ಪಡೆಯಲು ಸಾಧ್ಯ ಎಂದು ಮಾನ್ಯ ಶಾಸಕರಾದ ರಾಘವೇಂದ್ರ ಹಿಟ್ನಾಳ್ ತಿಳಿಸಿದರು. ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯ ಮಹಾಶಿವರಾತ್ರಿ ಪ್ರಯುಕ್ತ ಏರ್ಪಡಿಸಿದ ಶ್ರೀರಾಮೇಶ್ವರ ಜ್ಯೋತಿರ್ಲಿಂಗ ದರ್ಶನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.



ಇವತ್ತಿನ ಒತ್ತಡದ ಬದುಕಿನಲ್ಲಿ ಮನುಷ್ಯ ಶಾಂತಿ ನೆಮ್ಮದಿಯನ್ನು ಪಡೆಯಲು ಆಧ್ಯಾತ್ಮ ಮಾರ್ಗದ ಕಡೆಗೆ ಹೋಗಬೇಕಾಗುತ್ತದೆ ಎಂದು ಹೇಳಿದರು .

ಶಿವಾನುಭೂತಿ ಮಂಟಪವನ್ನು ಉದ್ಘಾಟಿಸಿದ ಹೇಮಲತಾ ನಾಯಕ್ ಮಾತನಾಡುತ್ತಾ ಮನುಷ್ಯನ ಜೀವನದಲ್ಲಿ ಹಣ ಆಸ್ತಿ ಅಂತಸ್ತು ಅಧಿಕಾರ ಏನೇ ಇದ್ದರೂ ಮಾನಸಿಕ ನೆಮ್ಮದಿಗಾಗಿ ಪರಮಾತ್ಮನ ಕಡೆಗೆ ಹೋಗಲೇಬೇಕು ಪರಮಾತ್ಮನೇ ಜಗತ್ತಿಗೆ ಸುಖ ಶಾಂತಿಯನ್ನು ನೀಡುವವನಾಗಿದ್ದಾನೆ ಎಂದರು.

ಬ್ರಹ್ಮಕುಮಾರಿಯೋಗಿನಿಅಕ್ಕಶಿವರಾತ್ರಿಸಂದೇಶವನ್ನು ನೀಡುತ್ತಾ, ವಿಶ್ವಕ್ಕೆ ವಿಶ್ವೇಶ್ವರನೊಬ್ಬನೇ ಜಗತ್ತಿಗೆ ಜಗದೀಶ್ವರನೊಬ್ಬನೇ ಲೋಕಕ್ಕೆ ಲೋಕೇಶ್ವರನೊಬ್ಬನೆ ಭಕ್ತರಿಗೆ ಭಗವಂತನೊಬ್ಬನೇ ಸರ್ವಧರ್ಮದ ಮನುಷ್ಯ ಆತ್ಮರಿಗೆ ಏಕೈಕನಾಗಿರುವ ಪರಮಾತ್ಮ ಶಿವನು ಬಂದು ಸತ್ಯ ಜ್ಞಾನಪ್ರಕಾಶದಿಂದ ವಿಶ್ವದ ಅಜ್ಞಾನ ಅಂಧಕಾರವನ್ನು ತೊಲಗಿಸುವುದೇ ಸತ್ಯ ಶಿವರಾತ್ರಿ

ಭಾರತ ದೇಶ ಹಬ್ಬಗಳ ತವರೂರು, ದೇಶಾದ್ಯಂತ ಶಿವರಾತ್ರಿ ಹಬ್ಬವನ್ನು ಬಹಳಷ್ಟು ವಿಜೃಂಭಣೆಯಿಂದ ಆಚರಿಸಲಾಗುತ್ತದೆ ಆದರೆ ನಾವು ಮುಖ್ಯವಾಗಿ ಹಬ್ಬದ ಹಿನ್ನೆಲೆಯಲ್ಲಿರುವ ಸತ್ಯತೆಯನ್ನು ತಿಳಿದುಕೊಳ್ಳುವುದು ಅತ್ಯವಶ್ಯಕ ಶಿವರಾತ್ರಿ ಹಬ್ಬದ ಹಿನ್ನೆಲೆಯಲ್ಲಿರುವ ಸತ್ಯ ಆಧ್ಯಾತ್ಮಿಕ ರಹಸ್ಯವನ್ನು ತಿಳಿಸುವ ಉದ್ದೇಶದಿಂದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿಶ್ವ ವಿದ್ಯಾಲಯ ಈ ವರ್ಷ 6 ದಿನಗಳ ವೈವಿಧ್ಯಮಯ ಕಾರ್ಯಕ್ರಮಗಳನ್ನು ಏರ್ಪಡಿಸಿದೆ.

ಶಿವರಾತ್ರಿ ಎಂದು ಏಕೆ ಕರೆಯುತ್ತಾರೆ ಶಿವನಿಗೂ ರಾತ್ರಿಗೂ ಇರುವ ಸಂಬಂಧವೇನು ಶಿವನು ರಾತ್ರಿಯಲ್ಲಿ ಬರುತ್ತಾನೆ ಅಜ್ಞಾನ ಎಂಬ ಕತ್ತಲೆ ಜಗತ್ತನ್ನ ವ್ಯಾಪಿಸಿದೆ ನಾನು ಯಾರು ಎಂಬ ಸತ್ಯತೆ ಗೊತ್ತಿಲ್ಲ ನಾಶವಾಗುವ ಶರೀರವೇ ತಾನೆಂದು ತಿಳಿದಿದ್ದೇವೆ ಆದರೆ ಈ ಶರೀರದೊಳಗಡೆ ಇರುವ ಅವಿನಾಶಿಯಾದ ಆತ್ಮ ನಾನು ಎಂಬ ಅರಿವು ಇಲ್ಲ ಅದಕ್ಕೆ ಹೇಳುತ್ತಾರೆ "ಏನನರಿತು ಏನು ಫಲವಯ್ಯ ತನ್ನ ತಾ ಅರಿಯದಿದ್ದೊಡೆ " ಅಷ್ಟೇ ಅಲ್ಲ ಪರಮಾತ್ಮ ಯಾರು ಅವನ ರೂಪವೇನು ಅವನ ಕರ್ತವ್ಯವೇನ ಎಂಬ ಸತ್ಯತೆಯ ಅರಿವಿಲ್ಲದ ಅಜ್ಞಾನದ ರಾತ್ರಿಯಲಿ ಜ್ಞಾನ ಸೂರ್ಯ ಜ್ಞಾನಸಾಗರ ಜ್ಞಾನೇಶ್ವರ ಶಿವನು ಬಂದು ಸತ್ಯ ಜ್ಞಾನದ ಬೆಳಕನ್ನು ನೀಡುವುದೇ ಸತ್ಯ ಶಿವರಾತ್ರಿ ಪರಂಜ್ಯೋತಿ ಸ್ವರೂಪನಾದ ಪರಮಾತ್ಮ ಜಗತ್ತಿಗೆ ಒಬ್ಬನೇ ಅವನೇ ಈಶ್ವರ, ಅಲ್ಲಾ, ಗಾಡ್, ಪರಬ್ರಹ್ಮ, ಏಕ್ ಓಂಕಾರ ನಿರಾಕಾರ ಸರ್ವ ಧರ್ಮದ ಮನುಷ್ಯಾತ್ಮರು ಈ ಸತ್ಯತೆಯನ್ನು ಅರಿತುಕೊಂಡು ನಾವೆಲ್ಲ ಒಬ್ಬ ತಂದೆ ಮಕ್ಕಳು ಎಂಬ ಭಾವನೆ ಮೂಡಿದಾಗ ಮಾತ್ರ ಸಮಾಜದಲ್ಲಿ ಸೋದರತೆ, ವಿಶ್ವಭ್ರಾತೃತ್ವ ,ಕೋಮು ಸೌಹಾರ್ದತೆ ನೆಲೆಗೊಳ್ಳಲು ಸಾಧ್ಯ ಎಂದರು.

## ಉಪ ಎಂದರೆ ಹತ್ತಿರ ವಾಸ ಎಂದರೆ ಇರುವುದು ಪರಮಾತ್ಮ

## ಶಿವನ ಹತ್ತಿರ ವಾಸಿಸುವುದೇ ಉಪವಾಸ.

ಜಾಗರಣೆ ಅಂದರೆ ಕೆಟ್ಟ ಆಲೋಚನೆಗಳಿಂದ ಕೆಟ್ಟ ಸಂಗದಿಂದ ಕೆಟ್ಟ ಹವ್ಯಾಸಗಳಿಂದ ಜಾಗೃತರಾಗಿರುವುದೇ ಜಾಗರಣೆ ಎಂದು ಸಭೆಗೆ ಕರೆ ನೀಡಿದರು.

ಪ್ರಾಯೋಗಿಕವಾಗಿ ಶಿವಧ್ಯಾನ ಮಾಡಿಸುವುದರ ಮೂಲಕ ಶಾಂತಿಯ ಅನುಭೂತಿ ಮಾಡಿಸಿದರು.

ಅಧ್ಯಕ್ಷತೆ ವಹಿಸಿದ ಡಾ. ಬಸವರಾಜ್ ಕ್ಯಾವಟರ್ ಮಾತನಾಡುತ್ತಾ ಇವತ್ತು ಮನುಷ್ಯ ವಿವಿಧ ಪ್ರಕಾರದ ಚಿಂತೆಗಳಲ್ಲಿ ಶಾರೀರಿಕ ಮಾನಸಿಕ ಆರೋಗ್ಯವನ್ನು ಕಳೆದುಕೊಳ್ಳುತ್ತಿದ್ದಾನೆ ಇದರಿಂದ ಮುಕ್ತರಾಗಲು ಯೋಗ, ಆಧ್ಯಾತ್ಮ ಧ್ಯಾನ ಅತ್ಯವಶ್ಯಕ ಎಂದು ಹೇಳಿದರು.

ಜಿಲ್ಲಾ ಕಾರಾಗೃಹ ಅಧೀಕ್ಷಕರಾದ ಅಮರೇಶ್ ಪೂಜಾರ್ ಮಾತನಾಡುತ್ತಾ ಆಧ್ಯಾತ್ಮ ಮತ್ತು ಧ್ಯಾನ ಎನ್ನುವುದು ವಯಸ್ಸಾದ ಮೇಲೆ ಅಲ್ಲ ಶರೀರದಲ್ಲಿ ಶಕ್ತಿ ಇರುವಾಗಲೇ ಇದಕ್ಕೆ ನಾವು ಸಮಯವನ್ನು ಕೊಡಬೇಕು ಎಂದರು.

ಓಂ ನಮಃ ಶಿವಾಯ ನೃತ್ಯ ಎಲ್ಲರ ಮನವನ್ನು ಹರ್ಷಗೊಳಿಸಿತು.

ವೇದಿಕೆಯ ಮೇಲೆ ಪ್ರಸನ್ನ ಗಡದ್, ರಾಘವೇಂದ್ರ ಪಾನಗಂಟಿ , ಗೂಳಪ್ಪ ಹಲಗೇರಿ , ಡಾ.ಮಲ್ಲಿಕಾರ್ಜುನ್ , ಜಿತೇಂದ್ರ ತಾಲೇಡ, ಪ್ರವೀಣ್ ಮೆಹೆತ, ಸತೀಶ ಅಗಡಿ ಉಪಸ್ಥಿತರಿದ್ದರು. ಬಿ.ಕೆ ಸ್ನೇಹಕ್ಕ ಕಾರ್ಯಕ್ರಮ ನಿರೂಪಿಸಿದರು.

# ಬಿಜೆಪಿ ಮಂಡಲ ಕೊಪ್ಪಳ ನಗರ ಅಧ್ಯಕ್ಷರ ಆಯ್ಕೆ





**ಕೊಪ್ಪಳ:** ಭಾರತೀಯ ಜನತಾ ಪಕ್ಷದ ಕೊಪ್ಪಳ ಗ್ರಾಮೀಣ ಮಂಡಲದ ಅಧ್ಯಕ್ಷರಾಗಿ ವೀರೇಶ ಸಜ್ಜನ ಹಾಗೂ ನಗರ ಮಂಡಲ ಅಧ್ಯಕ್ಷರಾಗಿ ಅಮರೇಶ ಮುರಲಿ ನೇಮಕವಾಗಿದ್ದಾರೆ.

ಇವರಿಬ್ಬರ ನೇಮಕದ ಪ್ರಕಟಣೆಯನ್ನು ಬಿಜೆಪಿ ಜಿಲ್ಲಾಧ್ಯಕ್ಷರಾದ ಬಸವರಾಜ ದಡೇಸೂಗುರು ಹೊರಡಿಸಿದ್ದಾರೆ.

ಈ ನೇಮಕ ಫೆಬ್ರವರಿ 14 ರಿಂದ ಜಾರಿಗೆ ಬಂದಿದ್ದು, ಕೊಪ್ಪಳ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಪಕ್ಷ ಸಂಘಟನೆ ನಡೆಸುವಂತೆ ಜಿಲ್ಲಾಧ್ಯಕ್ಷರು ತಿಳಿಸಿದ್ದಾರೆ. ಬಿಜೆಪಿಯ ನಗರ ಹಾಗೂ ಗ್ರಾಮೀಣ ಮಂಡಲ ಅಧ್ಯಕ್ಷ ಸ್ಥಾನಕ್ಕೆ ತಲಾ ಮೂವರ ನಡುವೆ ತೀವ್ರ ಪೈಪೋಟಿ ಇತ್ತು ಎಂದು ತಿಳಿದು ಬಂದಿದೆ. ಗ್ರಾಮೀಣ ಮಂಡಲ ಅಧ್ಯಕ್ಷ ಸ್ಥಾನಕ್ಕೆ ಪಕೀರಪ್ಪ ಆರೇರ, ಡಿ. ಮಲ್ಲಣ್ಣ ಹಾಗೂ ವೀರೇಶ ಸಜ್ಜನ ನಡುವೆ ಪೈಪೋಟಿ ಇತ್ತು. ಅಂತಿಮವಾಗಿ ವೀರೇಶ ಸಜ್ಜನ ನೇಮಕವಾಗಿದ್ದಾರೆ.

ನಗರ ಮಂಡಲ ಅಧ್ಯಕ್ಷ ಸ್ಥಾನಕ್ಕೆ ದೇವರಾಜ ಹಾಲಸಮುದ್ರ, ಚನ್ನಬಸವ ಗಾಳಿ, ಅಮರೇಶ ಮುರಳಿ ನಡುವೆ ಪೈಪೋಟಿ ಇತ್ತು ಅಂತಿಮವಾಗಿ ಅಮರೇಶ ಮುರಲಿ ನೇಮಕವಾಗಿದ್ದಾರೆ.



ಬೆಂಗಳೂರು ರಾಜಾಜಿನಗರದ ಶ್ರೀ ಮಲೆಮಹದೇಶ್ವರ ದೇವಸ್ಥಾನದಲ್ಲಿ ಶಿವರಾತ್ರಿ ಅಂಗವಾಗಿ ವಿಶೇಷ ಪೂಜೆ ಮತ್ತು ಸಿದ್ಧಗಂಗಾ ಮಠದ ಪರಂಪರೆಯಂತೆ ಶ್ರೀ ಮಲೆಮಹದೇಶ್ವರಸ್ವಾಮಿಯ ರಥೋತ್ಸವ ಸಂಭ್ರಮ ಸಡಗರದಿಂದ ನಡೆಯಿತು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಕುಟುಂಬವು ರಥೋತ್ಸವದಲ್ಲಿ ಭಾಗವಹಿಸಿತ್ತು.

# ರಾಜಕಾರಣಿಗಳಲ್ಲಿ ಸಾಮೂಹಿಕ ನಾಯಕತ್ವ ಅವಶ್ಯಕ



**ಸಿಂಧನೂರು:** ಸಿಂಧನೂರು ತಾಲ್ಲೂಕನ್ನು ನೂತನ ಜಿಲ್ಲೆಯನ್ನಾಗಿ ಮಾಡುವುದಕ್ಕೆ ಈಗಾಗಲೇ ಕಲಬುರ್ಗಿ ಆಯುಕ್ತರು ಮತ್ತು ಜಿಲ್ಲಾಧಿಕಾರಿಗಳಿಂದ ತಾಲೂಕು ತಹಶೀಲ್ದಾರರಿಗೆ ವರದಿ ನೀಡಬೇಕು ಈಗಾಗಲೇ ಆದೇಶ ಹೊರಡಿಸಿದ್ದಾರೆ ಹಾಗಾಗಿ ತಹಸೀಲ್ದಾರ್ ಅವರಿಗೆ ನಮ್ಮೆಲ್ಲರ ಅಭಿಪ್ರಾಯಗಳು ಬಹಳ ಮುಖ್ಯವಾಗಿದ್ದು.ಮತ್ತು ಸರ್ಕಾರದಿಂದ ಸಕಾರಾತ್ಮಕ ಪ್ರತಿಕ್ರಿಯೆ ದೊರಕಿದ್ದು. ಇಲ್ಲಿ ಒಬ್ಬರೆ ಹೋರಾಟ ಮಾಡಿದರೆ ಸಾಲದು ಹಾಗಾಗಿ ಎಲ್ಲರೂ ತಮ್ಮ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ. ನಿಮ್ಮ ಒಗ್ಗಟ್ಟು.ಅಭಿಪ್ರಾಯ ಸಲಹೆಗಳಿಗೆ ಮುಂದಿನ ದಿನಗಳಲ್ಲಿ ನಮಗೆ ವರದಾನ ಆಗುವ ಸಾಧ್ಯತೆಗಳು ಇವೆ ಎಂದು ಶಾಸಕರು ವಿಧಾನ ಪರಿಷತ್ ಸದಸ್ಯರಾದ ಬಸನಗೌಡ ಬಾದರ್ಲಿ ಹೇಳಿದರು.

ನಗರದ ಖಾಸಗಿ ರಾಜ ಮಹಲ್ ನಲ್ಲಿ ಸಿಂಧನೂರು ಜಿಲ್ಲೆಯನ್ನಾಗಿ ಮಾಡುವ ಕುರಿತು ಇಂದು ಸೋಮವಾರ ವಿವಿಧ ಮಠಾಧೀಶರ ಸಮ್ಮುಖದಲ್ಲಿ ನಡೆದ ವಿವಿಧ ಸಂಘ –ಸಂಸ್ಥೆಗಳ ಹಾಗೂ ರಾಜಕೀಯ ಮುಖಂಡರುಗಳು ಸಭೆಯಲ್ಲಿ ಅವರು ಮಾತನಾಡಿದರು.

ಈಗಾಗಲೇ ಸಿಂಧನೂರು ತಾಲ್ಲೂಕು ಜಿಲ್ಲೆಯನ್ನಾಗಿ ಮಾಡುವುದಕ್ಕೆ ನಾಲ್ಕು ಸಭೆಗಳನ್ನು ಮಾಡಿದ್ದು. ಎಲ್ಲರೂ ಸಕ್ರೀಯವಾಗಿ ಭಾಗವಹಿಸಿ ತಮ್ಮ ತಮ್ಮ ಅಭಿಪ್ರಾಯ ಸಲಹೆಗಳನ್ನು ನೀಡಿದ್ದೀರಿ. ಆದರೆ ಮಾನ್ನೆ ತಾನೆ ಟೌನ್ ಹಾಲ್ ನಲ್ಲಿ ನಡೆದ ಸಭೆಯಲ್ಲಿ ರಾಜಕೀಯ ಮುಖಂಡರುಗಳಲ್ಲಿ ಸಲ್ಪ ಇರಿಸು ಮುರಿಸು ಉಂಟಾಗಿದ್ದು ನಾವು ಕಂಡಿದ್ದೇವೆ.ಹಾಗಾಗಿ ಒಕ್ಕೂಟದಿಂದ ಎಲ್ಲರೂ ತಾವು ಮುಂದುವರಿದು ನಮಗೆ ಯಾವ ಯಾವ ತಾಲೂಕುಗಳು ಅವಶ್ಯಕ ಇದೆ ಆ ತಾಲೂಕು ಸಂಘ ಸಂಸ್ಥೆಗಳು. ರಾಜಕೀಯ ಮುಖಂಡರು ಮತ್ತು ಚಿಂತಕರು ಜೊತೆಗೆ ಸಭೆ ನಡೆಸಿ ನಮ್ಮ ವಿಶ್ವಾಸಕ್ಕೆ ತೆಗೆದುಕೊಂಡು ಮುಂದೆ ಸಮಿತಿ ಮಾಡಿಕೊಂಡು ನೀವು ಸದನದಲ್ಲಿ ಹೋರಾಟ ಮಾಡಿ ಇಲ್ಲಿ ನಾವು ಹೋರಾಟ ಮಾಡುತ್ತೇವೆ ಎಂದು ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಡಿ ಎಚ. ಕಂಬಳಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.

ನಂತರ ವಿವಿಧ ಸಂಘ ಸಂಸ್ಥೆಗಳು ಪ್ರಗತಿಪರ ಸಂಘಟನೆಗಳು ಒಕ್ಕೂಟ ವಿವಿಧ ರಾಜಕೀಯ ಮುಖಂಡರುಗಳು ಚಿಂತಕರು ಸಾಹಿತಿಗಳು ಸಿಂಧನೂರು ಜಿಲ್ಲೆಯನ್ನಾಗಿ ಮಾಡುವ ಕುರಿತು ಮಹತ್ವದ ಸಭೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಮಾತನಾಡಿದರು.

# ಅಕ್ಕಮಹಾದೇವಿ ಕದಳಿ ವನ ವೇದಿಕೆಗೆ ಉದ್ಘಾಟನೆ

• ಮಲ್ಲಮ್ಮ ನುಡಿ ವಾರ್ತೆ ಜೇವರ್ಗಿ

ಮಹಾಶಿವರಾತ್ರಿ ಅಂಗವಾಗಿ ಜೇವರ್ಗಿ ಪಟ್ಟಣದ ಶ್ರೀ ಬಸವೇಶ್ವರ ನಗರದಲ್ಲಿರುವ ಅಗ್ನಿಶಾಮಕ ದಳದ ಎದುರುಗಡೆಯ ಉದ್ಯಾನವನದಲ್ಲಿ ಶ್ರೀ ಅಕ್ಕಮಹಾದೇವಿ ಕದಳಿ ಮಹಿಳಾ ಮಹಾವೇದಿಕೆ ವತಿಯಿಂದ ಇಷ್ಟಲಿಂಗ ಮಹಾಪೂಜೆ, ಲಿಂಗಧಾರಣೆ ಪೂಜೆ ಹಾಗೂ ವೇದಿಕೆ ಉದ್ಘಾಟನಾ ಸಮಾರಂಭವು ಭಕ್ತಿಭಾವಪೂರ್ಣವಾಗಿ ನೆರವೇರಿತು.

ಶಕಾಪುರದ ಶ್ರೀ ವಿಶ್ವಾರಾಧ್ಯ ತಪೋವನ ಮಠದ ಕೃಷಿ ಋಷಿ, ಶಿವಾಚಾರ್ಯ ರತ್ನ ಡಾ. ಶ್ರೀ ಸಿದ್ಧರಾಮ ಶಿವಾಚಾರ್ಯರ ದಿವ್ಯ ಸಾನ್ನಿಧ್ಯದಲ್ಲಿ ಸಾಮೂಹಿಕ ಇಷ್ಟಲಿಂಗ ಮಹಾಪೂಜೆ ಹಾಗೂ ಲಿಂಗಧಾರಣೆ ಪೂಜೆ ಭವ್ಯವಾಗಿ ಜರುಗಿತು. ಜೇವರ್ಗಿಯ ಇತಿಹಾಸದಲ್ಲಿ ಇದೆ ಮೊಟ್ಟ ಮೊದಲ ಬಾರಿಗೆ ಶಿವರಾತ್ರಿಯ ಅಂಗವಾಗಿ ಸಾಮೂಹಿಕ ಇಷ್ಟಲಿಂಗ ಮಹಾಪೂಜೆ ಹಮ್ಮಿಕೊಳ್ಳಲಾಗಿದ್ದು ವಿಶೇಷತೆ ಪಡೆದಿತು.

ಕಾರ್ಯಕ್ರಮದ ಅಂಗವಾಗಿ ಮಹಿಳಾ ಸದಸ್ಯರು ರಂಗೋಲಿ ಬಿಡಿಸಿ ರಸ್ತೆ ಸ್ವಚ್ಛಗೊಳಿಸಿ ಭಕ್ತಿಪೂರ್ವಕವಾಗಿ ಪೂಜೆಯಲ್ಲಿ ಪಾಲ್ಗೊಂಡು ಭಕ್ತಿಯ ಪರಾಕಾಷ್ಠೆಯನ್ನು ಮೆರೆದರು. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ ಭಕ್ತರು ಆಧ್ಯಾತ್ಮಿಕ




ಉತ್ಸಾಹವನ್ನು ವ್ಯಕ್ತಪಡಿಸಿದರು. ಮಂತ್ರಪಠಣ, ಫಲ–ಪುಷ್ಪ–ಬಿಲ್ವಾರ್ಚನೆ ಹಾಗೂ ಆರತಿಯೊಂದಿಗೆ ಶಿವರಾತ್ರಿಯ ಜಾಗರಣೆ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಭಕ್ತರು ವಿಭೂತಿ ಧರಿಸಿ ಶ್ರೀಗಳ ಆಶೀರ್ವಾದ ಪಡೆದು ಕೊರಳಲ್ಲಿ ಇಷ್ಟಲಿಂಗ ಧಾರಣೆ ಮಾಡಿಕೊಂಡರು.

ಮಹಾಪೂಜೆಯ ನಂತರ ಅಕ್ಕಮಹಾದೇವಿ ಕದಳಿವನ ಮಹಿಳಾ ವೇದಿಕೆಯ ಉದ್ಘಾಟನೆ ನೆರವೇರಿತು. ಆಶೀರ್ವಚನ ನೀಡಿದ ಪೂಜ್ಯ ಶ್ರೀ ಸಿದ್ದರಾಮ ಶಿವಾಚಾರ್ಯರು, ಶ್ರೀ ಅಕ್ಕಮಹಾದೇವಿಯ ಆದರ್ಶಗಳಿಂದ ಪ್ರೇರಿತವಾದ ಈ ವೇದಿಕೆ ಮಹಿಳಾ ಸಂಘಟನೆ ಬಲಪಡಿಸುವುದು, ಮಹಿಳಾ ಸಬಲೀಕರಣ, ನಾಯಕತ್ವ ಅಭಿವೃದ್ಧಿ, ಸಂಸ್ಕೃತಿ–ಸಾಹಿತ್ಯ–ವಚನ ಪರಂಪರೆಯ ಪ್ರಸಾರ ಹಾಗೂ ಶಿಕ್ಷಣ–ಆರೋಗ್ಯ–ಕಾನೂನು ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಿದೆ ಎಂದು ತಿಳಿಸಿದರು. ಇಷ್ಟಲಿಂಗ ಧಾರಣೆ ಮತ್ತು ಪೂಜೆ ವಿಧಾನಗಳನ್ನು ಮನೆಮನೆಗಳಲ್ಲಿ ರೂಢಿಸಿಕೊಳ್ಳುವ ಮೂಲಕ ಮಕ್ಕಳಲ್ಲಿ ಉತ್ತಮ ಸಂಸ್ಕಾರ ಬೆಳೆಯಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಹಿರಿಯರಾದ ಚನ್ನಮಲ್ಲಯ್ಯ ಸ್ವಾಮಿ ಹಿರೇಮಠ್, ಕಲ್ಯಾಣಕುಮಾರ ಸಂಗಾವಿ ಗಂವಾರ, ಡಾ. ಪಿ.ಎಂ. ಹಿರೇಮಠ, ಸಿದ್ದಯ್ಯ ಸ್ವಾಮಿ ಮಠಪತಿ, ಎಸ್.ಕೆ. ಬಿರಾದರ್, ಕೇಶವರಾವ ಕುಕುನೂರ್, ಶರಣಪ್ಪ, ಚಂದ್ರಶೇಖರ ದೇವತ್ಕಲ್, ಗುರು ಜೈನಾಪುರ, ಹನುಮಂತರಾಯ ಅಣಜಿಗಿ, ವಿಶ್ವನಾಥ ನೆಲೋಗಿ, ಸಂಗಯ್ಯ ಸ್ವಾಮಿ ಹಿರೇಮಠ್ ನಾಗವರ್, ಬಸವರಾಜ್ ಹದನೂರ್, ಡಾ. ಪ್ರಶಾಂತ್ ಪಾಟೀಲ್, ವಿಜಯ್ ಕುಮಾರ್ ಸ್ಥಾವರಮಠ, ವೀರೇಶ್ ಬಿರಾಳ, ವೀರೇಶ್ ಸಜ್ಜನ್, ಪ್ರಕಾಶ್ ಜೀವನಗಿ, ಭಾಗಣ್ಣ ಮಡಿವಾಳಕರ್, ಬಸವರಾಜ ಕೊಳಕೂರ್, ರಾಹುಲ್ ಗುಜ್ಗೊಂಡ, ಅನೀತ್ ಎಂ. ಬಿರಾದರ್, ಸುರೇಶ ಹಿರೇಮಠ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

# ಮಾಜಿ ಶಾಸಕ ಕುಟುಂಬದಿಂದ ಕನಕಾಭಿಷೇಕ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ನಗರದಲ್ಲಿ ಮಾಜಿ ಶಾಸಕ ಎಚ್.ಪಿ.ಮಂಜುನಾಥ ಅವರ ಕುಟುಂಬದಿಂದ ಎರಡು ದಿನಗಳ ಕಾಲ ಕನಕಾಭಿಷೇಕ ಸಮಾರಂಭ ವಿಜೃಂಭಣೆಯಿಂದ ನಡೆಯಿತು.

ಕುಟುಂಬದ ಹಿರಿಯರಾದ 95 ವರ್ಷದ ಚಂದ್ರಕಾಂತಮ್ಮ, ಇವರ ಪುತ್ರ 85 ವರ್ಷದ ಎಚ್.ಎನ್.ಪ್ರೇಮಕುಮಾರ್–ರತ್ನಪ್ರೇಮಕುಮಾರ್, ಇವರ ಪುತ್ರ ಮಾಜಿ ಶಾಸಕ ಎಚ್.ಪಿ.ಮಂಜುನಾಥ್–ಸುಪ್ರಿಯಾ ಮಂಜುನಾಥ್ ಹಾಗೂ ಇವರ ಪುತ್ರ ಪವನ್ ತಪಸ್ವಿ–ಅಮೂಲ್ಯರ ಪುತ್ರಿ ವಿಯಾನ ಕೃಷ್ಣವರೆಗೆ ಐದು ತಲೆಮಾರುಗಳನ್ನು ಹೊಂದಿದ ಹಿನ್ನೆಲೆಯಲ್ಲಿ ನಗರದ ಅಮ್ಮ ನಿಲಯದಲ್ಲಿ ಕನಕಾಭಿಷೇಕ ಹಮ್ಮಿಕೊಳ್ಳಲಾಗಿತ್ತು. ಶನಿವಾರ ಸಂಜೆಯಿಂದಲೇ ಬೆಂಗಳೂರಿನ ಆಚಾರ್ಯ ಸೌಮಿತ್ರಿ ಅವರ ಮಾರ್ಗದರ್ಶನದಲ್ಲಿ ವಿದ್ವಾನ್ ವರದರಾಜ ತಂತ್ರಿಗಳ ನೇತೃತ್ವದಲ್ಲಿ ಕನಕಾಭಿಷೇಕದ ಪೂಜಾ ವಿಧಿ ವಿಧಾನಗಳನ್ನು ಕುಟುಂಬದ ಮಂದಿ, ನೆಂಟರಿಷ್ಟರ ಹಾಗೂ ಅಭಿಮಾನಿಗಳ ಸಮ್ಮುಖದಲ್ಲಿ ಸಂಭ್ರಮದಿಂದ ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಕನಕಗುರುಪೀಠದ ಶಿವಾನಂದಪುರಿ ಸ್ವಾಮೀಜಿ, ಸಾಂಬಸದಾ ಶಿವಸ್ವಾಮೀಜಿ, ನಟರಾಜ ಸ್ವಾಮೀಜಿ, ನಿಜಗುಣನಂದ ಸ್ವಾಮೀಜಿ, ಫಾದರ್



ಮಾರ್ಟಿಸ್, ಅನೇಕ ಮೌಲ್ವಿಗಳು ಭಾಗವಹಿಸಿದ್ದರು.

ಭಾನುವಾರ ಶ್ರೀ ಸತ್ಯನಾರಾಯಣ ಸ್ವಾಮಿ ಪೂಜೆ ನಡೆಯಿತು. ಕಲಾವಿದ ಪ್ರಸನ್ನ ತಂಡ ಸ್ಯಾಕ್ಸೋಫೋನ್ ಕಾರ್ಯಕ್ರಮ ನಡೆಸಿಕೊಟ್ಟರು. ಎರಡು ದಿನ ನಡೆದ ಕಾರ್ಯಕ್ರಮ ದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಮಂದಿ ಸಿಹಿ ಊಟ ಸವಿದರು.

**ಸಾವಿರಾರು ಮಂದಿ ಅಭಿನಂದನೆ:** ಭಾನುವಾರ ನಡೆದ ಪೂಜೆಯ ನಂತರ ಎಂಎಲ್‌ಸಿ ಸೀತಾರಾಮ್, ಕೆ.ವಿ.ಪ್ರಭಾಕರ್, ರಾಜ್ಯ ಕುರುಬರ ಸಂಘದ ಸುಬ್ರಹ್ಮಣ್ಯ, ಬಿಳಿಗೆರೆ ಮಾದೇಗೌಡ, ಈಚೂರು ಲೋಕೇಶ್, ಮಾಜಿ ನಿರ್ದೇಶಕ ಅಮಿತ್ ದೇವರಹಟ್ಟಿ ಉಪವಿಭಾಗಾಧಿಕಾರಿ ಕಾವ್ಯರಾಣಿ ಸೇರಿದಂತೆ ಅಧಿಕಾರಿ ವೃಂದ, ವಿವಿಧ ರಾಜಕೀಯ ಪಕ್ಷಗಳ ಮುಖಂಡರು, ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಹತ್ತು ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

# ರಾಜ್ಯ ಪತ್ರಕರ್ತರ ಸಮ್ಮೇಳನಕ್ಕೆ ಸಭಾಪತಿಗೆ ಆಹ್ವಾನ




• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಿಂದ ಈ ಬಾರಿ ಬೀದರದಲ್ಲಿ ಆಯೋಜಿಸಲಾಗುತ್ತಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಭಾಗವಹಿಸುವಂತೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ನೇತೃತ್ವದ ತಂಡ ಮನವಿ ಮಾಡಿತು.

ಸಂಘದ ಮನವಿಗೆ ಪ್ರತಿಕ್ರಿಯಿಸಿದ ಸಭಾಪತಿ ಹೊರಟ್ಟಿ ಅವರು, ಇದೇ 23ಕ್ಕೆ ಬೀದರ್ ಬರುತ್ತಿದ್ದೇನೆ. ಈ ಸಂದರ್ಭದಲ್ಲಿ ಸಮ್ಮೇಳನದ ಪೂರ್ವಭಾವಿಯಾಗಿ

ಬೀದರ್ ಪತ್ರಿಕಾ ಭವನದಲ್ಲಿ ಫೆ.23ಕ್ಕೆ ಆಯೋಜಿಸುವ ಕಾರ್ಯಕ್ರಮದಲ್ಲಿಯೂ ಭಾಗವಹಿಸುವುದಾಗಿ ಭರವಸೆ ನೀಡಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಹಿಂದೆ ಆಯೋಜಿಸಿದ್ದ ರಾಜ್ಯ ಸಮ್ಮೇಳನಕ್ಕೆ ಬಂದಿದ್ದೇನೆ. ಬೀದರ್ ಸಮ್ಮೇಳನಕ್ಕೂ ಬರುವೆ ಎಂದು ಹೇಳಿದರು.

ಕೆಯುಡಬ್ಲ್ಯೂಜೆ ಕಾರ್ಯದರ್ಶಿ ಸೋಮಶೇಖರ ಕೆರಗೋಡು, ಬೀದರ್ ಜಿಲ್ಲಾ ಘಕದ ಜಿಲ್ಲಾಧ್ಯಕ್ಷ ಅನಂದ ದೇವಪ್ಪ, ಸಮಿತಿ ಸದಸ್ಯರಾದ ಅಪ್ಪಾರಾವ ಸೌದಿ, ಪತ್ರಕರ್ತ ನಂದಕುಮಾರ ಕರಂಜಿ, ಮಂಡ್ಯ ಜಿಲ್ಲಾ ಮಾಜಿ ಅಧ್ಯಕ್ಷ ಮಂಜುನಾಥ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಸಮಗ್ರ ಕೃಷಿ ಸಮೂಹಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆ: ಸಂಸದ

• ಮಲ್ಲಮ್ಮ ನುಡಿ ವಾರ್ತೆ ಬೀದರ್

"ಜಿಲ್ಲೆಯ ರೈತ ಬಾಂಧವರ ಆರ್ಥಿಕ ಸಬಲೀಕರಣ ಮತ್ತು ಕೃಷಿ ಚಟುವಟಿಕೆಗಳಿಗೆ ಹೆಚ್ಚಿನ ವೇಗ ನೀಡಲು ಜಾರಿಗೆ ತಂದಿರುವ 'ಸಮಗ್ರ ಕೃಷಿ ಸಮೂಹಗಳ ಯೋಜನೆ' ಅಡಿಯಲ್ಲಿ ಜಿಲ್ಲೆಯ ಪ್ರಮುಖ ಒಕ್ಕೂಟಗಳಿಗೆ ಅನುದಾನದ ಚೆಕ್ ವಿತರಿಸುವ ಮೂಲಕ ಕೃಷಿ ವಲಯದ ಬಲವರ್ಧನೆಗೆ ಆದ್ಯತೆ ನೀಡಲಾಗುತ್ತಿದೆ," ಎಂದು ಬೀದರ್ ಲೋಕಸಭಾ ಕ್ಷೇತ್ರದ ಸಂಸದರಾದ ಶ್ರೀ ಸಾಗರ್ ಖಂಡ್ರೆ ಅವರು ತಿಳಿಸಿದರು.

ಈ ಕುರಿತು ಮಾಹಿತಿ ನೀಡಿದ ಅವರು, ಜಿಲ್ಲೆಯಲ್ಲಿ ಒಟ್ಟು 24 ಕ್ಲಸ್ಟರ್‌ಗಳನ್ನು ಈ ಯೋಜನೆಯಡಿ ಆಯ್ಕೆ ಮಾಡಲಾಗಿದ್ದು, ಮೊದಲ ಹಂತದಲ್ಲಿ ಆಯ್ದ 8 ಕ್ಲಸ್ಟರ್‌ಗಳಿಗೆ ತಲಾ ₹20 ಲಕ್ಷದಂತೆ ಒಟ್ಟು ₹1.60 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.




ಈಗಾಗಲೇ ಮೊದಲ ಹಂತದಲ್ಲಿ ಜಿಲ್ಲೆಯ ಹುಮ್ನಾಬಾದ್, ಬಸವಕಲ್ಯಾಣ, ಔರಾದ್, ಕಮಲನಗರ ಮತ್ತು ಭಾಲ್ಕಿ ತಾಲೂಕಿನ ಐದು ಕ್ಲಸ್ಟರ್‌ಗಳಿಗೆ ತಲಾ ₹20 ಲಕ್ಷ ಅನುದಾನ ತಲುಪಿದೆ. ಉಳಿದ ಮೂರು ಪ್ರಮುಖ ತಾಲೂಕುಗಳ ಒಕ್ಕೂಟಗಳಿಗೆ ಇಂದು ಸಂಸದರ ಹಸ್ತದಿಂದ ಚೆಕ್‌ಗಳನ್ನು ವಿತರಿಸಲಾಯಿತು:

**1. ಶ್ರೀ ಕೃಷ್ಣ ಸಂಜೀವಿನಿ GPLF, ಜನವಾಡಾ (ಬೀದರ್ ತಾಲೂಕು)**

**2. ನಿರ್ಣ ಸಂಜೀವಿನಿ GPLF, ನಿರ್ಣಾ (ಚಿಟಗುಪ್ಪಾ ತಾಲೂಕು)**

**3. ವೈಭವಿ ಸಂಜೀವಿನಿ GPLF, ಗೋರ್ಟಾ (ಹುಲಸೂರು ತಾಲೂಕು)**

"ಸಂಘಟಿತ ಕೃಷಿ ಪದ್ಧತಿಯ ಮೂಲಕ ರೈತರು ಸ್ವಾವಲಂಬಿಗಳಾಗಬೇಕು ಹಾಗೂ ಸರ್ಕಾರಿ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು. ಜಿಲ್ಲೆಯ ಪ್ರತಿಯೊಂದು ಕೃಷಿ ಸಮೂಹವು ಅಭಿವೃದ್ಧಿ ಪಥದಲ್ಲಿ ಸಾಗುವಂತೆ ಮಾಡಲು ನಾವು ಬದ್ಧರಾಗಿದ್ದೇವೆ," ಎಂದು ಸಂಸದರು ಇದೇ ಸಂದರ್ಭದಲ್ಲಿ ಆಶಯ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಂಬಂಧಪಟ್ಟ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟದ (ಉಕಐಈ) ಪದಾಧಿಕಾರಿಗಳು, ಕೃಷಿ ಇಲಾಖೆಯ ಅಧಿಕಾರಿಗಳು ಹಾಗೂ ಪ್ರಮುಖ ಮುಖಂಡರು ಉಪಸ್ಥಿತರಿದ್ದರು.

# ಅಭಿವೃದ್ಧಿ ಕಾಮಗಾರಿಗಳಿಗೆ 6 ಕೋಟಿ ರೂಗಳ ವೆಚ್ಚ: ಸಚಿವ

• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ

ಬಿಜೆಪಿಯವರು ಜಾತಿಗಳ ಮಧ್ಯೆ ವಿಷಬೀಜ ಬಿತ್ತುವ ಕೆಲಸ ಮಾಡುತ್ತಿದ್ದಾರೆ. ಆದರೆ ಕಾಂಗ್ರೆಸ್ ಸರ್ಕಾರ ಸಾಮಾಜಿಕ ನ್ಯಾಯದ ಹಾದಿಯಲ್ಲಿ ಸಾಗುತ್ತಿದ್ದು, ನುಡಿದಂತೆ ನಡೆಯುತ್ತಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇರುವವರೆಗೂ ಗ್ಯಾರಂಟಿ ಯೋಜನೆಗಳು ಮುಂದುವರಿಯಲಿವೆ," ಎಂದು ಜಿಲ್ಲಾ ಉಸ್ತುವಾರಿ ಹಾಗೂ ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಹೇಳಿದರು.

ಸೋಮವಾರ ಪಟ್ಟಣದ ಪುರಸಭೆ ಆವರಣದಲ್ಲಿ ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಯಾದಗಿರಿ ವತಿಯಿಂದ ಹಮ್ಮಿಕೊಂಡಿದ್ದ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಯೋಜನೆಯ 2025–26 ನೇ ಸಾಲಿನ 6 ಕೋಟಿ ವೆಚ್ಚದ ಪುರಸಭೆ ವ್ಯಾಪ್ತಿಯ ವಿವಿಧ ವಾರ್ಡಗಳ ಸಿಸಿ ರಸ್ತೆ, ಚರಂಡಿ ಹಾಗೂ ವಿದ್ಯುತ್ತೀಕರಣ ಕಾಮಗಾರಿಗಳಿಗೆ ಅಡಿಗಲ್ಲು ನೆರವೇರಿಸಿ ಅವರು ಮಾತನಾಡಿದರು.

ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಚುನಾವಣಾ ಭರವಸೆಗಳನ್ನು ಈಡೇರಿಸಿದೆ ಎಂದು ಪುನರುಚ್ಚರಿಸಿದ ಸಚಿವರು, "ಅನ್ನಭಾಗ್ಯ ಯೋಜನೆಯಡಿ ಅಕ್ಕಿ ನೀಡಲು ಕೇಂದ್ರ ಸರ್ಕಾರ ಸಹಕರಿಸದಿದ್ದರೂ, ನಾವು ಡಿಬಿಟಿ ಮೂಲಕ ಹಣ ನೀಡುತ್ತಿದ್ದೇವೆ. ಶೀಘ್ರದಲ್ಲೇ ಅಕ್ಕಿಯ ಬದಲಾಗಿ ಬೇಳೆ, ಸಕ್ಕರೆ, ಉಪ್ಪು ಮತ್ತು ಎಣ್ಣೆಯನ್ನೊಳಗೊಂಡ ಇಂದಿರಾ ಕಿಟ್ ನೀಡುವ ಬಗ್ಗೆ ಕ್ಯಾಬಿನೆಟ್‌ನಲ್ಲಿ



**ನೂತನ ಸರ್ಕಾರಿ ಹೋಮಿಯೋಪತಿ ಕೇಂದ್ರ ಉದ್ಘಾಟನೆ**

**ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಸೋಮವಾರ ಕೆಂಭಾವಿ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಹೆಚ್ಚುವರಿ ಕೋಣೆಗಳ ಕಟ್ಟಡ ಕಾಮಗಾರಿಯನ್ನು ವೀಕ್ಷಿಸಿ ನಂತರ ಆಸ್ಪತ್ರೆಯಲ್ಲಿ ಆಯುಷ್ ಇಲಾಖೆಯ ನೂತನ ಸರ್ಕಾರಿ ಹೋಮಿಯೋಪತಿ ಕೇಂದ್ರ ಉದ್ಘಾಟನೆ ಮಾಡಿದರು.**

ಚರ್ಚೆಯಾಗಿದ್ದು, ಶೀಘ್ರ ಜಾರಿಗೆ ಬರಲಿದೆ ಎಂದರು.

**ರಸ್ತೆ ಮತ್ತು ಮೂಲಸೌಕರ್ಯಗಳ ಅಭಿವೃದ್ಧಿ:** ಮಲ್ಲಾ ಕ್ರಾಸ್ ದಿಂದ ಕೆಂಭಾವಿ ₹5 ಕೋಟಿ ಹಾಗೂ ₹7 ಕೋಟಿ ವೆಚ್ಚದ ಕಾಮಗಾರಿಗಳು ಪ್ರಗತಿಯಲ್ಲಿವೆ.

ಕೆಂಭಾವಿ– ತಿಪನಟಗಿ ಕ್ರಾಸ್; 8 ಕೋಟಿ ವೆಚ್ಚದ ರಸ್ತೆ ಕಾಮಗಾರಿ ಟೆಂಡರ್ ಹಂತದಲ್ಲಿದೆ.

ಧಾರ್ಮಿಕ ಕೇಂದ್ರಗಳು ಮತ್ತು ಸಮುದಾಯ ಭವನಗಳ ಅಭಿವೃದ್ಧಿಗೂ ಹೆಚ್ಚಿನ ಅನುದಾನ ನೀಡಲಾಗಿದೆ ಎಂದು ಸಚಿವರು ತಿಳಿಸಿದರು.

ಕಾರ್ಯಕ್ರಮದ ಪ್ರಾಸ್ತಾವಿಕ ಮಾತುಗಳನ್ನು ವಾಮನರಾವ್ ದೇಶಪಾಂಡೆ ಆಡಿದರು. ಜಿ.ಪಂ ಮಾಜಿ ಅಧ್ಯಕ್ಷ ಸಿದ್ದನಗೌಡ ಪೊ. ಪಾಟೀಲ್, ಪುರಸಭೆ ಅಧ್ಯಕ್ಷೆ ಪ್ರಿಯಾ ರಾಮನಗೌಡ ಪಾಟೀಲ್, ಉಪಾಧ್ಯಕ್ಷೆ ಲಕ್ಷ್ಮೀಬಾಯಿ ಕಂಬಾರ, ಬಾಪುಗೌಡ ಪಾಟೀಲ್ ಅಗತೀರ್ಥ, ಬಸನಗೌಡ ಹೊಸಮನಿ, ಮುಖ್ಯಾಧಿಕಾರಿ ಮಹ್ಮದ್ ಯೂಸೂಫ್, ಸಹಾಯಕ ಅಭಿಯಂತರ ಬಾಪುಗೌಡ ಪಾಟೀಲ್, ಸಂಗನಗೌಡ ಮರಡ್ಡಿ, ಹಣಮಂತ್ರಾಯ ಮಾನಸುಣಗಿ, ಪುರಸಭೆ ಸರ್ವ ಸದಸ್ಯರು ಪಕ್ಷದ ಕಾರ್ಯಕರ್ತರು ಇತರರು ಇದ್ದರು. ಪರಶುರಾಮ ಸ್ವಾಗತಿಸಿದರು, ಬಂದೇನಾವಾಜ ನಾಲತವಾಡ ನಿರೂಪಿಸಿ ವಂದಿಸಿದರು.

**ಕೆಂಭಾವಿ ಪಟ್ಟಣಕ್ಕೆ ಸುಮಾರು 48 ಕೊ. ವೆಚ್ಚದಲ್ಲಿ 3 ಓವರ್ ಹೆಡ್ ಟ್ಯಾಂಕ್‌ಗಳು ಮತ್ತು ಹೊಸ ಪೈಪ್‌ಲೈನ್ ಅಳವಡಿಸುವ ಯೋಜನೆ ಪೂರ್ಣಗೊಳ್ಳುವ ಹಂತದಲ್ಲಿದೆ. ಇದರ ಮೂಲಕ ಸುಮಾರು 4050 ಮನೆಗಳಿಗೆ ನಲ್ಲಿ ಸಂಪರ್ಕ ನೀಡುವ ಗುರಿ ಹೊಂದಲಾಗಿದೆ. ಕಾಮಗಾರಿಗಳು ಗುಣಮಟ್ಟದಿಂದ ಕೂಡಿದ್ದರೆ ಮಾತ್ರ ಜನಪ್ರತಿನಿಧಿಗಳಿಗೆ ಒಳ್ಳೆಯ ಹೆಸರು ಬರಲು ಸಾಧ್ಯ ಎಂದು ಸಚಿವರು ಕಿವಿಮಾತು ಹೇಳಿದರು.**

**–ಶರಣಬಸಪ್ಪಗೌಡ ದರ್ಶನಾಪುರ, ಸಚಿವ**



Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)